# ಅಪರಂಜಿ

ತಿಳಿನಗೆಯ ಕಾರಂಜಿ

ಜೂನ್ - 2016

ವಿಜ್ಞಾನ ವಿಶೇಷ





# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 33
ಸಂಚಿಕೆ - 9
ಜೂನ್ - 2016

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ:ರೂ. 750/-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

## *ಈ ಸಂಚಿಕೆಯಲ್ಲಿ .....*

### ★★ ವಿಜ್ಞಾನ ವಿಶೇಷ ★★


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ತಂತಿಯ ಮೇಲಿನ...... | **ಶಿವಕುಮಾರ್** | 4 |
| ನೀಹಾರಿಕೆಗಳ ನಡುವೆ | **ವಾಣಿ ಸುರೇಶ್** | 7 |
| ಆಪರೇಷನ್ ಹಿಟ್ ಬ್ಯಾಕ್ | **ಇ.ಆರ್. ರಾಮಚಂದ್ರನ್** | 12 |
| ತುಂಬಾ ತೀರದಲ್ಲಿ... | **ಸಿ.ಆರ್. ಸತ್ಯ** | 16 |
| ಬಾಸ್ ಮನೆ..... | **ಸುಧೀಂದ್ರ ಹಾಲ್ದೊಡ್ಡೇರಿ** | 22 |
| ಕೈಲಾಸಂ ಕೈ ಕೊಳೆ.... | **ಟಿ.ಆರ್. ಅನಂತರಾಮು** | 28 |
| ತುಂತುರು | **ದಂನಾಆ** | 34 |
| ಮಾನವೀಯತೆ | **ಬೇಲೂರು ರಾಮಮೂರ್ತಿ** | 35 |
| ನಟನೊಬ್ಬನ ಹೀರೋಗಿರಿ | **ಎಂ.ಕೆ. ಭಾಸ್ಕರ ರಾವ್** | 38 |


**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**


ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003. email: koravanji42@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ನನಗೆ ಯಾರ ಭಯವೂ ಇಲ್ಲ – ಸೋನಿಯಾಗಾಂಧಿ

***● ನಮಗೆ ಅದೇ ಭಯ !!***

★★★

ಆರ್.ಸಿ.ಬಿ. ಆಟಕ್ಕೂ, ಮಲ್ಯ ಅವರ ಪ್ರವಾಸಕ್ಕೂ ಸಂಬಂಧ ಇಲ್ಲವಂತೆ !!

★★★

ಬೋಗಸ್ ಲೆಕ್ಕ ಕೊಡ್ಬೇಡಿ, ಜಗತ್ತು ನಂಬಲ್ಲ – ಸಿ.ಎಂ.

***● ಕಠೋರ ಸತ್ಯ ಎಂದರೆ ಇದೇ !!***

★★★

ಹೆಲಿಕಾಪ್ಟರ್ ಹಗರಣ; ತೇಜೋವಧೆ ಪ್ರಯತ್ನ – ಕಾಂಗ್ರೆ

***● ಇಲ್ಲದ ತೇಜಸ್ಸನ್ನು ವಧೆ ಮಾಡೋದು ಹೇಗೆ ?!***

★★★

ನಕಲಿ ಸರಕು ರಫ್ತು; ಭಾರತಕ್ಕೆ ಐದನೇ ಸ್ಥಾನ – ಪತ್ರಿಕೆ

***● ಚೀನಾ ಒಂದನೇದು ಎಂಬುದೇ ನಮಗೆ ಸಮಾಧಾನ !!***

★★★

ಮಹಾಕಾವ್ಯದ ರಚನೆ ಕಷ್ಟದ ಕೆಲಸ – ಹೇಳಿಕೆ

***● ನಮಗೂ ಹಾಗೇ ಕಾಣತ್ತೆ !!***

★★★

ಮೈಸೂರು ಅರಮನೆ ವಿಧಾನಸೌಧವಾಗಬೇಕಾಗಿತ್ತು – ಹೇಳಿಕೆ

***● ಅಲ್ಲಿ ಸಾಕಷ್ಟು ಟೇಬಲ್‌ಗಳ ಕೊರತೆ ಇತ್ತಲ್ಲ ?!***

★★★

ಖರ್ಗೆ ಅವರನ್ನೇ ಮುಖ್ಯ ಮಂತ್ರಿಯನ್ನಾಗಿ ಘೋಷಿಸಿ – ಸ್ವಾಮೀಜಿ

***● ಇದಕ್ಕೆ 'ಸಿದ್ಧ'ತೆ ಬೇಕಿಲ್ಲ !?***

★★★

# ನಮ್ಮ ನಿಮ್ಮಲ್ಲಿ

**ಈ** ತಿಂಗಳ ಸಂಚಿಕೆಯಲ್ಲಿ ವಿಜ್ಞಾನ ಸಂಬಂಧಿತ ವಿಷಯಗಳನ್ನು ಆಧರಿಸಿ ಬರೆದ ಲೇಖನಗಳನ್ನು ಕಲೆಹಾಕುವ ಯತ್ನ ನಡೆದಿದೆ. ವಿಜ್ಞಾನದಂತಹ ಗಂಭೀರವಾದ ಅಭ್ಯಾಸದ ನಡುವೆಯೂ ಹಾಸ್ಯಮನೋಭಾವವನ್ನು ಉಳಿಸಿ, ಬೆಳೆಸಿಕೊಳ್ಳುವುದು ಅಂತಹ ಸುಲಭದ ಕಾರ್ಯವಲ್ಲ. ಅದಕ್ಕೆ ಬಹು ನವಿರಾದ ಹಾಸ್ಯಪ್ರಜ್ಞೆ ಅಗತ್ಯ. ಈ ಬಾರಿಯ ಎಲ್ಲ ಲೇಖಕರೂ ಆ ಪ್ರಜ್ಞೆಯನ್ನು ಬಹು ಸಮರ್ಥವಾಗಿ ಪ್ರದರ್ಶಿಸಿದ್ದಾರೆ  ಎಂದು ಹೇಳಬಹುದು.

ಶ್ರೀಮತಿ ವಾಣೀ ಸುರೇಶ್ ರವರು ಅಪಂಜಿಯ ಓದುಗರಿಗೆ ತಮ್ಮ ''ಅಮೆರಿಕಾ ಪತ್ರ'' ಸರಣಿಯ ಮೂಲಕ ಪರಿಚಿತರು. ಇವರ ಬಹುಮುಖಿ ಆಸಕ್ತಿಗಳಲ್ಲಿ ಖಗೋಳ ಶಾಸ್ತ್ರವೂ ಒಂದು. ಕ್ಯಾಲಿಫೋರ್ನಿಯಾದಲ್ಲಿ ತಾವು ನಡೆಸಿದ ನಕ್ಷತ್ರ ವೀಕ್ಷಣೆಯನ್ನು ಕುರಿತು ಒಂದು ಬಹು ಸೊಗಸಾದ ಲೇಖನವನ್ನು ಇವರು ಅಪರಂಜಿಗೆ ಒದಗಿಸಿದ್ದಾರೆ. ಶ್ರೀಮಾನ್ ಸತ್ಯರವರು ಅಪರಂಜಿಯ ರೆಗ್ಯುಲರ್ ಬರಹಗಾರರು. ಇವರು ರಾಕೆಟ್ ವಿಜ್ಞಾನಿಯೂ ಆಗಿದ್ದು ಬಹುಕಾಲ ಐ.ಎಸ್.ಆರ್.ಓ. ಸಂಸ್ಥೆಯಲ್ಲಿ ಉನ್ನತ ಅಧಿಕಾರಿಗಳಾಗಿದ್ದವರು. ಖ್ಯಾತ ವಿಜ್ಞಾನಿ ಅಬ್ದುಲ್ ಕಲಾಮ್ ಅವರ ನಿರ್ದೇಶನದಲ್ಲಿ ಇವರ ಕ್ಷಿಪಣಿ ವಿಜ್ಞಾನದ ತರಬೇತಿ ನಡೆಯಿತು. ತಮ್ಮ ಆ ದಿನಗಳ ನೆನಪನ್ನು ತಮ್ಮದೇ ಆದ ಶೈಲಿಯಲ್ಲಿ ಇವರು ಹಂಚಿಕೊಂಡಿರುವ ಬರಹವನ್ನು ಈ ಸಂಚಿಕೆಯಲ್ಲಿ ನೋಡಬಹುದು. ಕನ್ನಡ ಸಾರಸ್ವತ ಲೋಕದಲ್ಲಿ ವಿಜ್ಞಾನ ಬರಹಗಳಿಗೆ ಹೆಸರುವಾಸಿಯಾದ ಇಬ್ಬರು ಲೇಖಕರೆಂದರೆ, ಸುಧೀಂದ್ರ ಹಾಲ್ದೊಡ್ಡೇರಿ ಮತ್ತು ಟಿ.ಆರ್. ಅನಂತರಾಮು. ಗೆಳೆಯ ಸತ್ಯ ಅವರ ನೆರವಿನಿಂದ ಈ ಇಬ್ಬರೂ ಮಹನೀಯರಿಂದ ಲೇಖನಗಳನ್ನು ಆಹ್ವಾನಿಸಿ ಪಡೆದದ್ದಾಯಿತು. ಇ.ಆರ್. ರಾಮಚಂದ್ರನ್  ಬರೆದಿರುವ ''ಆಪರೇಷನ್ ಹಿಟ್ ಬ್ಯಾಕ್'' ನಮ್ಮ ವಿಜ್ಞಾನ ವಿಧಾನಗಳ ಸೊಗಸಾದ ಪ್ಯಾರೊಡಿ.

ಈ ಎಲ್ಲ ಬರಹಗಾರ್ತಿ, ಬರಹಗಾರರಿಗೂ ಅಪರಂಜಿಯ ತುಂಬು ಹೃದಯದ ಕೃತಜ್ಞತೆಗಳು.

ನನ್ನ ಸಾಹಿತ್ಯ ರಚನೆಯ ಹಾದಿಯಲ್ಲಿ ನನ್ನ ಮೇಲೆ ಬಹುವಾಗಿ ಪ್ರಭಾವ ಬೀರಿದ ವ್ಯಕ್ತಿಗಳಲ್ಲಿ ತೇಜಸ್ವಿಯವರು ಪ್ರಮುಖರು. ಅವರ ಸಲಹೆಯ ಮೇರೆಗೆ ನಾನು, ಸೈಕಲ್ಲಿನ ಎಲ್ಲ ಆಯಾಮಗಳನ್ನೂ ಚಿತ್ರಿಸುವ ''ಸೈಕಲ್‌ವಾಲಾ'' ಎಂಬ ಪುಸ್ತಕವನ್ನು ಬರೆದಿದ್ದೆ. ಬ್ಯಾಲೆನ್ಸಿಂಗ್ ಬಗ್ಗೆ ಅದರಲ್ಲಿ ಬರೆದಿದ್ದ ಭಾಗವೊಂದನ್ನು ಈ ಸಂಚಿಕೆಯಲ್ಲಿ ಅಳವಡಿಸಿರುವೆ.

ನಮಗೆ ಇದೊಂದು ಹೊಸ ಪ್ರಯೋಗ. ಓದುಗರಾದ ನಿಮಗೆಲ್ಲಾ ಈ ಪ್ರಯೋಗ ಖುಷಿ ಕೊಟ್ಟರೆ, ನಮ್ಮ ಯತ್ನ ಸಾರ್ಥಕ.

**ಶಿವಕುಮಾರ್**

# ತಂತಿಯ ಮೇಲಿನ ಚೆಲುವೆ

**- ಶಿವಕುಮಾರ್**

*(ಹಿಂದೊಮ್ಮೆ ತೇಜಸ್ವಿಯವರು, ''ಸೈಕಲ್ ಸನ್ನಿಧಿಯಲ್ಲಿ ನೀವು ಎಷ್ಟೊಂದು ಸಾಮಾಜಿಕ, ಸೈದ್ಧಾಂತಿಕ, ತಾತ್ವಿಕ ವಿಷಯಗಳನ್ನೆಲ್ಲಾ ತಿಳಿಸಬಹುದು ಯೋಚಿಸಿ'' ಎಂದು ಪ್ರಚೋದಿಸಿ ಸೈಕಲ್ ವೃತ್ತಾಂತವನ್ನು ತಿಳಿಯ ಹೇಳುವ, 'ಸೈಕಲ್‌ವಾಲಾ' ಎಂಬ ಪುಸ್ತಕವನ್ನು ನನ್ನಿಂದ ಬರೆಸಿದರು. ಆ ಪುಸ್ತಕದಿಂದ ಆಯ್ದ ಒಂದು ಭಾಗ)*

**ಬೆಂ**ಗಳೂರು ಬಸ್ ನಿಲ್ದಾಣದ ನಿರ್ಮಾಣಕ್ಕೆ ಮೊದಲು ಧರ್ಮಾಂಬುಧಿ ಕೆರೆಯ ಅಂಗಳ ಒಂದು ಬಹು ದೊಡ್ಡ ಮೈದಾನ. ಹಿಂದೊಮ್ಮೆ ಈ ಮೈದಾನದಲ್ಲಿ ಸರ್ಕಸ್ ಕಂಪನಿಯೊಂದು ಬೀಡು ಬಿಟ್ಟಿತ್ತು. ಆ ಸರ್ಕಸ್‌ನ ವೈಭವ ಹೇಳತೀರದು. ಆ ಸರ್ಕಸ್ ಕಂಪನಿಯವರು ಸೈನ್ಯದಿಂದ ಕೊಂಡು ತಂದಿದ್ದ ಎರಡು ಸರ್ಚ್ ಲೈಟ್‌ಗಳನ್ನು ಕೆರೆಯ ಅಂಗಳದಲ್ಲಿ ಸ್ಥಾಪಿಸಿದ್ದರು. ಬೆಂಗಳೂರಿನ ರಾತ್ರಿಯ ಆಕಾಶದಲ್ಲಿ, ಆ ದೀಪಗಳ ಹೊನಲು ಬೆಳಕಿನ ಎರಡು ತೊರೆಗಳನ್ನು ಆಕಾಶದಲ್ಲೆಲ್ಲಾ ಹಾರಾಡಿಸಿ ಬೊಮ್ಮನಹಳ್ಳಿಯ ಕಿಂದರಿಜೋಗಿಯಂತೆ ಆ ಸರ್ಕಸ್ಸನ್ನು ನೋಡಲು ಊರಿನ ಮಕ್ಕಳನ್ನೆಲ್ಲಾ ಆಹ್ವಾನಿಸುತ್ತಿದ್ದವು. ನನಗೆ ಆಗಿನ್ನೂ ಹತ್ತು ವರುಷ ವಯಸ್ಸು. ಒಂದು ಸಂಜೆ ನಮ್ಮಪ್ಪನನ್ನು ಕಾಡಿ ಬೇಡಿ ಕೊನೆಗೂ ಆ 'ಸಂಜೆಯ ಆಟ'ಕ್ಕೆ ನಾವೆಲ್ಲಾ ಹೊರಟೆವು. ಸರ್ಕಸ್ ಸಮೀಪಿಸುತ್ತಿದ್ದಂತೆ ದೂರದಿಂದಲೇ ''ಕಮಲಾ ತ್ರೀರಿಂಗ್ ಸರ್ಕಸ್'' ಎಂದು ಸಾರಿ ಹೇಳುವ ಬ್ಯಾನರ್‌ಗಳು ಮೈದಾನದಲ್ಲೆಲ್ಲಾ ತುಂಬಿದ್ದವು. ಬೃಹತ್ತಾದ ಸರ್ಕಸ್ ಡೇರೆ, ಮೈಸೂರು ಅರಮನೆಯಂತೆ ಡೇರೆಯ ಹೊರ ಅಂಚಿಗೆ ಝುಗಝುಗಿಸುವ ದೀಪಾಲಂಕಾರ, ಆಳದಿಂದ ಸಣ್ಣದಾಗಿ ಪ್ರಾರಂಭವಾಗಿ ಕೊನೆಗೆ ಎದೆ ನಡುಗಿಸುವ ಹೂಂಕಾರವಾಗುವ ಸಿಂಹಗಳ ಘರ್ಜನೆ, ಆನೆ ಲದ್ದಿಯ ವಾಸನೆ! ಈ ಎಲ್ಲ ಪರಿಸರದಲ್ಲಿ ನಮ್ಮಪ್ಪ ಟಿಕೆಟ್ ಖರೀದಿಸಿದ ನಂತರ ನಾವೆಲ್ಲಾ ಸರ್ಕಸ್ ಡೇರೆಯೊಳಗೆ ಪ್ರವೇಶಿಸುತ್ತಿದ್ದಂತೆ ಒಂದು ದಿಗ್ವಿಜಯದ ಭಾವನೆ ನನ್ನನ್ನು ಆವರಿಸಿತ್ತು.

ಸರ್ಕಸ್‌ನ ಮಧ್ಯೆ ಇದ್ದ ರಂಗದ ಆಚೆ ಭಾಗದಲ್ಲಿ ಕಲಾವಿದರು ರಂಗಪ್ರವೇಶ ಮಾಡಲು ಅನುಕೂಲವಾಗುವಂತೆ ತೆರೆ ಮುಚ್ಚಿದ್ದ ಒಂದು ದ್ವಾರ. ಆ ದ್ವಾರದ ಮೇಲ್ಭಾಗದಲ್ಲಿ ಒಂದು ಅಟ್ಟಣೆ. ಅಟ್ಟಣೆಯ ಮೇಲೆ ಬ್ಯಾಂಡ್ ಬಾರಿಸುವವರ ಗುಂಪೊಂದು ಕುಳಿತು ಯಾವುದೋ ಸರ್ಕಸ್ ಟ್ಯೂನ್ ಒಂದನ್ನು ಬಾರಿಸುತ್ತಿತ್ತು. ಗ್ಯಾಲರಿಗಳಲ್ಲಿ ಕಿಕ್ಕಿರಿದು ತುಂಬಿದ್ದ ಜನಸ್ತೋಮ. ಈ ಸರ್ಕಸ್ ವಾತಾವರಣವನ್ನೆಲ್ಲಾ ನಾನು ತುಂಬು ಉಸಿರಿನಿಂದ ಒಳಕ್ಕೆಳೆದುಕೊಳ್ಳುತ್ತಿದ್ದಂತೆ 'ಆಟ' ಶುರುವಾಯಿತು. ಮೊದಲನೇ ಆಟವೇ ತಂತಿಯ ಮೇಲೆ ಸೈಕಲ್. ಈ ಆಟಕ್ಕೆ ಪೂರ್ವ ಸಿದ್ಧತೆಯಾಗಿ ಮಧ್ಯದ 'ರಿಂಗ್'ನ ಎರಡು ತುದಿಗಳಲ್ಲಿ ಎರಡು ಕವೆಗೋಲುಗಳನ್ನು ನಿಲ್ಲಿಸಿ ಆ ಕವೆಗೋಲುಗಳ ತುದಿಗಳನ್ನು ಒಂದು ತಂತಿಯಿಂದ ಬಲವಾಗಿ ಬಂಧಿಸಿದ್ದರು. ನೋಡುತ್ತಿದ್ದಂತೆ ಬಿಳೀ ಫ್ರಾಕ್ ತೊಟ್ಟ ಒಬ್ಬ ತರುಣಿ ಓಡುತ್ತಾ ಬಂದು ತಂತಿಯ ಕೆಳಗೆ ನಿಂತಳು. ಅವಳೊಂದಿಗೆ ಬಂದ ನಕಲಿಶಾಮನೊಬ್ಬ ಟಯರಿಲ್ಲದ ಸೈಕಲ್



ಒಂದನ್ನು ಅನಾಮತ್ತಾಗಿ ಎತ್ತಿ, ತಂತಿಯ ಮೇಲೆ ಕೂರಿಸಿದ. ಇನ್ನೊಬ್ಬ ನಕಲಿಶಾಮ ಹಿಡಿದಿದ್ದ ಏಣಿಯೊಂದನ್ನು ಆ ತರುಣಿ ಸರಸರನೆ ಏರಿ ಸೈಕಲ್ ಹತ್ತಿ ಕುಳಿತಳು. ಕೆಳಗೆ ನಿಂತಿದ್ದ ಬೇರೊಬ್ಬ ಸಹಾಯಕ ಎರಡು ತುದಿಗಳಿಗೂ ಭಾರಗಳನ್ನು ಕಟ್ಟಿದ್ದ ಉದ್ದವಾದ ಗಳುವೊಂದನ್ನು ಅವಳ ಕೈಗೆ ಕೊಟ್ಟ. ಆ ತರುಣಿ ಆ ಗಳುವನ್ನು ನೆಲಕ್ಕೆ ಸಮಾನಾಂತರ ವಾಗಿರುವಂತೆ ಹಿಡಿದು ಠೀವಿಯಿಂದ ಕತ್ತನ್ನು ಸ್ವಲ್ಪ ಕೊಂಕಿಸಿದ ತಕ್ಷಣ ಸೈಕಲ್ ಹಿಡಿದಿದ್ದ ನಕಲಿಶಾಮ ಸೈಕಲ್ ಬಿಟ್ಟು ದೂರ ಸರಿದ. ಬ್ಯಾಂಡ್ 'ಢಂ' ಎಂದು ಬಾರಿಸಿತು. ತರುಣಿ ಕೈಲಿದ್ದ ಗಳುವನ್ನು ಹಾಗೂ ಹೀಗೂ ಆಡಿಸುತ್ತಾ ನಿಧಾನವಾಗಿ ಸೈಕಲ್ ಪೆಡಲ್ ತುಳಿದಳು. ತಂತಿಯ ಮೇಲೆ ಸೈಕಲ್ ಮುಂದೆ ಚಲಿಸಿತು. ಆ ತರುಣಿ ಸೈಕಲ್ ನಡೆಸುತ್ತಿದ್ದ ವೈಖರಿ, ಅವಳ ಫ್ರಾಕಿನ ಅಂಚಿನಲ್ಲಿ ಹೊಳೆಯುತ್ತಿದ್ದ ಕೆಂಪು ಹಸಿರು ನಕ್ಷತ್ರಗಳು, ಅವಳ ಗಾಂಭೀರ್ಯ ಇವನ್ನೆಲ್ಲಾ ತದೇಕ ಚಿತ್ತದಿಂದ ನೋಡುತ್ತಿದ್ದ ನನಗೆ ಅವಳನ್ನೇ ಮದುವೆಯಾಗಬೇಕೆಂಬ ಅಚಲ ನಿರ್ಧಾರ ಮನಸ್ಸಿನಲ್ಲಿ ಮೂಡಿತು. ಮದುವೆಗೂ, ತಂತಿಯಮೇಲಿನ ಸವಾರಿಗೂ ಇದ್ದ ನಿಗೂಢ ಸಂಬಂಧ ಆ ಎಳೆಯ ವಯಸ್ಸಿನಲ್ಲೇ ನನಗೆ ಹೊಳೆದದ್ದು ಕಂಡು ಇಂದಿಗೂ ನನಗೆ ಆಶ್ಚರ್ಯವಾಗುತ್ತಿದೆ. ಇರಲಿ.

ತಂತಿಯ ಮೇಲೆ ಸೈಕಲ್ ನಡೆಸಲು ಅನುಕೂಲವಾಗುವಂತೆ ಆ ಸೈಕಲ್‌ಗೆ ಟಯರುಗಳನ್ನು ತೆಗೆದು ಚಕ್ರದ ರಿಮ್ ತಂತಿಯ ಮೇಲೆ ಕೂರುವಂತೆ ಮಾಡಿದ್ದರು. ತರುಣಿಯ ಕೈಯ್ಯಲ್ಲಿನ ಸಮತೋಲನ ದಂಡ, ಸೈಕಲ್ ಮತ್ತು ತರುಣಿ ಸೇರಿದಂತೆ ಒಟ್ಟಾರೆ ವ್ಯವಸ್ಥೆಯ ಗುರುತ್ವ ಬಿಂದು ಕೆಳಗಿಳಿಸುವಂತೆ ಮಾಡಿತ್ತು. ಗುರುತ್ವ ಬಿಂದು ಕೆಳಗಿದ್ದರೆ ಸಮತೋಲನ ಕ್ರಿಯೆ ಬಹು ಸುಲಭ. ಕೆಳಗೆ ಭಾರ ಇರುವ ಚನ್ನಪಟ್ಟಣದ ಬೊಂಬೆಗಳು ಹೇಗೆ ಮಲಗಿಸಿದರೂ ಎದ್ದು ನಿಲ್ಲುವುದಕ್ಕೆ ಇದೇ ಕಾರಣ. ನಾವು ಸೈಕಲ್ ಬಿಡುವಾಗ ಬ್ಯಾಲೆನ್ಸಿಂಗ್ ಹೇಗೆ ಆಗುತ್ತದೆ? ಆ ತರುಣಿಯ ತರಹ ಕೈಯ್ಯಲ್ಲಿ ಉದ್ದವಾದ ಗಳುವನ್ನು ಹಿಡಿಯದೆಯೇ ಸರಾಗವಾಗಿ ಸೈಕಲ್ ಬಿಡುತ್ತೇವಲ್ಲಾ? ಅಂತ ನೀವು ಕೇಳಬಹುದು. ಇದಕ್ಕೆ ಬಹು ಸ್ವಾರಸ್ಯಕರ ಉತ್ತರ ಇದೆ.

ಒಂದು ರೂಪಾಯಿ ನಾಣ್ಯವನ್ನು ಅದರ ಅಂಚಿನ ಮೇಲೆ ನೆಟ್ಟಗೆ ನಿಲ್ಲಿಸುವುದು ಅಷ್ಟೇನು ಸುಲಭ ಅಲ್ಲ ಅಲ್ಲವೇ. ನಾಣ್ಯವನ್ನು ನಿಲ್ಲಿಸುವಾಗ ಕೈ ಸ್ವಲ್ಪ ಅಲುಗಾಡಿದರೂ ಸಾಕು, ನಾಣ್ಯ ಬಿದ್ದು ಉರುಳಿ ಸೋಫಾದ ಅಡಿ ಸೇರುತ್ತದೆ. ಇದೇ ನಾಣ್ಯವನ್ನು ನೆಲದ ಮೇಲೆ ಉರುಳಿಸಿದಾಗ, ಅದು ವೇಗದಿಂದ ಉರುಳುತ್ತಿರುವವರೆಗೂ ಬೀಳದೇ ಉರುಳುತ್ತಲೇ ಇರುತ್ತದೆ. ಕ್ರಮೇಣ ವೇಗ ಕುಂದಿದಂತೆ, ನಾಣ್ಯ ಸ್ವಲ್ಪ ಮಟ್ಟಿಗೆ ಹಾಗೂ ಹೀಗೂ ವಾಲಾಡಲು ತೊಡಗುತ್ತದೆ. ಕೊನೆಗೊಮ್ಮೆ ಒಂದು ಪಕ್ಕಕ್ಕೆ ಬಗ್ಗಿ ವೃತ್ತಾಕಾರದಲ್ಲಿ

ತಿರುಗಿ, ಉರುಳುವಿಕೆ ನಿಂತ ತಕ್ಷಣ ಪಕ್ಕಕ್ಕೆ ಬೀಳುತ್ತದೆ. ಸೈಕಲ್ ಸವಾರಿಯೂ ಹೀಗೆಯೇ. ಸೈಕಲ್ ಒಮ್ಮೆ ಚಲಿಸಲು ಪ್ರಾರಂಭವಾದರೆ ತಿರುಗುತ್ತಿರುವ ಚಕ್ರದ ಅಕ್ಷಕ್ಕೆ ತಾನಿರುವ ಸ್ಥಾನದಿಂದ ಬದಲಾಗದೇ ಇದ್ದ ದಿಕ್ಕಿನಲ್ಲೇ ಭದ್ರವಾಗಿ ಕೂತಿರುವ ಸಾಮರ್ಥ್ಯ ಬರುತ್ತದೆ. ಅಕಸ್ಮಾತ್ತಾಗಿ ಬೇರಾವುದಾದರೂ ಹೊರಗಿನ ಶಕ್ತಿ ತಿರುಗುತ್ತಿರುವ ಚಕ್ರವನ್ನು ಬಾಗಿಸಲು ಯತ್ನಿಸಿದರೆ, ಆ ಯತ್ನವನ್ನು ಪ್ರತಿಭಟಿಸುವ ಶಕ್ತಿ ಚಕ್ರಕ್ಕೆ ದೊರಕಿರುತ್ತದೆ. ಇಂಗ್ಲೀಷಿನಲ್ಲಿ ಸ್ಟೆಬಿಲೈಸಿಂಗ್ ಮೊಮೆಂಟ್ ಎಂದು ಕರೆಯುವ ಈ ಸಮತೋಲನ ಶಕ್ತಿ, ಹಡಗುಗಳಲ್ಲಿ ಚಾಲನೆಯ ದಿಕ್ಕನ್ನು ಕಂಡುಕೊಳ್ಳುವ ಜೈರೋಸ್ಕೋಪ್‌ಗಳಲ್ಲಿ ಸಹಾ ಕಾಣಬಹುದು. ಹೀಗಾಗಿ ಒಬ್ಬ ಸೈಕಲ್ ಸವಾರ ಓಡುತ್ತಿರುವ ಸೈಕಲ್ ಮೇಲೆ ಕುಳಿತಿದ್ದಾಗ ಅವನ ಯತ್ನವಿಲ್ಲದೇ ಸೈಕಲ್ ತನ್ನ ಸಮತೋಲನವನ್ನು ಕಾಪಾಡಿಕೊಳ್ಳುತ್ತಿರುತ್ತದೆ. ಹೊಸದಾಗಿ ಸೈಕಲ್ ಸವಾರಿ ಕಲಿಯುವವರು, ಸೈಕಲ್ ಹತ್ತಿ ಪೆಡಲ್ ತುಳಿಯುವಾಗ ಬೀಳುತ್ತಾರೆಯೇ ಹೊರತು, ಪೆಡಲ್ ತುಳಿಯಲು ಪ್ರಾರಂಭಿಸಿ ಸೈಕಲ್ ಓಡುತ್ತಿರುವಾಗ ಬೀಳುವುದಿಲ್ಲ. ಮಕ್ಕಳು ಆಡಿಸುವ ಬುಗುರಿಗಳಲ್ಲೂ ಇದೇ ತತ್ವದ ಸ್ವರೂಪವನ್ನು ಕಾಣಬಹುದು. ಬುಗುರಿ ವೇಗದಿಂದ ತಿರುಗುವಾಗ ಅದು ಚೂಪಾದ ಮೊಳೆಯ ತುದಿಯ ಮೇಲೆ ನಿಂತು ತಿರುಗುತ್ತಿದ್ದರೂ ಪಕ್ಕಕ್ಕೆ ಬೀಳದಿರುವಂತೆ ಈ ಸಮತೋಲನ ಶಕ್ತಿ ನೋಡಿಕೊಳ್ಳುತ್ತದೆ.

ತಂತಿಯ ಮೇಲಿನ ಸೈಕಲ್ ತರುಣಿ ತನ್ನ ಆಟವನ್ನು ಮುಗಿಸಿ ಕೆಳಗಿಳಿಯುತ್ತಿದ್ದಂತೆ ಬ್ಯಾಂಡ್ ವಾದನ ಮತ್ತೆ ಪ್ರಾರಂಭವಾಯಿತು. ಅದರೊಂದಿಗೆ ಒಂಟಿ ಚಕ್ರದ ಸೈಕಲ್ ತರುಣಿಯರ ಸಮೂಹ ರಂಗಪ್ರವೇಶ ಮಾಡಿದರು. ಯಾವ ಸರ್ಕಸ್‌ನಲ್ಲೇ ಆಗಲಿ, ಈ ಒಂಟಿ ಚಕ್ರದ ತರುಣಿಯರು ಒಂದು ಇಳಿಯುವ ಸರಣಿಯಲ್ಲಿ ರಂಗಪ್ರವೇಶ ಮಾಡುವುದನ್ನು ನೀವು ಗಮನಿಸಿರಬಹುದು. ಹತ್ತು ಹದಿನೈದು ಸವಾರಿಣಿಯರು, ಒಬ್ಬರ ಕೈ ಒಬ್ಬರು ಹಿಡಿದು ಒಂದು ಸರಪಳಿಯ ರೀತಿಯಲ್ಲಿ ರಿಂಗಿಗೆ ಬರುವಾಗ ಮುಂಚೂಣಿಯಲ್ಲಿನ ತರುಣಿ ಹಿರಿಯವಳಾಗಿದ್ದು ಕೊನೆಯಲ್ಲಿ ಪುಟಾಣಿಯೊಂದು ಪುಟ್ಟ ಸೈಕಲ್ಲಿನ ಮೇಲೆ ಬರುತ್ತಿರುತ್ತದೆ. ಒಂಟಿ ಚಕ್ರದ ಚಾಲನೆ ಸಹಿತ ಚೆನ್ನಾಗಿ ಅಭ್ಯಾಸವಾದ ನಂತರವೇ ದಕ್ಕುವ ಕಲೆ. ಈ ಚಾಲಕಿಯರು ಒಬ್ಬರ ಕೈ ಇನ್ನೊಬ್ಬರು ಹಿಡಿದು ರಂಗಪ್ರವೇಶ ಮಾಡುವ ಕಾರಣ ಗೆಳೆತನವಲ್ಲ, ಇಬ್ಬರು ಒಂಟಿ ಚಕ್ರ ತರುಣಿಯರು ಒಬ್ಬರ ಕೈ ಇನ್ನೊಬ್ಬರು ಹಿಡಿದ ತಕ್ಷಣ ಆ ಎರಡು ಒಂಟಿ ಚಕ್ರಗಳು ಸವಾರಿಣಿಯರ ದೇಹಗಳ ಮೂಲಕ ಒಂದುಗೂಡಿ ಒಂದು ಸಾಮಾನ್ಯ ದ್ವಿಚಕ್ರವಾಹನವಾಗುತ್ತದೆ. ಈ ರೀತಿ ಜೋಡಿ ತರುಣಿಯರು ವೇಗದಿಂದ ಸೈಕಲ್ ತುಳಿದು ಸಮತೋಲನವನ್ನು ಪಡೆಯಬಹುದು.

ಸೈಕಲ್ ಆಟ ಮುಗಿದ ನಂತರ ಕುದುರೆ ಒಂಟೆಗಳ ಆಗಮನ. ಮಧ್ಯೆ ಇದ್ದ ವೃತ್ತಾಕಾರವಾದ ರಿಂಗಿನ ಅಂಚಿನಲ್ಲಿ ಈ ಪ್ರಾಣಿಗಳು ಪದೇ ಪದೇ ಸುತ್ತಿ, ನೆರೆದಿದ್ದ ಮಕ್ಕಳ ಮನಸ್ಸನ್ನು ಸಂತೋಷಪಡಿಸುತ್ತಿದ್ದವು. ಗೊತ್ತು ಗುರಿಯಿಲ್ಲದೆ ಸುತ್ತಿ ಸುತ್ತಿ ಸುಸ್ತು ಮಾಡಿಕೊಳ್ಳುವ ನಮ್ಮೆಲ್ಲರ ಅವಸ್ಥೆಯನ್ನು ಈ ಪ್ರಾಣಿಗಳು ಬಹು ಚೆನ್ನಾಗಿ ಪ್ರತಿಬಿಂಬಿಸುತ್ತಿದ್ದವು ಅಂತ ನನಗೆ ಈಗ ಅನಿಸುತ್ತದೆ. ಒಟ್ಟಿನಲ್ಲಿ ವಿಜ್ಞಾನದ ತತ್ವಗಳನ್ನು ತಿಳಿಯಬೇಕಾದಾಗ ನಮ್ಮ ಸುತ್ತಲಿನ ಪರಿಸರದ ಉದಾಹರಣೆಗಳನ್ನು ಗಮನಿಸಿ ತಿಳಿಯುವುದು ಬಹು ಪರಿಣಾಮಕಾರಿ ಅಲ್ಲವೇ?

✤

# ನೀಹಾರಿಕೆಗಳ ನಡುವೆ

**- ವಾಣಿ ಸುರೇಶ್**

''**ಈ** ಶನಿವಾರ ಸಂಜೆ ನನ್ನ ಟೆಲಿಸ್ಕೋಪಲ್ಲಿ ಗುರು, ಶನಿ ಗ್ರಹಗಳನ್ನು ತೋರಿಸ್ತೀನಿ, ಬರ್ತೀರಾ ಮ್ಯಾಮ್?'' ಅಂದ ಅವತ್ತು ನನ್ನ ಶಿಷ್ಯ ಅರವಿಂದ. ಶಿಷ್ಯರು ಕಟ್ಟುನಿಟ್ಟಾಗಿರೋ ತಮ್ಮ ಗುರುಗಳಿಗೆ – ''ಗ್ರಹಚಾರ ಬಿಡಿಸ್ತೇನಿ ನಿಂಗೆ ತಡಿ – ಮಗನೇ'' – ಅಂತನ್ನೋ ಈ ಕೆಟ್ಟ ಕಾಲದಲ್ಲಿ, ನನ್ನ ಪಾಠ ಕ್ರಮದಲ್ಲಿ ಹಳೆಯ ಕಾಲದ ಶಿಸ್ತಿನ ಕ್ರಮವನ್ನೇ ನಂಬಿ ಅನುಸರಿಸಿದ ನನಗೆ, ಆ ಬಗ್ಗೆ ತೀವ್ರ ಅಸಮಾಧಾನವಿದ್ದ ಮಾಜಿ ಶಿಷ್ಯೋತ್ತಮನೊಬ್ಬನ ಬಾಯಲ್ಲಿ ಇಂಥಾ ಮುತ್ತಿನಂಥಾ ಮಾತು ಬಂದಾಗ ತುಂಬಾ ಖುಷಿಯಾಯ್ತು! ''ಬೇಕಾದರೆ ನಾಳೆ ಶುಕ್ರವಾರ ಮುಸ್ಸಂಜೆ ಇಲ್ಲೇ ಒಂದು ಪಾರ್ಕಿಂಗ್ ಲಾಟಲ್ಲಿ ನಮ್ಮ ಅಸ್ಟ್ರಾನಮಿ ಕ್ಲಬ್ಬು ಪ್ರಮೋಷನ್ನಿಗಾಗಿ ಯೋಜಿಸಿರೋ ಪ್ರೋಗ್ರಾಮಿದೆಯಲ್ಲ, ಅಲ್ಲಿಗೆ ಹೋದರೆ ಅವರ ಟೆಲಿಸ್ಕೋಪಲ್ಲೂ ಹಣಿಕಬಹುದು ಮ್ಯಾಮ್'' – ಅಂತಾನೂ ಮುಂದುವರೆಸಿದ ಶಿಷ್ಯ ಫೋನ್‌ಕಾಲಲ್ಲಿ!

ಚಿಕ್ಕಂದಿನಲ್ಲಿ ವೀಣೆ ಕಲಿಯಲು ನನ್ನ ಬಳಿ ಶಿಷ್ಯ ವೃತ್ತಿ ನಡೆಸಿದ್ದ ಅರವಿಂದ, ಈಗೊಬ್ಬ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ತರಬೇತಾದ ಟೆಕ್ಕಿ. ಸಂಗೀತ ಮತ್ತು ಅಸ್ಟ್ರಾನಮಿ ಅವನ ಆಪ್ತ ಹವ್ಯಾಸಗಳು. ಅವನ ಆಫರಿಂದ ನನಗೆ ಪೂರ್ವಾಶ್ರಮದಿಂದಲೂ ಇದ್ದ ನಕ್ಷತ್ರ ವೀಕ್ಷಣೆಯ ಹುಚ್ಚು ಮತ್ತೆ ಕೆರಳಿತು ಅಂತ ಬೇರೆ ಹೇಳಬೇಕಿಲ್ಲ ಅಲ್ವೇ! ಈ ಕ್ಯಾಲಿಫೋರ್ನಿಯಾದಲ್ಲಿ ಕಳೆದ ವರ್ಷ ನಾನು ಎಂಜಾಯ್ ಮಾಡಿದ Perseid Meteor Showerನ ಬಗ್ಗೆ ನಿಮಗೆ ಹೇಳಿದ್ದು ಕೂಡಾ ನೆನಪಿರಬಹುದು. ಈಗ ಮತ್ತೊಮ್ಮೆ ವ್ಯೋಮದ ಭವ್ಯತೆಯನ್ನು ಶಿಷ್ಯನ ಸ್ವಂತ ಟೆಲಿಸ್ಕೋಪಲ್ಲೇ ಸವಿಯುವ ಅವಕಾಶ ಒದ್ದುಕೊಂಡು ಬಂದಿದೆ! ''ಇಂಥಾ ದಿವಿನಾದ ಆಪರ್ಚುನಿಟಿ ಸಿಕ್ಕಾಗ ಯಾರಾದ್ರೂ ಬೇಡ ಅಂತಾರೆಯೇ? ಮುಂಚೆ, ಇದ್ದ ಬದ್ದ ಕೆಲಸಕಾರ್ಯ ಎಲ್ಲಾ ಬಿಟ್ಟು ಓಡು'' – ಅಂತಂದು, ಸದಾ ಎದ್ದೆದ್ದು ಕುಣಿಯಕ್ಕೆ ಗರಿಕೆದರಿಕೊಂಡು ಸಿದ್ಧವಾಗೇ ಇರೋ ನನ್ನ ಮನಸ್ಸೂ ಸಹಾ ಕಾಲಿಗೆ ಗೆಜ್ಜೆ ಕಟ್ಟಿಕೊಳ್ಳಕ್ಕೆ ಶುರು ಮಾಡಿತು.

'ಎಲ್ಲೋ ಏಳು ತಿಂಗಳಿಗೇ ಹುಟ್ಟಿದ್ದೋರ ಹಾಗಾಡ್ತೀಯಲ್ಲೇ' – ಅಂತ ಎತ್ತಿಕೋತಾನೇ ಎಲ್ಲರ ಕೈಯ್ಯಲ್ಲೂ ಬೈಸಿಕೊಳ್ಳಕ್ಕೆ ಸರಿಯಾಗಿ, ಶನಿವಾರ ರಾತ್ರೀಗಾಗಿ ಆ ಹಿಂದಿನ ಸೋಮವಾರದಿಂದಲೇ ನನ್ನ ಸಿದ್ಧತೆ ಶುರುವಾಯ್ತು! ಮೊಟ್ಟ ಮೊದಲು ಅವತ್ತು ರಾತ್ರಿಯ ಛಳಿ ಎಷ್ಟಿರತ್ತೇಂತ ಹವಾಮಾನ ವರದಿಯಿಂದ ದೃಢಪಡಿಸಿಕೊಂಡೆ – 45 ಡಿಗ್ರಿ ಫ್ಯಾರನ್ ಹೀಟ್ ಅಂದರೆ 7.3 ಡಿಗ್ರಿ ಸೆಲ್ಸಿಯಸ್! ಅಬ್ಬಬ್ಬಾ, ಒಳ್ಳೇ ಛಳೀನೇ ಇರುತ್ತೇಂತಾಯ್ತು. ಹಾಗಾದರೆ ಒಂದು ಸಮಯ ನಮ್ಮೆಲ್ಲರ ಅನಿಷ್ಠಗಳಿಗೆ ಗುರಿಯಾದೋನೂಂತಲೇ ಪ್ರಸಿದ್ಧನಾಗಿರೋ ಶನೀಶ್ವರನನ್ನು ನೋಡುವಾಗ, ನಮ್ಮ ಪಾಮರತ್ವದ ಬಗೆಗಿನ ಅಸಹಾಯಕತೆಯ ಪಿರಿಚಿನಿಂದ ಹಲ್ಲುಲ್ಲು ಕಡಿಯುವಂತಾದರೆ ಆಗ ಆ ವೇಳೆಯ ಛಳೀಲಿ ಕಡಿಯುಕ್ಕೆ ಘಟ್ಟಿಯಾದ ಹುರಿಗಾಳಾದ್ರೂ ಇದ್ದರೆ ಇನ್ನಷ್ಟು ಚೆನ್ನವಲ್ವೇಂತ ಬುದ್ಧಿ ಕುಹಕವಾಡಿತು. ಸರಿ, ಬೇಗ ಒಂದಿಷ್ಟು ಕಾಳು ನೆನೆಸಿ ಅದನ್ನೂ ಮಾಡಿಟ್ಟುಕೊಂಡೆ.

ಮೊದಲೇ ಇಲ್ಲಿನ್ನೂ ಛಳಿಗಾಲವೇ ನಡೀತಿರೋದ್ರಿಂದ ಬೆಚ್ಚಗಿನ ಬಟ್ಟೆಯ ಸಿದ್ಧತೆಗೇನೂ ಹೆಚ್ಚಿನ ಕಷ್ಟಪಡಬೇಕಾಗಲಿಲ್ಲ. ಈ ಎಲ್ಲಾ ಸಿದ್ಧತೆ, ನಿರೀಕ್ಷೆಗಳಲ್ಲಿ ಒಂದುವಾರ ಕಳೆದಿದ್ದೇ ಗೊತ್ತಾಗಲಿಲ್ಲ ನೋಡಿ.

''ಮ್ಯಾಮ್, ಒಂದು ಎಂಟು ಎಂಟೂವರೆಗೆಲ್ಲಾ ರೆಡಿಯಾಗಿರ್ತೀರಾಂತ'' ಅರವಿಂದನ ಕಾಲ್ ಬಂದ ತಕ್ಷಣವೇ ಸರಸರಾಂತ ಬೆಳಗ್ಗಿಂದಲೇ ಪತರಗುಟ್ಟಿ ಮನೇಲೆಲ್ಲರ ಕೈಯ್ಯಲ್ಲೂ ಮತ್ತೆ ಹಾಸ್ಯ ಮಾಡಿಸಿಕೊಂಡಿದ್ದಾಯ್ತು. ಸರಿಯಾದ ಸಮಯಕ್ಕೆ ಹೊರಟು, ಅವನ ಕಾರಿನ ಸೀಡಿ ಪ್ಲೇಯರಿನಲ್ಲಿ ''ಮಾನವ ಜನ್ಮ ದೊಡ್ಡದು'' ಅನ್ನೋ ಪೂರ್ವಿಕಲ್ಯಾಣಿಯ ಅರ್ಥಗರ್ಭಿತ ದಾಸರ ಪದ ಕೇಳಕ್ಕೆ ಶುರುವಾದಾಗಲೇ ಇವತ್ತಿನ ಸಂದರ್ಭಕ್ಕೆ ಇದು ಹೇಳಿ ಮಾಡಿಸಿದಂತಿದೆಯಲ್ಲ ಅನ್ನಿಸಿಬಿಟ್ಟಿತು. ಮುಂದೆ ಪಂ. ಭೀಮಸೇನ್ ಜೋಶಿಯವರ ಕಂಠಸಿರಿ, ಚಿಟ್ಟಿಬಾಬು ಅವರ ವೀಣಾನಾದದ ಝೇಂಕಾರ ಕೇಳ್ತಾ ನಮ್ಮ ಕಾರಿನ ಜೊತೆ ಜೊತೆಯೇ ಬರುತ್ತಿದ್ದ ಹೊರಗಿನ ಕಾಡಿನ ಕಾರ್ಗತ್ತಲಲ್ಲಿ ಬೆಟ್ಟದ ಕಿಬ್ಬಿಯ ಆ ದಾರಿ ಸವೆದಿದ್ದೇ ತಿಳೀಲಿಲ್ಲ. ಆ ಕಗ್ಗತ್ತಲು, ಛಳಿಗಾಲ, ನೆತ್ತಿಯ ಮೇಲಿನ ಮಿನುಗುತ್ತಿದ್ದ ಚುಕ್ಕೆಗಳು ಇವೆಲ್ಲದರ ಮಿಶ್ರಣದಿಂದ – ಆ ಕ್ಷಣದವರೆಗೂ ಒಂದಲ್ಲ ಒಂದು ರೀತಿಯಲ್ಲಿ ಚಡಪಡಿಸುತ್ತಿದ್ದ ಮನಸ್ಸಿಗೆ ಕಡಿವಾಣ ಹಾಕಿ ನಿಲ್ಲಿಸಿ ಕಿನ್ನರಲೋಕಕ್ಕೇ ಲಗ್ಗೆಯಿಟ್ಟಂತನ್ನಿಸಿತು. ಮಾರ್ಗನ್ ಹಿಲ್‌ನ ಬಳಸು ದಾರಿ ಕ್ರಮೇಣ ಕಡಿದಾಗುತ್ತಾ ಬಂದಂತೆ ನಾವು, ಒಂದಿಷ್ಟು ಕಾರುಗಳು ಒಂದರ ಹಿಂದೊಂದು ಶಿಸ್ತಾಗಿ ನಿಂತಿದ್ದ ಸಮತಟ್ಟಾದ ಪ್ರದೇಶಕ್ಕೆ ಬಂದೆವು. ನಖಶಿಖಾಂತ ದಪ್ಪನೆಯ ಕ್ವಿಲ್ಟ್ ಹೋಲುತ್ತಿದ್ದ ವಿಂಡ್ ಚೀಟರಿನಂಥಾ ಪೋಷಾಕನ್ನು ಧರಿಸಿ, ಸೈಂಧವನ ತಂಗಿಯಂತಿದ್ದ ಕೃಷ್ಣಸುಂದರಿಯೊಬ್ಬಳು ಬಾವುಟವೊಂದನ್ನು ಬೀಸುತ್ತಾ ನಮ್ಮ ಕಾರನ್ನು ತಡೆದು ನಿಲ್ಲಿಸಿದಳು. ಕಾರಿನ ಎಲ್ಲಾ ದೀಪಗಳನ್ನೂ ತಕ್ಷಣವೇ ಆರಿಸಲು ಹೇಳಿ ನಾವು ಪಾರ್ಕ್ ಮಾಡಬೇಕಾದ ಸ್ಥಳವನ್ನು ನಿರ್ದೇಶಿಸಿದಳು.

ಅಮಾವಾಸ್ಯೆಯ ಹಿಂದಿನ ದಿನಗಳಾದದ್ದರಿಂದ ಎಲ್ಲೆಲ್ಲೂ ಕವಿದಿದ್ದ ಕಾರಿರುಳು, ದಿಗಂತದಲ್ಲಿ ದೈತ್ಯಾಕಾರದ ನೆರಳಿನಂತೆ ಕಾಣುತ್ತಿದ್ದ ಪರ್ವತ ಶಿಖರ ಶ್ರೇಣಿಗಳ ಸಭೆಯಲ್ಲಿ, ನೆತ್ತಿಯ ಮೇಲೆ ಕಣ್ಣು ಮಿಟುಕಿಸುತ್ತಾ ನಗುತ್ತಿದ್ದ ನಕ್ಷತ್ರಗಳದ್ದೇ ದರ್ಬಾರು! ಹಿನ್ನೆಲೆಗೆ ಅಸಂಖ್ಯ ಕ್ರಿಕೆಟ್ಟುಗಳ ಸಂಗೀತ ಕಛೇರಿ ಬೇರೆ! ನಕ್ಷತ್ರಗಳ ಬೆಳಕಿಗೆ ಆ ವೇಳೆಗೆ ಒಗ್ಗಿದ್ದ ನಮ್ಮ ಕಣ್ಣುಗಳೂ ಸುತ್ತಮುತ್ತಲಿನ ಬಂಡೆ, ಪೈನ್ ಮರಗಳು, ಪೊದೆಗಳನ್ನು ಗುರುತಿಸಿ ಎಡವದೇ ಮುಂದೆ ನಡೆಯುವಷ್ಟಾಗಿತ್ತು. ಹಿಂದಿನ ಸೀಟಿನುದ್ದಕ್ಕೂ ಮಲಗಿಸಿಟ್ಟಿದ್ದ ದೊಡ್ಡ ಒರೈಯನ್ ಡಬ್ಸೋನಿಯನ್ ಹತ್ತಿಂಚಿನ ಟೆಲಿಸ್ಕೋಪು ಮತ್ತು ಹೆಚ್ಚು ಕಮ್ಮಿ ಅಷ್ಟೇ ದೊಡ್ಡದಾಗಿದ್ದ ಬೈನಾಕ್ಯುಲರುಗಳನ್ನು ಕೆಳಗಿಳಿಸಿ ಅವನ್ನು ಸರಿಯಾದ ರೀತಿಯಲ್ಲಿ ಅಣಿಗೊಳಿಸುವುದರಲ್ಲಿ ಮುಂದಿನ ಅರ್ಧ ಘಂಟೆ ಕಳೆಯಿತು. ಸುತ್ತಮುತ್ತ ಆಗಲೇ ನೆರೆದಿದ್ದವರ ವೀಕ್ಷಣೆಗೆ ಅಡ್ಡಿಯಾಗದಂತೆ ಎಲ್ಲಾ ಚಟುವಟಿಕೆಗಳೂ ಚಿಕ್ಕ ಚಿಕ್ಕ ಕೆಂಪು ಬಣ್ಣದ ಟಾರ್ಚ್ ಲೈಟಿನ ಬೆಳಕಲ್ಲೇ ನಡೆಯಬೇಕಾಗಿತ್ತಾದ್ದರಿಂದ, ಅಲ್ಲಿದ್ದ ಹಲವಾರು ಮಂದಿ ಮತ್ತು ಅವರ ತಲೆಗೆ ಬಿಗಿದಿದ್ದ ಚಿಕ್ಕ ಕೆಂಪು ದೀಪದ ಟಾರ್ಚ್‌ಗಳ ದೆಸೆಯಿಂದ ಅಲ್ಲೊಂದು ಗಣಿಗಾರಿಕೆಯನ್ನು ನೆನಪಿಸುವ ವಾತಾವರಣ ಸೃಷ್ಟಿಯಾಗಿತ್ತು. ಆಗಲೇ ಸಜ್ಜುಗೊಂಡಿದ್ದ ಸುಮಾರು ಒಂದು ಹದಿನೈದಿಪ್ಪತ್ತು ಟೆಲಿಸ್ಕೋಪುಗಳ ಪಕ್ಕದಲ್ಲಿ ನಮ್ಮ ಸ್ಥಳ. ಅವುಗಳ ಗಗನ ವೀಕ್ಷಕ ಒಡೆಯ

ಒಡತಿಯರು ಅವುಗಳ ಸುತ್ತಲೂ ಗುಂಪಾಗಿ ನಿಂತು ಸಣ್ಣಧ್ವನಿಯಲ್ಲಿ ಮಾತನಾಡುತ್ತಾ ತಾವು ಕಂಡ ದೃಶ್ಯದ ಬಗ್ಗೆ ಚರ್ಚೆ ನಡೆಸುತ್ತಿದ್ದರು.

''ಮ್ಯಾಮ್, ಇಲ್ನೋಡ್ಬನ್ನಿ ಸ್ವಲ್ಪ'' - ಅಲ್ಲೀವರ್ಗೂ ತಲೆ ಬಗ್ಗಿಸ್ಕೊಂಡು ಏನೋ ಮಾಡ್ತಾ ನಿಂತಿದ್ದ ಅರವಿಂದನ ಕರೆ ಕೇಳಿ, ಅಷ್ಟೊತ್ತೂ - ಆ ಕತ್ತಲು, ಆ ಕೀಟಗಳ ಸಂಗೀತ ಇವೆಲ್ಲವನ್ನೂ ಆಸ್ವಾದಿಸುತ್ತಾ ನನಗೆ ತಿಳಿದಿರುವ ನಕ್ಷತ್ರಪುಂಜಗಳನ್ನು ಬರಿಗಣ್ಣಲ್ಲಿ ಗುರುತಿಸಕ್ಕೆ ಪ್ರಯತ್ನಿಸ್ತಾ ನಿಂತಿದ್ದೋಳು ಆ ಕಡೆಗೆ ಹೋದೆ. ''ಮೊದಲು ಇದರಲ್ಲಿ ನೋಡೋಣ, ಆಮೇಲೆ ಟೆಲಿಸ್ಕೋಪಿನಲ್ಲಿ ಮುಂದುವರೆಸೋಣ ಆಯ್ತಾ ಮ್ಯಾಮ್'' ಅಂದ ಅವನು. ಅವನ ಶಕ್ತಿಯುತ 10 X 70 ಫ್ಯೂಜಿನಾನ್ ಬೈನಾಕ್ಯುರಲ್ಲಿ ಇಣಿಕಿದಾಗ ಕಣ್ಣಮುಂದೆ ಅದ್ಭುತ ದೃಶ್ಯವೊಂದು ತೆರೆದುಕೊಂಡಿತು! ಸಾಧ್ಯವೇ ಇಂಥಾ ಅದ್ಭುತ ಮನಮೋಹಕತೆ ಚಿಕ್ಕಂದಿನಿಂದಲೂ ನೋಡುತ್ತಿರುವ ಈ ನಮ್ಮ ಪುಟ್ಟ ಮುದ್ದು ಮಿನುಗು ಚುಕ್ಕಿಗಳಿಗೆ! - ಅಂತನ್ನಿಸಿ - ''ಇದೇನಿದು ಅರವಿಂದ, ಈಪಾಟಿ ಚೆಲುವು ಈ ಪುಟ್ಟ ನಕ್ಷತ್ರಗಳಿಗೆ!?'' ಅಂತಂದೆ!

''ಹೌದಾ ಮ್ಯಾಮ್? ಅಷ್ಟಕ್ಕೇ ಹಾಗಂತೀರಾದ್ರೆ ಈಗಿಲ್ನೋಡಿ ಒಂದು ಚೂರು'' ಅಂತಂದ ಅವ. ಅಲ್ಲೇ ಪಕ್ಕದಲ್ಲಿ ಮೂರುಕಾಲಿನ ಸ್ಟ್ಯಾಂಡ್ ಮೇಲೆ ನಿಲ್ಲಿಸಿದ್ದ ಟೆಲಿಸ್ಕೋಪಿನಲ್ಲಿ ಕಣ್ಣು ಕೀಲಿಸಿದಾಗ ಕಂಡದ್ದು ಭುವನದೊಡೆಯನ ಕುಶಲ ಅಕ್ಕಸಾಲಿಕೆಯಲ್ಲಿ ನಭದಲ್ಲಿ ಕೂರಿಸಲಾಗಿದ್ದ ಅಂಗೈಯಷ್ಟಗಲದ ತಟ್ಟೆಯ ಗಾತ್ರದ, ಬರೀ ಸಾಲಿಟೇರ್ ವಜ್ರಗಳಿಂದಲೇ ಮಾಡಿದ್ದಂತಿದ್ದ ಪದಕ! ಅದಿನ್ನೆಂಥಾ ಹೊಳಪು! ಸಾಧ್ಯವೇ ಈ ಮಟ್ಟದ ಅಂದ ಚೆಂದ, ಹೊಳಪು ಈ ಮಿನುಗೋ ಪುಟಾಣಿಗಳಿಗೆ!.... ನನ್ನ ಖುಷಿ ನನಗೆ!

''ತಡಿ ಅರವಿಂದ್, ಇದು ''ಮಹಾವ್ಯಾಧ''ದ ಮಧ್ಯದಲ್ಲಿರೋ ಹಾಗಿದೆ. ಆಕಡೆ ಮೂಲೆಯಲ್ಲಿ ಕೆಂಪಗೆ ಹೊಳೀತಿರೋದೆ ಆರಿದ್ರಾ ನಕ್ಷತ್ರ, ಆ ಇನ್ನೊಂದ್ ಕಾರ್ನರ್‌ನಲ್ಲಿ ಪಳಗುತ್ತಿರೋದೇ ರೀಗಲ್ ಅಲ್ವಾ? ಅದು ಆಕಾಶದಲ್ಲೇ ಏಳನೇ ಪ್ರಕಾಶಮಾನವಾದ ನಕ್ಷತ್ರವೇನೋ ಅಲ್ವೇ? ಹೇ ತಡಿ. ಈಗ್ತಾನೇ ನೀನು ತೋರಿಸಿದ ಪದಕ ಒಂದು ನೀಹಾರಿಕೆ ಇರಬಹುದಾ ಅರವಿಂದ್ - ಅದರ ಸೌಂದರ್ಯ ನೋಡಿದರೆ?'' - ಎಂದು ನನ್ನ ಜ್ಞಾನವನ್ನು ಪ್ರದರ್ಶಿಸಿದೆ.

''ನೋಡಿದ್ಯಾ ಲೀನಾ, ನಿಂಗೇನು ಹೇಳಿದ್ದೆ ನಾನು!'' ಧ್ವನಿಯಲ್ಲೇ ತುಳುಕುತ್ತಿದ್ದ ಖುಷಿಯಲ್ಲಿ ಅಲ್ಲೇ ಸಹಾಯ ಮಾಡ್ತಿದ್ದ ತನ್ನ ಹೆಂಡತಿಯನ್ನು ಮಾತಿಗೆಳೆದ ಅರವಿಂದ. ಇಬ್ಬರ ಮಧ್ಯೆ ನನ್ನ ಕುರಿತು ಅವನು ಏನನ್ನೋ ಹೇಳಿದ್ದರ ಬಗ್ಗೆ ಅಸ್ಪಷ್ಟ ಪಿಸುಮಾತು, ನಸುನಗುವಿನ ವಿನಿಮಯ ನಡೆಯಿತು. ಈ ಹದಿಹರೆಯದ ಹುಡುಗರ ಜೊತೆ ಇದ್ದಾಗ ಇದೊಂದು ತೊಂದರೆ ನೋಡಿ. ನಮಗರಿವಿಲ್ಲದೇ ಮುಂದುವರೆದಿರೋ ಪ್ರಪಂಚಕ್ಕೂ, ಈ ಯುವಜನರ ಸರಸ ಸಂಭಾಷಣೆಗೂ, ನಮಗೂ ನಡುವೆ ಉಂಟಾಗಿರೋ ಅಗಾಧ ಕಂದಕ ಇದ್ದಕ್ಕಿದ್ದಂತೆ ಧುತ್ ಅಂತ ಎದ್ದು ನಿಂತುಬಿಡೋದು! ಅವತ್ತೂ ಹಾಗೇ ಆಯಿತು.

ಅವ ಮತ್ತೆ ನನ್ನ ಕಡೆ ತಿರುಗಿ ನಗುತ್ತಾ ಅಭಿಮಾನದಿಂದ ''ಹೌದು ಮ್ಯಾಮ್ ಸರಿಯಾಗಿ ಹೇಳಿದ್ರಿ, ನಮ್ಮ ಮಿಲ್ಕಿವೇ (ಆಕಾಶ ಗಂಗೆ), ಮತ್ತೆ ಯಾವುದಾದರೂ ನೆಬ್ಯುಲಾ (ನೀಹಾರಿಕೆ) ಎಲ್ಲಾ ನಿನ್ನ ಟೆಲಿಸ್ಕೋಪಲ್ಲಿ ಕಾಣುತ್ತಾ? ಅದೆಲ್ಲಾನ್ನೂ ತೋರಿಸ್ತೀಯಾಂತ

ಅವತ್ತಷ್ಟು ಆಸೆಯಿಂದ ಕೇಳಿದ್ರಲ್ಲ ಅದಕ್ಕೇ ಅದರಿಂದಲೇ ಶುರುಮಾಡಿದೆ ನೋಡಿ, ಇದೇ ಒರೈಯಾನ್ ನೆಬ್ಯುಲಾ. ನಿಮ್ಮ ಮಹಾವ್ಯಾಧ – ಅಂದರೆ – ಇಂಗ್ಲಿಷಲ್ಲಿ Archer ಅಂತಲೂ ಕರೆಯೋ ಈ ಒರೈಯಾನ್ ಕಾನ್ಸ್ಟಲೇಶನ್ನಿನಲ್ಲೇ ಈ ನೆಬ್ಯುಲಾ ಇರೋದು'' ಅಂದ ಅವನು. ಇದೇ ಹೆಸರಿನ ನಮ್ಮ ಉತ್ತರ ಬೆಂಗಳೂರಿನ ಜನಪ್ರಿಯ ಮಾಲ್‌ಗೂ ಇದರ ಅಲೌಕಿಕ ಸೌಂದರ್ಯಕ್ಕೂ ಎಂಥಾ ಅಜಗಜಾಂತರ ದೇವರೇ! ಅಂತ ನನಗನ್ನಿಸಿದ್ದರಲ್ಲೇನೂ ಆಶ್ಚರ್ಯವೇನಿಲ್ಲ ಬಿಡಿ. ಯಾಕೆಂದರೆ ಈ ದಿವ್ಯತೆಯನ್ನ ಮನುಷ್ಯಮಾತ್ರ ಸೃಷ್ಟಿಗೆ ಹೋಲಿಸೋದೇ ದೊಡ್ಡ ತಪ್ಪು ಅಂತ ನನ್ನ ಭಾವನೆ.

''ಮ್ಯಾಮ್ ನಿಮಗೆ ಗೊತ್ತಾ ಯಾಕೆ ನಿಮ್ಮ ಆರಿದ್ರಾ ನಕ್ಷತ್ರ – ಅಂದರೆ Betelguese – ಕೆಂಪಗಿದೇಂತ?'' ಅಂತ ಮತ್ತೆ ಶುರುಮಾಡಿದ ಅರವಿಂದ. ಅಲ್ಲಿಂದ ಹಿಡಿದು, ಅದು (ಆರಿದ್ರಾ) ಹೇಗೆ ಒಂದು ಸಾವು ಸನ್ನಿಹಿತವಾಗಿರುವ Super ನೋವಾ ಆಗಿದೆ, ಸೂರ್ಯನಿಗಿಂತಾ ಇನ್ನೂ ಹೆಚ್ಚು ವಯಸ್ಸಾಗಿರುವ, ಅವನಿಗಿಂತಲೂ ಒಂದು ಸಾವಿರಪಟ್ಟು ದೊಡ್ಡದಿರುವ, ತನ್ನ ಒಂದು ತುತ್ತಿಗೇ ಭೂಮಿ, ಮಂಗಳ, ಬುಧ, ಶುಕ್ರ ಗ್ರಹಗಳಷ್ಟನ್ನೂ ಏಕಕಾಲದಲ್ಲಿ ಕಬಳಿಸಬಲ್ಲ ದೈತ್ಯನಾಗಿ, ಮುಂದಿನ ಒಂದು ಮಿಲಿಯನ್ ವರ್ಷಗಳಲ್ಲಿ ಸಿಡಿದು ಚೂರಾಗಲಿರುವ ತನ್ನ ಭವಿಷ್ಯದೆಡೆಗೆ ಧಾವಿಸಲು ಹೊತ್ತಿ ಉರಿಯುತ್ತಿರುವ ಹೈಡ್ರೋಜನ್ ಗ್ಯಾಸಿನ ಉಂಡೆಯಾಗಿರುವುದರ ಬಗ್ಗೆ ಪ್ರಸ್ತಾಪಿಸಿ, ಇಷ್ಟೆಲ್ಲಾ ಕೆಂಡದುಂಡೆಯಂತಾಗಿದ್ದರೂ ಕೊರೆಯುತ್ತಿರೋ ಅದರ ಶೀತಲತೆ – ಇವೇ ಇತ್ಯಾದಿಗಳ ಬಗ್ಗೆ ಆಶ್ಚರ್ಯಕರ ಮಾಹಿತಿ ಒದಗಿಸಿದ.

ಆ ತಕ್ಷಣಕ್ಕೆ ನಂಗೆ ನೆನಪಿಗೆ ಬಂದದ್ದು almost ಪ್ರತೀ ವಿಷಯಕ್ಕೂ ಮಾತಿಗ್ಮುಂಚೆ ಒಂದು ಗಾದೆಯ ಒಗ್ಗರಣೆ ಕೊಟ್ಟೇ ಮುಂದುವರೆಸುತ್ತಿದ್ದ ನಮ್ಮ match maker ಅಜ್ಜಿ! ಅವರ ಫೇವರಿಟ್ ಗಾದೆಗಳಲ್ಲಿ – ''ಆರಿದ್ರಾ ನಕ್ಷತ್ರಕ್ಕೆ ದಾರಿದ್ರ್ಯ ಇಲ್ಲವಂತೆ'' – ಅನ್ನೋದೂ ಒಂದು. ಅದು ಈ ಸಂದರ್ಭದಲ್ಲಿ ಕಿವಿಗೆ ರಾಚಿದ ಹಾಗಾಯ್ತು. ''ಅಜ್ಜೀ ಇಲ್ನೋಡಿದ್ರಾ? ದರಿದ್ರವನ್ನೇ ದೂರ ಮಾಡೋ ನಿಮ್ಮ ಈ ನಕ್ಷತ್ರಕ್ಕೇ ಬಂದು ಕಾಲು ಹಾಕಿಕೊಂಡಿರುವ ದರಿದ್ರಾನಾ'' ಅಂತ, ಅಲ್ಲೇ ಎಲ್ಲೋ ತಾರಾಲೋಕದಲ್ಲಿ ಮಿನುಗುತ್ತಿರಬಹುದಾದ ಅವರಿಗೆ ನಾನೂ ತುಂಟತನದಿಂದ ಕಣ್ಣು ಮಿಟುಕಿಸಿ ಹೇಳಿದೆ.

ಈ ವೇಳೆಗೆ ಎಲ್ಲಾ ಮಿನುಗು ತಾರೆಗಳನ್ನೂ ಅಭಿನಂದಿಸಲೋ ಎನ್ನುವಂತೆ ದಿಗಂತದಿಂದ ಮೇಲೆದ್ದದ್ದು ಸಾಕ್ಷಾತ್ ದೇವಗುರು ಬೃಹಸ್ಪತಿ! ಅಲ್ಲೇ ಪಕ್ಕದಲ್ಲಿ ಠಿಕಾಣಿ ಹೂಡಿದ್ದ, ಹವ್ಯಾಸಿ ತಾರಾ ವೀಕ್ಷಕರ ದೃಷ್ಟಿಯಲ್ಲಿ ಅತ್ಯಂತ ಮಹತ್ವದ ದೂರದರ್ಶಕವಾದ ತಕಾಹಾಶಿಯ ಹೆಮ್ಮೆಯ ವಾರಸುದಾರಿಣಿಯೊಬ್ಬಳು ಆದರದಿಂದ ಗುರುಗ್ರಹವನ್ನು ನೋಡಲು ನಮ್ಮನ್ನು ಕರೆದಳು. ಅಬ್ಬಾ! ಅದೆಂಥಾ ಧೀಮಂತತೆ! ಭವ್ಯ ಗಾತ್ರದ ಗೋಳದಂತಿದ್ದ ಗುರುವಿನ ಮಧ್ಯದಲ್ಲಿ ಹಾದುಹೋಗಿದ್ದ ಪಟ್ಟಿಗಳು, ಹೊಳೆಯುತ್ತಾ ಅವನಿಗೆ ಪ್ರದಕ್ಷಿಣೆ ಹಾಕುತ್ತಿದ್ದ ಇಬ್ಬರು ಚಂದ್ರರು, ದೇವ ಗುರುವಿನ ಗಾಂಭೀರ್ಯದ, ಆದರೆ ಮೇಲ್ನೋಟಕ್ಕೆ ದಕ್ಕುವಷ್ಟಿದ್ದ ವೇಗದ ಚಲನೆ! ಎಂದಿಗೂ ಮರೆಯಲಾಗದ ದೃಶ್ಯವದು!

''ಛೇ ಈಚೆ ಕಡೆಯಿಂದ ಮೋಡ ಬರ್ತಿದೆಯಲ್ಲ ವಾಣೀ ಮೇಡಂ!'' ಈತರಾ ದಟ್ಟವಾಗಿ ಮಬ್ಬುಗವಿಸುವಂತೆ ಹರಡುವ ಇವು ಬಂದರೆ ಅಷ್ಟೇ. ಸುಮಾರು ಸಲ ಇವು ಸೂರ್ಯೋದಯದವರೆಗೂ ಹೀಗೇ ಇದ್ದು ಬಿಡತ್ವೆ. ಸರಿ ನಡೀರಿ ಹೊರಡೋಣ ಇನ್ನು ಅಂದ ಅರವಿಂದ ನಿರಾಶೆಯಿಂದ...

''ಮತ್ತೆ ಶನಿಗ್ರಹ?'' ಅಂತಂದೆ ನಾನು ದೂರದ ಆಸೆಯಿಂದ.

''ಎಲ್ಲಿ ಬಂತು, ಈ ಶನೀಶ್ವರನೇ ವಕ್ಕರಿಸಿದ ಮೇಲೆ'' ಅಂದ.

ಸುತ್ತ ಮುತ್ತ ಇದ್ದ ಎಲ್ಲರೂ ಗೊಣಗುಟ್ಟುತ್ತಾ ತಮ್ಮ ತಮ್ಮ ಸ್ಕೋಪುಗಳನ್ನು ಬಿಚ್ಚಿ ಪ್ಯಾಕಿಂಗ್ ಶುರು ಮಾಡಿದ್ದರು.

''ಹಾಗಾದರೆ ನನ್ನ ಹುರಿಗಾಳು?'' – ನನ್ನ ಯತ್ನ ಮೀರಿ ಬಂದ ಉದ್ಗಾರ ಬಂದೇಬಿಟ್ಟಿತು.

''ಹುರಿಗಾಳು ಅಂದ್ರಾ? ಎಲ್ಲಿ ಮೇಡಮ್? ನೀವು ತಂದಿದ್ದೀರಾ?'' – ಅಷ್ಟೊತ್ತೂ ನಕ್ಷತ್ರ ಲೋಕದಲ್ಲೆಲ್ಲೋ ಕನಸು ಕಾಣುತ್ತಿದ್ದಂತಿದ್ದ ಅವನ ಕಿವಿ ಇದ್ದಕ್ಕಿದ್ದಂತೆ ಚುರುಕಾಯ್ತು.

''ಹೌದು ಕಣೋ, ಈ ಛಳೀಲಿ ತಿನ್ನುಕ್ಕೆ ಚೆನ್ನ ಅಲ್ಲವೇ, ಅದಕ್ಕೇ ಸ್ವಲ್ಪ ನಾನೇ ಮಾಡಿದೆ'' ಅಂದೆ – ನನ್ನ ಹಿಡನ್ ಅಜೆಂಡಾನ ಮರೆ ಮಾಚ್ತಾ...

''ಎಲ್ಲಿ ತೆಗೀರಿ ಮೇಡಮ್, ಎಷ್ಟು ವರ್ಷ ಆಯ್ತೋ ಅದೆಲ್ಲಾ ತಿಂದು! ಲೀನಾ ಇನ್ನು ಸ್ವಲ್ಪ ಕಾಫೀನೋ ಟೀನೋ ಸಿಗತ್ತಾ ಹುರಿಗಾಳಿನ ಜೊತೆಗೆ?'' ಅಂತಂದ ಅವನಿಗೆ, ಥರ್ಮಾಸಿನಿಂದ ಪೇಪರ್ಕಪ್ಪಿಗೆ ಕಾಫಿ ಸುರೀತಾ ಮಹಾರಾಷ್ಟ್ರದ ಲೀನಾ ಕೇಳಿದಳು – ''ಹಾಗಂದ್ರೇನು ಡಾರ್ಲಿಂಗ್, ನೀನ್ಯಾವತ್ತೂ ಮನೇಲಿ ಮಾಡೇ ಇಲ್ಲವಲ್ಲ!!'' ಅಂತ.

ಅಷ್ಟೊತ್ತಿಗಾಗಲೇ ಒಂದೊಂದೇ ಕಾಳನ್ನು ಬಾಯಿಗೆಸೆದುಕೊಳ್ತಿದ್ದ ಅರವಿಂದ ಹೇಳಿದ – ''ಅದೂ ಏನೂಂದರೆ..., ಬ್ರಹ್ಮಾನಂದ = ಹುರಿಗಾಳು + ಬಿಸಿ ಕಾಫಿ square ಎಸ್ಪೆಶಲಿ ಅಂಡರ್ ಆ ಸ್ಟಾರ್ ಲಿಟ್ ಸ್ಕೈ ಆನ್ ಅ ಕೋಲ್ಡ್ ನೈಟ್ ಲೈಕ್ ದಿಸ್ ಅಂತ! ಅದು ಹಾಗೆಲ್ಲಾ ನಮ್ಮ E = mc2ನಷ್ಟು ಸುಲಭ ಅಲ್ಲ ಬಿಡು ಅರ್ಥ ಆಗಕ್ಕೆ, ಸುಮ್ಮನೆ ತಲೆ ಕೆಡಿಸಿಕೋಬೇಡ'' – ಅಂತ ಅಂತೂ ದರ್ಶನ ಮಾತ್ರದಿಂದ ಅಲವತ್ತು ಕೊಳ್ತೀನೇನೋಂತಂದುಕೊಂಡಿದ್ದ ಈ ಪಾಮರಳಿಗೆ, ಹಲ್ಲು ಕಡಿಯಕ್ಕೂ ಅಡ್ಡಿ ಮಾಡಿ ಆ ಶನಿಮಹಾರಾಯನೇ ಗೆದ್ದಿದ್ದ ಅಷ್ಟಲ್ಲದೇ ಶನಿ ಮಹಾತ್ಮೆ ಅಂತ ಅಂತಾರೆಯೇ ದೊಡ್ಡೋರು!

ಅಂದ ಹಾಗೆ ಮತ್ತೆ ಖಂಡಿತಾ ಶನಿಮಹಾರಾಜನ ದರ್ಶನ ಮಾಡಿಸ್ತೀನೀಂತ ಪ್ರಾಮಿಸ್ ಮಾಡಿದ್ದಾನೆ ನನ್ನ ಶಿಷ್ಯೋತ್ತಮ. ಈ ಸಲದ ದಿವ್ಯಾನುಭವದಿಂದ ನನಗೀಗ ಗೊತ್ತಾಗಿದೆ. ಅವನ ಸುಂದರವಾದ ತಿಳಿ ಹಳದಿ ಬಣ್ಣ ಮತ್ತು ಅವನನ್ನು ಸುತ್ತುವರೆದಿರೋ 'ಬಳೆಗಳ' ಸೌಂದರ್ಯದಿಂದ ಶನಿ ಮಹಾರಾಯ ನನ್ನನ್ನ ಮರುಳು ಮಾಡ್ತಾನೆಯೇ ಹೊರತು ನನ್ನ ಪೆದ್ದುಪೆದ್ದು ಪಿರಿಚಿಗೆ ಆಸ್ಪದವೇ ಕೊಡೋಲ್ಲಾಂತ. ಅಯ್ಯೋ ಅದೇನೋ ಹೇಳ್ತಾರಲ್ಲ ಹಾಗೆ, ಕತ್ತೆ ಬಾಲ ಕುದುರೆ ಜುಟ್ಟು! ಮತ್ತೆ ಮತ್ತೆ ಹುರಿಗಾಳು ಮಾಡುವಷ್ಟು ಶ್ರಮವೇ ತಪ್ಪಿತು ಬಿಡಿ.

✤

# ಆಪರೇಷನ್ ಹಿಟ್ ಬ್ಯಾಕ್

- ಇ.ಆರ್. ರಾಮಚಂದ್ರನ್

**ಕು**ವೆಂಪುರವರ ಬೊಮ್ಮನ ಹಳ್ಳಿಯ ಕಿಂದರಿ ಜೋಗಿಯಾದ ಮೇಲೆ ಇದೇ ಮೊದಲ ಬಾರಿಗೆ ಇಲಿಗಳೆಲ್ಲವೂ ಜೊತೆಗೆ ಸೇರಿರೋದು.

'ಸಾಕಾಗಿ ಹೋಗಿದೆ? ಏಷ್ಟು ದಿನಾಂತ ಹೀಗೆ ಜೀವಿಸೋದು? ನಮ್ಮದೂ ಒಂದು ಜೀವನಾನ? ನಮ್ಮನ್ನು ನೋಡಿ ಇರುವೆಗಳು ಕೂಡಾ 'ಥೂ ಅಂತ ಉಗೀತಿರ್ಬೇಕು' ಅಂತು ಮುದಿ ಇಲಿ.'

**ರಹಸ್ಯ ಕಾರ್ಯಾಚರಣೆಯ ಒಂದು ಎಕ್ಸ್‌ಕ್ಲೂಸಿವ್ ವರದಿ**

'ನೀವು ಸ್ವಲ್ಪ ಕಂಟ್ರೋಲ್ ಮಾಡ್ಕೋಬೇಕು. ನಿಮಗೆ ಮೊದಲೇ ಬೀಪಿ ಜಾಸ್ತಿ' ಅಂತು ಸೆಕ್ರೆಟರಿಲಿ.

'ಹೀಗಿರೋದಕ್ಕಿಂತ ಹಾರ್ಟ್ ಅಟ್ಯಾಕ್ ಬಂದ್ರೆ ವಾಸಿ.'

'ಛೆ! ಛೆ! ಬಿಡ್ತು ಅನ್ನಿ ಸಧ್ಯ! ಅದಕ್ಕೇ ಅಲ್ವೆ ನಾವೆಲ್ಲಾ ಒಟ್ಗೆ ಸೇರಿರೋದು. ನಾವು ಅವರ್ಗೆ ಸರಿಯಾಗಿ ಬುದ್ಧಿ ಕಲ್ಸೋಣ.'

'ಏನು ಮಾಡ್ತೀವೋ ನನಗೆ ಏನೇನೂ ನಂಬಿಕೆ ಇಲ್ಲ.'

'ಅದಿರ್ಲಿ... ನಮ್ಮ ಮೇಲೇನೆ ಯಾಕೆ ಯಾವಾಗ್ಲೂ ಇವರ ಕಣ್ಣು? ಮನುಷ್ಯನ ಬೆಳವಣಿಗೆ, ಬುದ್ಧಿ ಎಲ್ಲಾ ನೋಡಿದ್ರೆ ಕುದುರೆನೋ ಕತ್ತೆನೋ ತೊಗೋಬೇಕಾಗಿತ್ತು ಎಕ್ಸ್ಪರಿಮೆಂಟಿಗೆ. ಕತ್ತೆ ಕರೆಕ್ಟಾಗಿರೋದು... ಅದು ಬಿಟ್ಟು ನಮ್ಮ ಬೆನ್ನು ಹಿಡಿದಿದ್ದಾರಲ್ಲಾ..?' ಲಾಯರಿಲಿ.

'ಹೌದು.. ಹಂದೀನೂ ಸರಿ ಇದ್ದಿರೋದು! ನಮ್ಮನ್ನೇ ಯಾವಾಗಲೂ ಸ್ಕೇಪ್‌ಗೋಟ್ ಮಾಡಿದ್ದಾರೆ' ಹೌದಿಲಿ.

ಎಲ್ಲಾ ಉದ್ವಿಗ್ನ ಇಲಿಗಳೇ! ರಕ್ತ ಕುದೀತಾ ಇದ್ದ ಇಲಿಗಳು. ಸಣ್ಣಿಲಿ, ದೊಪ್ಪಿಲಿ, ಅಪ್ಪಿಲಿ, ತಂಗಿಲಿ ಕುವೆಂಪುರವರ ಎಲ್ಲಾ ಇಲಿಗಳು ಸೇರಿದ್ದವು.

ಎಲ್ಲೆಲ್ಲಿಂದ ಬಂದ್ವು? ಪೈಪಿನಿಂದ, ಮೋರಿಯಿಂದ, ಶೆಟ್ಟರ ಅಂಗಡಿಯಿಂದ, ಮಾಲುಗಳಿಂದ, ಸಣ್ಣ ಹೋಟೆಲ್ ಮತ್ತು ಪಂಚತಾರಾ ಹೋಟೆಲ್ ಅಡುಗೆ ಮನೆಯಿಂದ, ಹಾಸ್ಟೆಲ್ಲುಗಳಿಂದ, ರೈಲ್ವೆ ಮೂರನೇ ಕ್ಲಾಸು ಹಾಗೂ ಎ.ಸಿ. ಕ್ಲಾಸಿನಿಂದ, ಮದುವೆ ಮನೆ ಛತ್ರದಿಂದ, ತಪ್ಪಿಸಿಕೊಂಡ ಬೋನಿನಿಂದ, ಹಳೆಯ ಗೋಡೌನಿನಿಂದ, ವಿಮಾನದಿಂದ, ಉಪ್ಪಿನಕಾಯಿ ಜಾಡಿಯಿಂದ, ದೇವಸ್ಥಾನದ ಗರ್ಭಗುಡಿಯಿಂದ, 5-ಸ್ಟಾರ್ ಹಾಸ್ಪಿಟಲ್‌ಗಳಿಂದ ಮತ್ತು ಕ್ಲಿನಿಕ್‌ಗಳಿಂದ, ಗವರ್ನಮೆಂಟು ಫೈಲುಗಳ ಮಧ್ಯದಿಂದ ಸಾವಿರಗಟ್ಟಲೆ ಇಲಿಗಳು ಸೇರಿದವು. ಸಿಕ್ಕ ಸಿಕ್ಕ ವಾಹನಗಳನ್ನೇರಿ ಇನ್ನೂ ಬಂದು ಇಳಿಯುತ್ತಿದ್ದವು.

ಆಗಿದ್ದಿಷ್ಟೆ. ವಿಜ್ಞಾನಿಗಳು ಯಾವ ಪ್ರಯೋಗ ಮಾಡಿದ್ರೂ, ಅದನ್ನು ಮಾಡೋದು ಇಲಿಗಳ ಮೇಲೇ! ಮನುಷ್ಯನಿಗೆ ಏನೇ ಪ್ರಾಬ್ಲಂ ಇರಲಿ – ಡಯಾಬಿಟಿಸ್, ಹಾರ್ಟ್ ಅಟ್ಯಾಕ್, ಜಾಂಡೀಸ್, ಲಿವರ್, ಕಿಡ್ನಿ... ಇದನ್ನು ವಾಸಿ ಮಾಡೋದು ಹೇಗೆ ಅಂದ್ರೆ ಒಂದಿಷ್ಟು ಇಲಿಗಳನ್ನ ಹಿಡಿದು ಅವಕ್ಕೆ ಮೊದಲು ಈ ಕಾಯಿಲೆಗಳನ್ನು ಬರಿಸಿ ಆಮೇಲೆ ಅದಕ್ಕೆ ಉಪವಾಸ ಹಾಕಿ ಔಷಧಿ ಕುಡಿಸಿ, ದಿನಾ ಪ್ರಾಣ ತಿಂದು ಕೊನೆಗೆ ಪರಿಹಾರ ಹುಡುಕಿ, ಇವಕ್ಕೆ ವಾಸಿಯಾದ ಮೇಲೆ ಮನುಷ್ಯರಿಗೆ ಒಂದಿಪ್ಪತ್ತೋ ಮೂವತ್ತೋ ಡೋಸ್ ಜಾಸ್ತಿ ಮಾಡಿ ಅವರ ಕಾಯಿಲೇನ ವಾಸಿ ಮಾಡೋದು. ರೋಸಿ ಹೋಗಿ ಇದನ್ನು ಯಾವ ರೀತಿ ಸೇಡು ತೀರಿಸ್ಕೋಬೇಕು ಅಂತ ತೀರ್ಮಾನ ಮಾಡುವುದಕ್ಕೆ ಕರೆದ ಮೀಟಿಂಗ್ ಇಲಿಗಳದು.



'ನನ್ನ ಕೇಳಿದ್ರೆ ಇವ್ರೆಲ್ಲಾ ಬಾಂಬಿಟ್ಟು ಕೊಲ್ಬೇಕು' ರೊಚ್ಚಿಗೆದ್ದ ಯುವಕಿಲಿ.

'ನೀನು ಐ.ಎಸ್. ನಿಂದ ನಿನ್ನೆ ತಾನೆ ವಾಪಸ್ಸು ಬಂದಿದೀಯಾ ಅಂತ ಎಲ್ಲಾರಿಗೂ ಗೊತ್ತು! ಆದ್ರೆ ಆತ್ರ ಪಡ್ಬೇಡ. ನಾವು ಎಲ್ಲಾ ಪ್ರಾಣಿಗಳಿಗಿಂತ ಬದ್ಧಿವಂತರು. ಐ.ಎಸ್. ನವರ ಹಾಗೆ ಮುಂಗೋಪಿಗಳಲ್ಲ. ಯೋಚಿಸಿ ಯುಕ್ತಿಯಿಂದ ಕಾರ್ಯ ಸಾಧಿಸ್ಕೋಬೇಕು' ಶಾಂತಿಲಿ.

'ನಾವು ಮನುಷ್ಯರೊಂದಿಗೆ ಮೀಟಿಂಗ್ ಮಾಡಿದ್ರೆ ಹೇಗೆ?' ಮೀಟಿಂಗಿಲಿ.

'ಮೋದಿಯವರು ಪಾಕಿಸ್ತಾನದವರ ಜೊತೆ ಮೀಟಿಂಗ್ ಮಾಡಿದ ಹಾಗಿರುತ್ತೆ! ಎಲ್ಲಾದಕ್ಕೂ ಒಪ್ಕೊಂಡು ಹೋಗಿ ಅವ್ರು ಮಾಡೋದೇ ಬೇರೆ! ಅವ್ರಿಗೆ ಅಮೇರಿಕಾದಿಂದ ಮಾತು ಮಾತಿಗೂ ಸಪೋರ್ಟ್ ಬೇರೆ ಇದೆ' ಪೊಲಿಟಿಕಲಿಲಿ.

'ನಾವೆಲ್ಲಾ ಫಾರಿನ್ಗೆ ಓಡಿಹೋದ್ರೆ, ಹೇಗೆ? ಈ ಜಂಜಾಟವೇ ಬೇಡ. ಆರಾಮವಾಗಿ ಏನು ಸಿಗುತ್ತೋ ಅದನ್ನು ಕಚ್ಕೊಂಡು ಕಡ್ಕೊಂಡು ಖುಷಿಯಾಗಿ ಇರೋಣ' ಟ್ರಾವಲಿಲಿ.

'ಈಗ ಮಲ್ಯ ಓಡ್ಹೋಗಿ ಖುಷಿಯಾಗಿದ್ದಾರಾ? ಅವರ ಮಾಡೆಲ್ಗಳೆಲ್ಲಾ ಇಂಡಿಯಾದಲ್ಲೇ ಇದಾರೆ! ಅವರಿಗೆ ಖುಷಿ ಎಲ್ಲಿಂದ ಬರ್ಬೇಕು? ಆಮೇಲೆ ಇಷ್ಟು ಇಲಿಗಳು ಒಟ್ಟಿಗೆ ಮೈಗ್ರೆಂಟ್ಸ್ ಆದ್ರೆ ಸಿರಿಯನ್ಸ್‌ಗೆ ಆದ ದುರ್ಗತಿ ನಮ್ಗೂ ಆಗುತ್ತೆ. ಜರ್ಮನಿಲಿ ಬೆಕ್ಕುಗಳು ಹುಲಿಗಳ ತರಹ ಇರುತ್ತೆ. ನಮ್ಮನ್ನು ಒಂದೇ ಸಲ ಕಚ್ಚಿ ಮುಗಿಸ್ಬಿಡುತ್ತೆ. ಅಲ್ಲಿ ಬಚ್ಚಿಟ್ಕೊಳಕ್ಕೆ ವಿಧಾನ ಸೌಧವೂ ಇಲ್ಲ, ನಮ್ಮ ಡೆಲ್ಲಿ ಪಾರ್ಲಿಮೆಂಟೂ ಇಲ್ಲ. ಏನಿದ್ರೂ ನಮ್ ದೇಶಾನೇ ಸರಿ. ದೇಶ ಭಕ್ತಿ ಮಾತ್ರ ಬಿಡಬಾರ್ದು' ಸೆಕ್ರೆಟರಿಲಿ.

'ಎಲ್ಲಾದಕ್ಕೂ ಏನಾದ್ರೂ ಟಾಂಗ್ ಕೊಡ್ತಿಯಾ? ನೀನೇ ಉಪಾಯ ಹೇಳು' ಮುದುಕಿಲಿ.

'ನಾವು ಮನುಷ್ಯನಿಗೆ ಬುದ್ಧಿಕಲಿಸಲು ಹೊರಟಿದ್ದೀವಿ. ಜ್ಞಾಪಕವಿರಲಿ. ಎರಡನೇದು ಈ ಪ್ರಾಬ್ಲಂ ಗ್ಲೋಬಲ್ ಪ್ರಾಬ್ಲಂ. ಬೇರೆ ದೇಶಗಳ ಇಲಿಗಳ ಲೈಫೂ ನಮ್ ತರಾನೇ ಇರುತ್ತೆ. ಇನ್ನೂ ಕೆಟ್ಟದಾಗಿ ಇರುತ್ತೆ. ಮಿಕ್ಕ ಇಲಿಗಳ ಜೊತೆ ಸಂಪರ್ಕ ಬೆಳೆಸೋಣ. ಕಮ್ಯೂನಿಕೇಷನ್

ಇಂಪ್ರೂವ್ ಮಾಡೋಣ. ಈಗ ಕಂಪ್ಯೂಟರ್ ಹಳ್ಳಿ ಗಮಾರ್‍ರ್ಗೂ ಬರುತ್ತೆ. ನಮ್ಮ ಹುಡುಗ್ರುಗೂ ಕಲಿಸೋಣ.'

'ಹೇಗೆ ಕಲಿಯೋದು?'

'ಲ್ಯಾಬ್ನಲ್ಲಿ ಸೈನ್‌ಟಿಸ್ಟ್ ಹೇಗೆ ಇವೆಲ್ಲವೂ ಉಪಯೋಗಿಸ್ತಾರೆ ಅಂತ ತಿಳ್ಕೊಳ್ಳೋಣ, ಕಲಿಯೋಣ. ಒಂದಿಷ್ಟು ನಮ್ಮವರು ಮೈಕ್ರೋಸ್ಕೋಪಿನ ಕಡೆ ಕಣ್ಣಿಡಿ. ಡೌಟಾದ್ರೆ ಬೇರೆ ದೇಶದ ಇಲಿಗಳನ್ನು ಸಂಪರ್ಕಿಸೋಣ. ಲೆಟ್ಸ್ ಸ್ಟಾರ್ಟ್ 'ಆಪರೇಷನ್ ಹಿಟ್ ಬ್ಯಾಕ್' ಇವತ್ತಿನಿಂದಲೇ. ಮೂರು ತಿಂಗಳಾದ್ಮೇಲೆ ಮತ್ತೆ ಮೀಟ್ ಮಾಡೋಣ' ಅಂದು ಹೇಳಿ ಸೆಕ್ರೆಟರಿಲಿ ಮೀಟಿಂಗ್ ಮುಗಿಸಿತು.

ಆವತ್ತು ರಾತ್ರಿಯಿಂದಲೇ ಶುರುವಾಯ್ತು. ವಿಜ್ಞಾನಿಗಳು ಮಾಡುತ್ತಿದ್ದ ಪ್ರತಿ ಒಂದನ್ನೂ ಪಿಳ ಪಿಳ ಕಣ್ಣಿಂದ ಎಲ್ಲವನ್ನೂ ನೋಡುತ್ತ ಒಂದೊಂದಾಗಿ ಕಲಿಯಲು ಶುರು ಮಾಡಿದವು. ರಾತ್ರಿ ಅವರು ಹೋದ ಮೇಲೆ ಅವರು ಒಣಗಿ ಹಾಕಿದ್ದ ಬಿಳಿ ಕೋಟನ್ನು ಹರಿದು ಬಿಳಿ ಇಲಿಗಳು ಹೊಲಿದು ಹಾಕಿಕೊಂಡು ರಾತ್ರಿ ಅವುಗಳದೇ ಲ್ಯಾಬ್ ವರ್ಕ್ ಶುರು ಮಾಡಿದವು.

ಐ.ಎಸ್.ಗೆ ಹೋಗಿದ್ದ ಒಂದೆರಡು ಗ್ರೂಪಿನವರು ಬೇರೆ ದೇಶಕ್ಕೆ ಹೋಗಿ ಅಲ್ಲಿನ ಇಲಿಗಳನ್ನು ಸಂಪರ್ಕಿಸಿದವು. ನೆಟ್‌ವರ್ಕ್ ಬೆಳೆಯಿತು. ಇಲಿ ಇಂಟರನ್ಯಾಷನಲ್ ಲ್ಯಾಬ್, ಇಂಟರ್ನೆಟ್‌ನಲ್ಲಿ ಮುಂದಿನ ಪ್ಲಾನ್ ಬಗ್ಗೆ ಚರ್ಚೆ ಶುರು ಮಾಡಿದವು. ಸಾಫ್ಟ್‌ವೇರ್ ಒಂದೇ ಅಲ್ಲ ಇಂಡಿಯನ್ ಇಲಿಗಳು ಕೂಡಾ ಬಹಳ ಇಂಟೆಲಿಜಂಟ್ ಇವೆ ಅಂತ ತಲೆ ತೂಗಿದವು ಹೊರಗಿನ ಇಲಿಗಳು. ಬ್ಲೂ ಪ್ರಿಂಟ್ ತಯಾರು.

ಕೊನೆಗೆ ಆಪರೇಷನ್ ಹಿಟ್ ಬ್ಯಾಕ್ ಶುರುವಾಯ್ತು.

ರಾತ್ರಿ ಟೆಸ್ಟ್ ಟ್ಯೂಬ್‌ನಲ್ಲಿ ಇಟ್ಟಿದ್ದ ಸ್ಯಾಂಪಲ್‌ಗಳು ಅದಲು ಬದಲಾಗ ತೊಡಗಿದವು. ರಾತ್ರಿ ಇದ್ದ ಮೈಕ್ರೋಸ್ಕೋಪಿನ ರೀಡಿಂಗ್ ಬೆಳಗ್ಗೆ ಬೇರೆ ತೋರಿಸಲು ಶುರುವಾಯಿತು. ಕಂಪ್ಯೂಟರ್ ಮೌಸ್ ಹಿಡಿದರೆ, ಬನಿಜವಾದ ಮೌಸ್ ಕೈಗೆ ಸಿಕ್ಕಿ ಗಾಬರಿಯಾದಾಗ ಇಲಿಗಳ ಕಿಲಕಿಲ ನಗು ಶಬ್ದ ಕೇಳಿಸಲು ಶುರು. ವಿಜ್ಞಾನಿಗಳಿಗೆ ಕಕಮಕ ಹಿಡಿಯಿತು. ಟೆಸ್ಟ್ ಟ್ಯೂಬ್ನಲ್ಲಿ ಏನು ಮಣ್ಣು ಹಾಕಿದೆ ಅಂತ ಜೂನಿಯರ್ ಮೇಲೆ ಕೂಗಾಟ...

ನಾನು ನಿನ್ನೆ ರಾತ್ರಿ ಕುಡಿದಿದ್ದೆನಾ? ರೀಡಿಂಗ್ ಯಾಕೆ ಬೇರೆ ಬರುತ್ತಿದೆ? ನನ್ನ ಗರ್ಲ್ ಫ್ರೆಂಡ್ನ ಲ್ಯಾಬ್ಗೆ ಕರ್ಕೊಂಡು ಬರ್‍ಬಾರ್ದಾಗಿತ್ತು... ಹೀಗೆಲ್ಲಾ ಡೌಟು ಶುರುವಾಯ್ತು.

ಎಲ್ಲಾ ಲ್ಯಾಬುಗಳಲ್ಲೂ ಸೇಮ್ ಸಿಚುಯೇಷನ್. ಕನ್ಫ್ಯೂಷನ್ ಮೇಲೆ ಕನ್ಫ್ಯೂಷನ್.

★★★

ಕೊನೆಗೆ,


★ ಅಮೇರಿಕಾದಲ್ಲಿ ಸ್ಲಿಮ್ ಆಗುವುದಕ್ಕೆ ಕಂಡು ಹಿಡಿದ ಔಷಧಿ ಕುಡಿದ ಹುಡುಗಿಯರಿಗೆ ಹಸಿವು ಜಾಸ್ತಿಯಾಗಿ ಸಿಕ್ಕಾಪಟ್ಟೆ ತಿನ್ನಲು ಶುರು ಮಾಡಿ ಒಂದಕ್ಕೆ ಡಬಲ್ ಆದವರ ನ್ಯೂಸ್ ಹರಡಿತು.

- ★ ಇಂಗ್ಲೆಂಡಿನಲ್ಲಿ ಛಳಿತಡೆಯುವುದಕ್ಕೆ ಕೊಟ್ಟಿದ್ದ ಔಷಧಿಯಿಂದ ಮೈ ಯದ್ವಾತದ್ವಾ ಬಿಸಿಯಾಗಿ ದಾರಿಯಲ್ಲಿ ಹೋಗುತ್ತಿದ್ದವರು ಕೊರೆಯುವ ಛಳಿಯಲ್ಲೇ ಥೇಮ್ಸ್ ನದಿಗೆ ಧುಮುಕಿದರು ಅಂತ ವರ್ತಮಾನ ಬಂತು.
- ★ ಬಯೋಕಾನ್ ಲ್ಯಾಬಿನಿಂದ ತಯಾರಾದ ಕೂದಲು ಸೊಂಪಾಗಿ ಬೆಳೆಯಲು ಕೊಟ್ಟಿದ್ದ ಔಷಧಿಯಿಂದ ಇದ್ದ ಕೂದಲೂ ಪೂರ್ತಿ ಉದರಿಹೋಗಿ, ಪೂರ್ತಿ ಬೋಡಾದ ಹುಡುಗಿಯರ ಚಿತ್ರಗಳು ಎಲ್ಲೆಲ್ಲೂ ಬರಲು ಶುರುವಾಯಿತು.
- ★ ರೆಡ್ಡಿ ಲ್ಯಾಬ್ಸ್‌ನವರು ತಯಾರು ಮಾಡಿದ ಹಲ್ಲು ಪುಡಿ ಮಕ್ಕಳ ಹಲ್ಲು ಬಲವಾಗುವ ಬದಲು ಸಾಲು ಸಾಲೆ ಉದರಲು ಶುರುವಾಯಿತು.

ಪ್ರಪಂಚದ ದೊಡ್ಡ ಲ್ಯಾಬಿನಲ್ಲಿ ಅಲ್ಲೋಲ ಕಲ್ಲೋಲವಾಗಿ ಅವರುಗಳ ಮಾಲೀಕರು ಹೇಳದೆ ಕೇಳದೆ ಪರದೇಶಕ್ಕೆ ಓಟ ಕಿತ್ತರು.

ಆ ರಾತ್ರಿ ಇಲಿಗಳೆಲ್ಲವೂ ಹೈ ಫೈ ಮಾಡಿ ಇಂಟರ್ನ್ಯಾಷನಲ್ ಸೆಲಿಬ್ರೇಷನ್ ಶುರು ಮಾಡಿದವು.

✤



# ''ತುಂಬಾ'' ತೀರದಲ್ಲಿ.......

**- ಸಿ.ಆರ್. ಸತ್ಯ**

**ಕೇ**ರಳದ ತಿರುವಂತನಂತಪುರದ ಬಳಿಯಲ್ಲಿ ಇರುವ ''ತುಂಬಾ'' ಎಂಬ ಬೆಸ್ತರ ಹಳ್ಳಿ ಭಾರತದ ಬಾಹ್ಯಾಕಾಶ ತಂತ್ರಜ್ಞಾನದ ಉಗಮ ಸ್ಥಳ. ಇಲ್ಲಿಯೇ ಭಾರತದ ಬಾಹ್ಯಾಕಾಶ ಪಿತಾಮಹ ಡಾ. ವಿಕ್ರಂ ಸಾರಾಭಾಯಿ, ಡಾ. ಅಬ್ದುಲ್ ಕಲಾಂ ಇಂತಹವರ ನೇತೃತ್ವದಲ್ಲಿ ಇಂದು ''ಇಸ್ರೋ'' ಬಳಸುವ ಮೂಲ ತಂತ್ರಜ್ಞಾನಗಳೆಲ್ಲಾ ಮೂಡಿ ಬಂದದ್ದು. ಆಗ ಅಬ್ದುಲ್ ಕಲಾಂ ಅವರೊಡನೆ ಎರಾಕೆಟ್ ಎಂಜಿನಿಯರ್ ಆಗಿ ಕೆಲಸ ಮಾಡುವ ಸುಯೋಗ ನನ್ನದಾಗಿತ್ತು. ಅಲ್ಲಿ ನಡೆದ ಕೆಲವು ಲಘು ಘಟನೆಗಳನ್ನು ಈಗ ಮೆಲುಕು ಹಾಕುತ್ತಿದ್ದೇನೆ.

1960 ದಶಕದಲ್ಲಿ ಅಮೇರಿಕದಿಂದ ತರಿಸಿದ್ದ ರಾಕೆಟ್ ಒಂದು ತುಂಬಾದ ಸಮುದ್ರ ತೀರದಲ್ಲಿ ಉಡಾವಣೆಗೆಂದು ಸಜ್ಜಾಗಿ ನಿಂತಿತ್ತು. ಅದರ ಬಳಿ ಹೋಗಲು ಕೆಲವೇ ಅಧಿ ಕಾರಿಗಳಿಗೆ ಅನುಮತಿ ಇತ್ತು. ಅಂದು ಬೆಳಿಗ್ಗೆಯೇ ತಿರುವನಂತಪುರಕ್ಕೆ ಆಗಮಿಸಿದ್ದ ಡಾ. ಸಾರಾಭಾಯಿ ಅವರು ತಮ್ಮ ಹೋಟೆಲ್‌ನಿಂದ ತುಂಬಾಗೆ ನೇರವಾಗಿ ಬಂದು, ರಾಕೆಟ್ ಅನ್ನು ಪರೀಕ್ಷಿಸಲು ಉಡಾವಣಾ ಸ್ಥಳಕ್ಕೆ ಬಂದರು. ಜುಬ್ಬಾ ಪಾಯಿಜಾಮ ಚಪ್ಪಲಿ ಧರಿಸಿ ಬಂದಿದ್ದ ಸಾರಾಭಾಯಿ ಅವರನ್ನು ಅಲ್ಲಿ ನಿಂತಿದ್ದ ನಮ್ಮ ರಕ್ಷಣ ಸಿಬ್ಬಂದಿ ಕೃಷ್ಣನ್ ನಾಯರ್ ಮೊದಲು ನೋಡಿರಲಿಲ್ಲ. ಕೃಷ್ಣನ್ ನಾಯರ್‌ಗೆ ಹಿಂದಿ ಮಾತನಾಡೋ ಚಪಲ ಬೇರೆ ಇತ್ತು. ಸಾರಾಭಾಯಿ ಒಬ್ಬರೇ ಅಲ್ಲಿಗೆ ಬರುತ್ತಿರುವುದನ್ನು ನೋಡಿ, ಇವರು ಒಬ್ಬ ಹಿಂದೀ ವಾಲ ಅಂತ ಅಂದುಕೊಂಡು, ಆಪ್‌ಕೌನ್ ಹೈ? ಇದರ್ ನಹೀ ಜಾ ಸಕ್ತಾ. ಪಾಸ್ ಲೇಕೆ ಆವೋ ಅಂತ ಘರ್ಜಿಸಿದ. ಸಾರಾಭಾಯಿ ಒಂದೂ ಮಾತಿಲ್ಲದೇ ಅಲ್ಲಿಂದ ಹೊರಟು ಹೋದರು. ಸ್ವಲ್ಪ ಹೊತ್ತಾದ ಮೇಲೆ, ಸಾರಾಭಾಯಿ ಅವರು ನಮ್ಮ ಅಲ್ಲಿನ ನಿರ್ದೇಶಕರೊಡನೆ ಮತ್ತು ಇನ್ನೂ ಇಬ್ಬರು ಹಿರಿಯ ಅಧಿಕಾರಿಗಳೊಡನೆ ಒಂದು ಅಂಬಾಸ್ಯಡರ್ ಕಾರ್‌ನಲ್ಲಿ ಅದೇ ಜಾಗಕ್ಕೆ ಬಂದರು. ಕೃಷ್ಣನ್ ನಾಯರ್ ಈಗ ದಿಢೀರನೆ ಕಾರಿನ ಬಳಿ ಓಡಿ ಗೌರವದಿಂದ ಬಾಗಿಲು ತೆರೆದ. ಸಾರಾಭಾಯಿ ನಗು ನಗುತ್ತಾ ಹೊರಗೆ ಇಳಿದರು. ಕೃಷ್ಣನ್ ನಾಯರ್‌ಗೆ ಸಿಡಿಲು ಬಡಿದಂತಾಯಿತು. ಆಪ್ ಸಾರಾಭಾಯ್ ಸಾಬ್ ಕ್ಯಾ? ಮುಝೇ ಮಾಫ್ ಕೀಜೀಯೇ, ಮಾಫ್ ಕೀಜೀಯೇ ಅಂತ ಅವರ ಮುಂದೆ ನೆಲದ ಮೇಲೆ ದೀರ್ಘ ಸಾಷ್ಟಾಂಗ ನಮಸ್ಕಾರವನ್ನೇ ಹಾಕಿದ. ಅವನನ್ನು ಎತ್ತಿಹಿಡಿದು, ಸಾರಾಭಾಯಿ ನಗುತ್ತಲೇ ಸಮಾಧಾನಪಡಿಸಿ ರಾಕೆಟ್ ಬಳಿ ಹೋದರು! ಆಗರ್ಭ ಶ್ರೀಮಂತ ಮನೆತನದವರಾಗಿದ್ದು ಸರಕಾರದಿಂದ ತಿಂಗಳಿಗೆ ಒಂದು ರೂಪಾಯಿ ಸಂಬಳ ತೆಗೆದುಕೊಳ್ಳುತ್ತಿದ್ದ ಸಾರಾಭಾಯಿ ಅವರಿಗೆ, ಜುಬ್ಬ, ಪಾಯಿಜಾಮ, ಚಪಲಿ-ಇವೇ ಅವರ ದೈನಂದಿನ ವೇಷಭೂಷಣವಾಗಿದ್ದವು!

ಒಂದು ರಾಕೆಟ್‌ನ ಉಡಾವಣೆಗೆ ಕ್ಷಣಗಣನೆ ಆಗುತ್ತಿತ್ತು. ಟೀ ಮೈನಸ್ ಫೈವ್ ಮಿನಿಟ್ಸ್‌ನಲ್ಲಿ ಅಂದರೆ, ಉಡಾವಣೆಗೆ ಐದು ನಿಮಿಷಗಳ ಮುಂಚೆ ಎಲ್ಲಾ ಕಾರ್ಯ ನಿರತರೂ ತಮ್ಮ ತಮ್ಮ ಸ್ಥಳಗಳಿಂದ ಇಂಟರ್ ಕಾಮ್ ಮೂಲಕ ಉಡಾವಣ ನಿಯಂತ್ರಕನಿಗೆ

ಎಲ್ಲವೂ ಸರಿಯಿದೆ (ರೋಜರ್!) ಎಂದು ಖಾತರಿ ಪಡಿಸಬೇಕು. ಇಲ್ಲದಿದ್ದರೆ ಉಡಾವಣೆಯನ್ನು ತಡೆ ಹಿಡಿಯಬೇಕಾಗುತ್ತದೆ. ಸರಿ, ಆ ಸಮಯಕ್ಕೆ ಎಲ್ಲರೂ, ''ರೇಡಾರ್ ರೋಜರ್!'', ''ಟೆಲಿಮಿಟ್ರಿ ರೋಜರ್!'', ''ಮೆಟ್ ಆಫೀಸ್ ರೋಜರ್!'' ಅಂತ ಓಕೆ ಮಾಡಿದ್ರು. ನಮ್ಮ (ಅಬ್ದುಲ್ ಕಲಾಮ್ ಇದರ ಮುಖ್ಯಸ್ಥರಾಗಿದ್ದರು) ವಿಭಾಗಕ್ಕೆ ಪೇಲೋಡ್ ಇಂಟಗ್ರೇಷನ್ ಅಂತ ಅದರ ಹೆಸರು ಕಲಾಮ್ ಅವರು ''ರೋಜರ್!'' ಹೇಳಬೇಕಿತ್ತು. ಆದರೆ ಅವರಿಂದ ಯಾವ ಸಂದೇಶವೂ ಬರಲಿಲ್ಲ. ನಿಯಂತ್ರಣ ಕಾರರು ''ಕಲಾಂ, ವೇರ್ ಆರ್ ಯೂ? ಕನ್‌ಫರ್ಮ್ ರೋಜರ್!'' ಅಂತ ಎರಡು ಮೂರು ಬಾರಿ ಕೂಗಿದರೂ, ಅವರಿಂದ ಉತ್ತರವೇ ಬರಲಿಲ್ಲ. ಸರಿ, ಅವರ ಪರವಾಗಿ, ನಾನು ''ಪೇ ಲೋಡ್-ರೋಜರ್!'' ಅಂತ ಕೂಗಿದೆ. ನಾಲ್ಕು ನಿಮಿಷಗಳ ನಂತರ ರಾಕೆಟ್ ಉಡಾವಣೆ ಆಯಿತು. ನಿಯಂತ್ರಣ ಕಛೇರಿಯಿಂದ ಹೊರಗೆ ಬಂದು, ಕಲಾಂ ಎಲ್ಲಿ ಹೋದರು ಅಂತ ಸುತ್ತ ಮುತ್ತ ನೋಡಿದರೆ, ಅಲ್ಲಿ ನಿಂತಿದ್ದ ಒಂದು ರೋಡ್ ರೋಲರ್ ಮೇಲೆ ಕಾಲು ಮಡಿಚಿಕೊಂಡು ಕೂತಿದ್ದಾರೆ! ಕೆಳಗಡೆ ನೆಲದ ಮೇಲೆ, ಅಲ್ಲಿದ್ದ ಯಾವುದೋ ನಾಯಿ ಒಂದು ಅವರನ್ನು ನೋಡಿ ಗುರ್, ಗುರ್! ಅನ್ನುತ್ತಿದೆ. ಅದನ್ನು ಓಡಿಸಿದ ಮೇಲೆ ಅವರು ಕೆಳಗೆ ಇಳಿದು ಬಂದದ್ದು! ನಿಯಂತ್ರಣ ಕಛೇರಿಗೆ ಅವರು ನಡೆದು ಬರುತ್ತಿದ್ದಾಗ, ಈ ನಾಯಿ ಅವರನ್ನು ಹಿಂಬಾಲಿಸಿತಂತೆ!

ಕಲಾಂ ಕೆಲಸಕ್ಕೆ ರಜ ಹಾಕಿ ಅವರ ಊರಿಗೆ ಹೋಗುವುದಾಗಲೀ, ಅಥವಾ ರಜ ದಿನದಂದು ಸಿನಿಮಾ ಅಂತಹ ಮನೋರಂಜನೆಗಾಗಲೀ ಸಮಯ ಕೊಟ್ಟವರಲ್ಲ. ಆದರೂ ಒಮ್ಮೆ ನಮ್ಮ ಬಲವಂತದಿಂದಾಗಿ ಕಲಾಂ ಅವರೊಡನೆ ನಾವು ಮೂವರು ಸಹೋದ್ಯೋಗಿಗಳು ಎಲ್ಲರೂ ಬ್ರಹ್ಮಚಾರಿಗಳೇ- ವಿಹಾರಕ್ಕೆಂದು ಕೊಡೈಕೆನಾಲ್‌ಗೆ ಹೋದೆವು. ಮೂರು ದಿನಗಳಿಗೆಂದು ಹೋಟೆಲ್‌ನಲ್ಲಿ ನಾವು ರೂಮ್‌ಗಳನ್ನು ಕಾದಿರಿಸಿದ್ದೆವು. ಆದರೆ ನಾವು ಬಿಟ್ಟರೆ ಅಲ್ಲಿ ಇದ್ದ ಇತರೇ ಪ್ರವಾಸಿಗರೆಲ್ಲಾ ನವ ದಂಪತಿಗಳೇ ಮಧುಚಂದ್ರಕ್ಕಾಗಿ ಬಂದವರೇ! ಊಟದ ಮನೆಯಲ್ಲಾಗಲೀ, ವಿಹಾರದ ಬಸ್‌ನಲ್ಲೇ ಆಗಲಿ, ಈ ನವ ದಂಪತಿಗಳಿಗೇ ಆದ್ಯತೆ ಇತ್ತು. ಬಸ್‌ನಲ್ಲೇ ಆಗಲಿ, ಡೈನಿಂಗ್ ಹಾಲ್‌ನಲ್ಲೇ ಆಗಲೀ, ನಾವು ಕೊನೆಯವರೆಗೂ ನಿಂತೇ ಇರುತ್ತಿದ್ವಿ! ಕತ್ತು ತಗ್ಗಿಸಿಕೊಂಡು ನಾಚಿಕೆಯಿಂದ ಅಲ್ಲೀ ಇಲ್ಲೀ ನಿಂತಿರುವುದೇ ನಮ್ಮ ಹಣೇಬರಹವಾಗಿತ್ತು . ಈ ನಿರ್ಲಕ್ಷ್ಯದಿಂದ ಒದೆ ತಿಂದ ನಾವು ನಮ್ಮ ಮದುವೆಯಾಗುವವರೆಗೂ, ಈ ಕೊಡೈಕೆನಾಲ್‌ಗೆ ಮತ್ತೆ ಬರಬಾರದೆಂದು ಶಪಥ ಮಾಡಿದ್ವಿ. ನಾವೂ ಮೂವರು ನಮ್ಮ ಮದುವೆಯಾದ ನಂತರ ಕೊಡೈಗೆ ಹೋಗಿದ್ದೇನೋ ಆಯಿತು. ಆದರೆ ಅವರ ಕೊನೆಯ ದಿನದವರೆಗೂ, ಕಲಾಂ ಅವರು ಬ್ರಹ್ಮಚಾರಿಯಾಗಿಯೇ ಉಳಿದರು. ಹಾಗಾಗಿ ನಮ್ಮೊಡನೆ ಅವರು ಅಲ್ಲಿಗೇ ಬಂದದ್ದೇ ಅವರ ಕೊನೆಯ ''ವಿಹಾರ''ವಾಯಿತು. ಭಾರತದ ಬಾಹ್ಯಾಕಾಶ ಸಾಧನೆಗಳಿಗೆ ನಾಂದಿಯಾಗಿ, ಕಲಾಂ ಅವರ ನಿರ್ದೇಶನದಲ್ಲಿ ಮೂಡಿ ಬಂದ ಎಸ್.ಎಲ್.ವಿ-3 ಉಪಗ್ರಹ ಉಡಾವಣ ರಾಕೆಟ್, ಮೊದಲಬಾರಿಗೆ ಶ್ರೀ ಹರಿಕೋಟ ಕೇಂದ್ರದಿಂದ ಉಡಾವಣೆಯಾದಾಗ, ಒಂದು ತಾಂತ್ರಿಕ ದೋಷದಿಂದ, ರಾಕೆಟ್ ಭೂ ಕಕ್ಷೆಗೆ ಸೇರದೆ, ಬಂಗಾಳ ಕೊಲ್ಲಿಯಲ್ಲಿ ಕಣ್ಮರೆಯಾಯಿತು. ಆಗ ಎಸ್.ಎಲ್.ವಿ-3 (ಸ್ಯಾಟಲೈಟ್ ಲಾಂಚ್


ವೆಹಿಕಲ್-3 ಇದರ ಸಂಕ್ಷಿಪ್ತ ನಾಮ) ವಾಹನಕ್ಕೆ ಕೆಲವರು ಎಸ್.ಎಲ್.ವಿ ಅಂತ ಹೆಸರಿಟ್ಟರು ಅಂದರೆ, ಸೀ ಲೊವಿಂಗ್ ವೆಹಿಕಲ್ ಅಂತ! ಮತ್ತೊಬ್ಬ ತಮಿಳು ನಾಡಿನವರು, ನಮ್ಮ ಶಿವಕಾಶಿ ರಾಕೇಟ್ ಕಲಾಂ ಅವರ ರಾಕೆಟ್‌ಗಿಂತಲೂ ಚೆನ್ನಾಗಿ ಹೋಗುತ್ತಲ್ಲಾ! ಅಂತಲೂ ಕೊಂಕು ನುಡಿದರು. ಮೊದಲನೆಯ ಎಸ್.ಎಲ್.ವಿ-3 ಉಡಾವಣೆ ವಿಫಲವಾಗಿದ್ದು ತಿರುವನಂತಪುರದವರಿಗೆ ತಿಳಿಯದೇ ಇರುತ್ತದೆಯೆ? ಕಲಾಂ ಮತ್ತು ನಾವು ಕೆಲವು ಮಂದಿ (ಮದುವೆಗೆ ಮುಂಚೆ) ತಿಂಡಿ ಕಾಫಿಗೆಂದು ಹೋಗುತ್ತಿದ್ದ ಹೋಟೆಲ್‌ನವನು ''ರಾಕೆಟ್ ದೋಸೆ'' ಅಂತ ಒಂದು ಹೊಸ ಐಟಮ್ ಶುರುಮಾಡಿದ್ದ. ಸುಮಾರು ಎರಡು ಅಡಿ ಉದ್ದವಿದ್ದ ಈ ತೆಳು ದೋಸೆ, ರಾಕೆಟ್‌ನ ಮೂತಿ ರೂಪದಲ್ಲಿ ಮಾಡಿ, ತಟ್ಟೆಯಲ್ಲಿ ಇಟ್ಟು ಕೊಟ್ಟರೆ, ತಟ್ಟೆಯ ಹೊರಗೆ ಆ ಕಡೆ ಈ ಕಡೆ ಆರು ಇಂಚಿನಷ್ಟು ಹೊರಗೆ ನಿಲ್ಲುತ್ತಿತ್ತು. ''ಯಾಕೆ, ಇದನ್ನ ರಾಕೆಟ್ ಹೋಗೋ ಹಾಗೆ ನೆಟ್ಟಗೆ ಆಕಾಶದ ಕಡೆ ಮೂತಿಮಾಡಿ ತಟ್ಟೆಯಲ್ಲಿ ನಿಲ್ಲಿಸಿ ನಿಮ್ಮ ಗಿರಾಕಿಗಳಿಗೆ ಕೊಡಬಾರದು?'' ಅಂತ ಕೇಳಿದಾಗ, ಅವನು ''ಹೇಗಿದ್ದರೂ ನಿಮ್ಮ ರಾಕೆಟ್ ಮೇಲೆ ಹೋಗದೆ ಸಮುದ್ರಕ್ಕೆ ಬಿದ್ದು ಹೀಗೇ ತಾನೇ ತೇಲೋದೂ? ಅದಕ್ಕೆ ಹೀಗೇ ಕೊಡ್ತೀವಿ'' ಅಂತ ಹೇಳಿದ! ಈ ನಿಂದನೆಗಳಾವುದೂ ಕಲಾಂ ಅವರನ್ನು ಧೃತಿಗೆಡಿಸಲಿಲ್ಲ. ಅವರು ಹಾಕಿದ ತಾಂತ್ರಿಕ ತಳಪಾಯದಿಂದಾಗಿ, ಇಂದು ವಿಶ್ವದಲ್ಲೇ ಭಾರತ ಬಾಹ್ಯಾಕಾಶ ಕ್ಷೇತ್ರದಲ್ಲಿ ಒಂದು ಹಿರಿಯ ಸ್ಥಾನ ಪಡೆದಿದೆ. ನಮ್ಮ ಸಂಸ್ಥೆಗೆ ಎಂದೂ ಸ್ಥಳೀಯ ಸರ್ಕಾರದ ಸಹಕಾರ ಬೇಕಿತ್ತು. ಹಾಗಾಗಿ, ನಮ್ಮಲ್ಲಿ ಯಾವ ದೊಡ್ಡ ಸಮಾರಂಭವೇ ಆಗಲಿ, ಕೇರಳ ಸರ್ಕಾರದ ಪ್ರತಿನಿಧಿಗಳನ್ನು ಕರೆಯುವ ವಾಡಿಕೆ ಇತ್ತು. ಆಗಾಗ್ಗೆ ನಮ್ಮ ಮುಖ್ಯ ಅತಿಥಿಗಳು ಕೇರಳದ ಮುಖ್ಯ ಮಂತ್ರಿಗಳೂ ಆಗಿದ್ದರು. ಅಂತಹ ಎರಡು ಸಮಾರಂಭಗಳಿಗೆ ಇಬ್ಬರು ಮುಖ್ಯಮಂತ್ರಿಗಳನ್ನು ಹೊರಡಿಸಿಕೊಂಡು ನಮ್ಮ ಸಂಸ್ಥೆಗೆ ಕರೆದುಕೊಂಡು ಬರುವ ಕಾರ್ಯ ನನ್ನದಾಗಿತ್ತು. ಒಮ್ಮೆ ಅಂದಿನ ಮುಖ್ಯಮಂತ್ರಿಗಳಾಗಿದ್ದ ಕೆ. ಕರುಣಾಕರನ್ ಅವರನ್ನು ಕರೆತರಲು ಪೂರ್ವ ನಿಶ್ಚಿತ ಸಮಯಕ್ಕೆ ಅವರ ಕಛೇರಿಗೆ ಹೋದೆ. ಅವರ ಕಾರ್ಯದರ್ಶಿಗಳು ನನ್ನನ್ನು ಒಳಗೆ ಕರೆದು ಅವರಿಗೆ ಪರಿಚಯ ಮಾಡಿಸಿದರು. ಕರುಣಾಕರನ್ ಸುತ್ತಮುತ್ತ ಪಾರ್ಟಿ ಕೆಲಸದವರು, ಕೈನಲ್ಲಿ ಫೈಲ್‌ಗಳನ್ನು ಹಿಡಿದು ನಿಂತಿದ್ದ ಅಧಿಕಾರಿಗಳು, ಇನ್ನು ಯಾರು ಯಾರೋ ಇದ್ದರು. ಆ ಗುಂಪಿನ ಮಧ್ಯದಿಂದ ಕರುಣಾಕರನ್, ''ಎಷ್ಟು ಹೊತ್ತಿಗೆ ನಿಮ್ಮ ಸಮಾರಂಭ?'' ಅಂತ ನನ್ನನ್ನು ಕೇಳಿದರು. ನಾನು ಹನ್ನೊಂದು ಘಂಟೆಗೆ ಎಂದೆ. ಅವರ ಕಛೇರಿ ಗಡಿಯಾರ ಆಗಲೇ 10.30 ತೋರಿಸುತ್ತಿತ್ತು. ನಮ್ಮ ಕೇಂದ್ರ ಅಲ್ಲಿಂದ ಸುಮಾರು 15 ಕಿಲೋ ಮೀಟರ್‌ಗಳಷ್ಟು ದೂರವಿತ್ತು. ತವಕದಿಂದ ಕಾಯುತ್ತಿದ್ದೆ. 10.45ಕ್ಕೆ ನಡೆಯಿರಿ, ಹೋಗೋಣ ಅಂತ ಮೇಲೆದ್ದರು. ಹೊರಗೆ ಬಂದು ಅವರ ಪಕ್ಕದಲ್ಲೇ ಅವರ ಕಾರಿನಲ್ಲಿ ಕೂತೆ. ಮೆರವಣಿಗೆಯ ಹಾಗೆ ಅವರ ಕಾರಿನ ಮುಂದೆ ಎರಡು ಪೋಲೀಸ್ ಜೀಪ್‌ಗಳು, ಹಿಂದೆ ಎರಡು ಅಂಬಾಸಿಡರ್ ಕಾರ್‌ಗಳು ನಿಂತಿದ್ದವು. ಒಮ್ಮೆಲೇ ಜೀಪ್‌ನ ಸೈರನ್ ಬಡೆದುಕೊಂಡಿತು. ನಾನು ಅದುವರೆವಿಗೂ ಅನುಭವಿಸದ ಗತವೇಗದಲ್ಲಿ ಮಿಂಚಿನಂತೆ ಮೆರವಣಿಗೆ ರೋಡಿಗೆ ನುಗ್ಗಿತು. ತಕ್ಷಣವೇ ರೋಡ್ ಎಲ್ಲಾ ಖಾಲಿಯಾಯಿತು ನನಗೆ ಎದೆ ಬಡಿತ ಏರಿ ಹೊಟ್ಟೆಯಲ್ಲಿ ಏನೇನೋ ಅನುಭವಗಳಾಗತೊಡಗಿತು. ''ನಾನೊಬ್ಬ ರಾಕೆಟ್

ಎಂಜಿನಿಯರ್ ಇದುವರೆವಿಗೂ ರಾಕೆಟ್ ವೇಗವನ್ನು ಮೀರಿಹೋಗುವ ಸಾರಿಗೆ ವ್ಯವಸ್ಥೆ ಎಲ್ಲೂ ಇಲ್ಲ ಅಂತ ಅಂದುಕೊಂಡಿದ್ದೆ. ಆದರೆ, ನಿಮ್ಮ ಕಾರು ಆ ದಾಖಲೆಯನ್ನು ಮುರಿದಿದೆ'' ಎಂದೆ. ಕರುಣಾಕರನ್ ಜೋರಾಗಿ ನಕ್ಕರು. 11.05ಕ್ಕೆ ಸರಿಯಾಗಿ ನಮ್ಮ ಸಭಾಂಗಣದಲ್ಲಿ ಹಾಜರಾದರು! (ನಂತರ ಹೇಳಬೇಕಾದ್ದು ಕರುಣಾಕರನ್ ಅವರ ಕಾರು ವೇಗದಲ್ಲಿ ಹೋಗುವ ಹುಚ್ಚಿನಿಂದಾಗಿ, ಅನೇಕ ಅಪಘಾತಗಳಿಗೆ ಕಾರಣವಾಗಿತ್ತು ಎಂದು ಎಲ್ಲರಿಗೂ ತಿಳಿದ ಸಂಗತಿಯಾಗಿತ್ತು) ಮತ್ತೊಮ್ಮೆ ಅಂದಿನ ಮುಖ್ಯಮಂತ್ರಿಗಳಾಗಿದ್ದ ಇ.ಕೆ. ನಯ್ಯನ್ನಾರ್ ಅವರನ್ನು ಕರೆತರುವ ಕೆಲಸವೂ ನನ್ನದೇ ಆಯಿತು. ಸರಿಯಾದ ಸಮಯಕ್ಕೆ ಅವರನ್ನು ಆಫೀಸಿನಿಂದ ಹೊರಡಿಸಿ ನಮ್ಮ ಕೇಂದ್ರಕ್ಕೆ ಐದು ನಿಮಿಷಗಳ ಮುಂಚೆಯೇ ಬಂದು ನಮ್ಮ ನಿರ್ದೇಶಕರನ್ನು ಭೇಟಿ ಮಾಡಿಸಿ, ಸಭಾಂಗಣದಲ್ಲಿ ಕೂರಿಸಿದೆ. ಹಿಂದಿನ ಸಾಲಿನಲ್ಲಿ ನಾನೂ ಕೂತೆ. ನಮ್ಮ ನಿರ್ದೇಶಕರು ಅಂದು ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕಿದ್ದ ಕೆಲವು ವಿಷಯಗಳನ್ನೂ ಒಳಗೊಂಡು ಬಹಳ ಮುತುವರ್ಜಿಯಿಂದ ತಯಾರಿಸಿದ ಒಂದು ನಿರೂಪಣೆಯನ್ನು ಮಾಡಲು ವೇದಿಕೆಯ ಮೇಲೆ ಬಂದರು. ದೀಪಗಳೆಲ್ಲಾ ಆರಿದವು.

ಪರದೆಯ ಮೇಲೆ ಬಣ್ಣದ ಚಿತ್ರಗಳು ಮೂಡಿ ಬಂದವು. ನಿರ್ದೇಶಕರು ವಿವರಣೆಗೆ ಇಳಿದರು. ಇನ್ನೂ ಎರಡು ನಿಮಿಷಗಳೂ ಕಳೆದಿಲ್ಲ, ಎಲ್ಲಿಂದಲೋ ಗೊರ್! ಗೊರ್!! ಎಂಬ ಶಬ್ದ ಮುಂದಿನ ಸಾಲಿನಿಂದ ಕೂತಿದ್ದವರಿಗೆ ಕೇಳಿ ಬಂತು. ನೋಡಿದರೆ, ನಯ್ಯನ್ನಾರ್ ಅವರು ಕೂತಿದಲ್ಲೇ ಕಣ್ಮುಚ್ಚಿ ಗಾಢ ನಿದ್ರೆಯಲ್ಲಿದ್ದು ಗೊರಕೆ ಹೊಡೆಯುತ್ತಿದ್ದಾರೆ! ಪಾಪ, ಈ ವಿಷಯ ತಿಳಿಯದ ನಮ್ಮ ನಿರ್ದೇಶಕರು ಉತ್ಸಾಹದಿಂದ ತಮ್ಮ ಯೋಜನೆಗಳ ಬಗ್ಗೆ ಹೇಳಿದ್ದೂ ಹೇಳಿದ್ದೆ! ಸೋಜಿಗವೆಂದರೆ, ನಿರ್ದೇಶಕರ ನಿರೂಪಣೆ ಮುಗಿದೊಡನೇ, ಜಾದೂ ಮಾಡಿದ ಹಾಗೆ, ನಯ್ಯನ್ನಾರ್ ಅವರು ಕಣ್ಣು ಬಿಟ್ಟರು! ಈ ವಿಷಯವನ್ನು ನಾನು ನಮ್ಮ ನಿರ್ದೇಶಕರಿಗೆ ನಂತರ ತಿಳಿಸಿದಾಗ, ಅವರ ಮುಖ ಕೆಂಪಾಗಿ ನನ್ನನ್ನು ಸ್ವಲ್ಪ ಕೋಪದಿಂದಲೇ ನೋಡಿದರು. ''ಸರ್ ಅವರನ್ನು ಕರೆದುಕೊಂಡು ಬಂದು ಕೂರಿಸಲು ನನಗೆ ಹೇಳಿದಿರಿ. ನಾನು ಹಾಗೇ ಮಾಡಿದೆ. ಆದರೆ ಅವರ ಗೊರಕೆ ತಪ್ಪಿಸಲು ನಾನ್ಯಾರು?'' ಎಂದೆ. ನಿಜ ಅಂತ ಒಪ್ಪಿದರು.

ನನ್ನ ವೃತ್ತಿ ಜೀವನದಲ್ಲಿ ಆದ ಇಂತಹ ಕೆಲವು ಲಘು ಪ್ರಕರಣಗಳು ಆಗೊಮ್ಮೆ, ಈಗೊಮ್ಮೆ ಮರುಕಳಿಸಿ ಬರುತ್ತಲೇ ಇರುತ್ತವೆ!

✤



# Advertisement

**Advertisement**

# ಬಾಸ್ ಮನೆ ಎಲ್ಲಿರುತ್ತೋ, ಅದೇ ಏರಿಯಾದ ಅವರೇಕಾಯಿ ಚೀಫ್

**- ಸುಧೀಂದ್ರ ಹಾಲ್ದೊಡ್ಡೇರಿ**

ವಿಜ್ಞಾನದಲ್ಲಿ ಹಾಸ್ಯ ಎಂದೊಡನೆ ಪದೇ ಪದೇ ಪುನರಾವರ್ತನೆಯಾಗುವ ಬೆಕ್ಕಿನ ಜೋಕ್ ನೆನಪಿಗೆ ಬರುತ್ತದೆ. 'ಬೆಕ್ಕುಗಳ ಬಗ್ಗೆ ಅಪಾರ ಪ್ರೇಮವಿರಿಸಿಕೊಂಡಿದ್ದ ಆಲ್ಬರ್ಟ್ ಐನ್‌ಸ್ಟೀನ್ ತನ್ನ ಕೋಣೆಯ ಬಾಗಿಲಿಗೆ ಎರಡು ತೂತುಗಳನ್ನು ಕೊರೆಸಿದ್ದ. ದೊಡ್ಡ ಬೆಕ್ಕು ಅಡ್ಡಾಡಲು ದೊಡ್ಡ ತೂತು. ಚಿಕ್ಕ ಬೆಕ್ಕು ಅಡ್ಡಾಡಲು ಚಿಕ್ಕ ತೂತು.' ವಿಜ್ಞಾನಿಗಳು ಅಥವಾ ಪ್ರೊಫೆಸರುಗಳೆಂದ ಮೇಲೆ ಬಾಹ್ಯ ಜಗತ್ತಿಗೆ ಪೆಕರರಾಗಿಯೇ ಇರಬೇಕೆನ್ನುವ ನಂಬಿಕೆ ಹೆಚ್ಚಿರುವ ಕಾರಣ. ಈ ಜೋಕನ್ನು ನಾನು ಕನ್ನಡದಲ್ಲಿ ಓದುವುದನ್ನು ಕಲಿತಾಗಿನಿಂದಲೂ ಪತ್ರಿಕೆಗಳಲ್ಲಿ ಕಾಣುತ್ತಿದ್ದೇನೆ. ಒಮ್ಮೊಮ್ಮೆ ಇದೇ ಜೋಕನ್ನು ಐಸಾಕ್ ನ್ಯೂಟನ್ ಮೇಲೆ ಪ್ರಯೋಗಿಸಿರುವುದನ್ನೂ ನಾನು ಕಂಡಿದ್ದೇನೆ. ವೈಯೆನ್ಕೆ ಹೇಳುತ್ತಿದ್ದ ಮಾತೊಂದು ನೆನಪಿಗೆ ಬರುತ್ತಿದೆ. ಇಡೀ ಜಗತ್ತಿನಲ್ಲೇ ನಗಬಲ್ಲ ಜೋಕುಗಳ ಸಂಖ್ಯೆ ಕೇವಲ ನೂರು ಮಾತ್ರ. ಉಳಿದೆಲ್ಲವೂ ತಿರುಗುಂಚಿ ಮುರುಗುಂಚಿ ಅವೇ ಜೋಕುಗಳ ಅಪಭ್ರಂಶಗಳು.

ಸರ್ದಾರ್ಜಿ ಜೋಕುಗಳೆಂದೇ ಒಂದು ಕಾಲಕ್ಕೆ ಪ್ರಖ್ಯಾತವಾಗಿದ್ದ ಹಾಸ್ಯ ಸರಮಾಲೆಯಲ್ಲಿನ ಹೀರೋಗಳೆಂದರೆ ಸಂತಾ ಸಿಂಗ್ ಮತ್ತು ಬಂತಾ ಸಿಂಗ್. ಇದೀಗ ನಾನು ಹೇಳ ಹೊರಟಿರುವ ಜೋಕು ಸಿಂಗ್‌ಗಳ ಬಗ್ಗೆ. ಆದರೆ ಅದು ಸರ್ದಾರ್ ಸಿಂಗ್‌ಗಳ ಬಗ್ಗೆ ಅಲ್ಲ, ಅಪ್ಪಟ ಹಿಂದೂ ಸಿಂಗ್‌ಗಳ ಕುರಿತು. ಅಸಲಿಗೆ ಇದು ಜೋಕ್ ಸಹಾ ಅಲ್ಲ. ನಾನು ಬೇಸ್ತು ಬಿದ್ದ ಒಂದು ಘಟನೆ. 1991ರ ಸಮಯ. ದೆಹಲಿಗೆ ಅದು ನನ್ನ ಮೊದಲ ಯಾತ್ರೆ. ನಮ್ಮ ಡಿ.ಆರ್.ಡಿ.ಒ. ಸಂಸ್ಥೆಯ ಹೈದರಾಬಾದಿನ ಪ್ರಯೋಗಶಾಲೆಯಲ್ಲಿದ್ದ ಉನ್ನತ ಹುದ್ದೆಯೊಂದಕ್ಕೆ ನಾನು ಅರ್ಜಿ ಗುಜರಾಯಿಸಿದ್ದೆ. ಅದರ ಸಲುವಾಗಿ ಸಂದರ್ಶನಕ್ಕೆಂದು ಬೆಂಗಳೂರಿನಿಂದ ಮದ್ರಾಸಿಗೆ, ಅಲ್ಲಿಂದ ದೆಹಲಿಗೆ...... ಸುಮಾರು ಐವತ್ತು ಗಂಟೆಗಳ ಪಯಣ ನಡೆಸಿದ್ದೆ. ಡಿಸೆಂಬರ್ ತಿಂಗಳು, ಚಳಿ ಅಷ್ಟೆಲ್ಲಾ ಕೊರೆಯುತ್ತದೆಂಬ ಪರಿವೆಯೇ ಇಲ್ಲದೆ ನಾನು ಹೊರಟಿದ್ದೆ. ಆಗ ನನಗೆ ಹಿಂದಿ ಭಾಷೆಯ ಗಂಧಗಾಳಿಯ ಪರಿಚಯವೇ ಇರಲಿಲ್ಲ. ಹೈಸ್ಕೂಲಿನ ಮೂರು ವರ್ಷಗಳ ನಾನ್-ಕಂಪಲ್ಸರಿ ಹಿಂದಿಯಷ್ಟೇ ನನಗೆ ಗೊತ್ತಿತ್ತು. ಸಂದರ್ಶನ ದೆಹಲಿ ವಿಶ್ವವಿದ್ಯಾಲಯ ಸಮೀಪ ಲಖ್ನೋ ರೋಡ್‌ನಲ್ಲಿದ್ದ ಡಿ.ಆರ್.ಡಿ.ಒ ಕಚೇರಿಯಲ್ಲಿ ನಡೆಯಿತು. 'ಪಚ್ಚೀಸ್' ಹಾಗೂ 'ಪಚಾಸ್' ನಡುವಣ ವ್ಯತ್ಯಾಸ ಗೊತ್ತಿಲ್ಲದೆ ಹತ್ತಿಪ್ಪತ್ತು ರೂಪಾಯಿಯ ಹರಿದಾರಿಗೆ ಆಟೋ ಚಾಲಕನಿಂದ ಏಕ್ ಸೌ ಪಚಾಸ್‌ನ ಟೋಪಿ ಬೀಳಿಸಿಕೊಂಡಿದ್ದೆ. ಮರುದಿನ ಸೇನಾಭವನದ ಒಂದಷ್ಟು ಮಹಡಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಡಿ.ಆರ್.ಡಿ.ಒ. ಪ್ರಧಾನ ಕಚೇರಿಯಲ್ಲಿ ಸಣ್ಣದೊಂದು ಕೆಲಸವಿತ್ತು. ಚಳಿಗಾಲದಲ್ಲಿನ ದೆಹಲಿಯ ಸರ್ಕಾರಿ ಕಚೇರಿಗಳು ಚುಮುಚುಮು ಬಿಸಿಲು ತಟ್ಟುವ ತನಕ ಕಾರ್ಯಾರಂಭ ಮಾಡುವುದಿಲ್ಲ. ಹತ್ತು ಗಂಟೆಯಾದರೂ ನನಗೆ ಬೇಕಿದ್ದ ಆಡ್ಮಿನಿಸ್ಟ್ರೇಶನ್ ಸಿಬ್ಬಂದಿ ಕೈಗೆ ಸಿಗಲಿಲ್ಲ. ಮಿಲಿಟರಿ

ವಿಮಾನಗಳಿಗೆ ಸಂಬಂಧಿಸಿದ ಡಿ.ಟಿ.ಡಿ.ಅಂಡ್.ಪಿ. (ಏರ್) ಎಂಬ ಕ್ವಾಲಿಟಿ ಅಶ್ಯೂರೆನ್ಸ್ ನಿರ್ದೇಶನಾಲಯವು ಅದೇ ಕಟ್ಟಡದಲ್ಲಿ ಆಗ ಕಾರ್ಯನಿರ್ವಹಿಸುತ್ತಿತ್ತು. ಅದು ನಮ್ಮ ಡಿ.ಆರ್.ಡಿ.ಒ.ಗೆ ಹಿಂದೆ ಮಾತೃ ಸಂಸ್ಥೆಯಾಗಿತ್ತು. ಅಬ್ದುಲ್ ಕಲಾಮ್ ಅವರ ನೇಮಕವೂ ಇದೇ ಡಿ.ಟಿ.ಡಿ.ಅಂಡ್.ಪಿ. (ಏರ್)ನಲ್ಲಾಗಿತ್ತು.

ಬೆಂಗಳೂರಿನಲ್ಲಿ ನನ್ನ ನಿರ್ದೇಶಕರಾಗಿದ್ದವರು ಡಿ.ಟಿ.ಡಿ.ಅಂಡ್.ಪಿ. (ಏರ್)ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ತಮ್ಮ ಸ್ನೇಹಿತ...... ಸಿಂಗ್ ಅವರನ್ನು ಸಾಧ್ಯವಾದರೆ ಭೇಟಿ ಮಾಡಲು ನನಗೆ ಸೂಚಿಸಿದ್ದರು. ಬೋರ್ಡುಗಳನ್ನು ಓದುತ್ತಾ ಆ ಸಿಂಗ್ ಅವರ ಕಚೇರಿ ತಲುಪಿದೆ. ಅವರ ಪಿ.ಎ. ಇನ್ನೂ ಬಂದಿರಲಿಲ್ಲ. ಹೇಳಿ ಕೇಳಿ ಅದು ರಕ್ಷಣಾ ಮಂತ್ರಾಲಯದ ಕಚೇರಿ. ನೊಣ ಕೂಡಾ ಐಡೆಂಟಿಟಿ ಕಾರ್ಡುಗಳಿಲ್ಲದೆಯೇ ಒಳ ನುಗ್ಗುವ ಹಾಗಿಲ್ಲ. ಹೊಡೆಯಲು ನೊಣವೂ ಇಲ್ಲದೆಯೇ ಹಿಂದಿ ದಿನಪತ್ರಿಕೆಗಳ ಮೇಲೆ ಕಣ್ಣು ಹಾಯಿಸುತ್ತಾ ಕುಳಿತಿದ್ದೆ. ಬಾಗಿಲು ತೆರೆದ ಸದ್ದಾಯಿತು. ಸಫಾರಿ ಸೂಟ್ ತೊಟ್ಟ ನೇಪಾಳಿ ಚಹರೆಯ ಸುರುದ್ರೂಪಿಯೊಬ್ಬರು ಬ್ರೀಫ್‌ಕೇಸ್ ಹಿಡಿದು ರಾಜಗಾಂಭೀರ್ಯದಿಂದ ಬಂದರು. ದಢಕ್ಕೆಂದು ಎದ್ದು ನಿಂತೆ. ಆಶೀರ್ವಾದದ ಭಂಗಿಯಲ್ಲಿ 'ಬೈಟೀಯೆ...' ಎಂದು ಹೇಳಿ ಕೋಣೆಯ ಒಳಹೊಕ್ಕರು. 'ಅಂದರ್ ಆಯೀಯೆ...' ಎಂದು ಕರೆದ ಅವರು ಒಳಗಡೆ ನಿರ್ದೇಶಕರ ಎದುರಿಗಿದ್ದ ಸೋಫಾದಲ್ಲಿ ನನ್ನನ್ನು ಕುಳ್ಳಿರಿಸಿ ಕುಶಲೋಪರಿ ವಿಚಾರಿಸಿದರು. ನನಗೆ ಬರುತ್ತಿದ್ದ ಹರಕು-ಮುರುಕು ಹಿಂದಿಯಲ್ಲಿ ಮಾತುಕತೆಯಾಡಿ ಅವರಿಗೆ ನನ್ನ ನಜರ್ ಒಪ್ಪಿಸಿದ್ದಾಯಿತು. ಚಾಯ್‌ಪಾನಿಯ ಸೇವಾರ್ಥವೂ ಅವರಿಂದ ನಡೆಯಿತು. ಅವರಿಂದ ಬೀಳ್ಕೊಂಡಿದ್ದಾಯಿತು. ನಾನು ಕೊಟ್ಟ ಕಾಗದಗಳಿಗೆ ಉತ್ತರವನ್ನು ಮರುದಿನ ಕೊಡುವುದಾಗಿ ಅವರು ಹೇಳಿದರು.

ಮರುದಿನ ಮಧ್ಯಾಹ್ನದ ನಂತರ ಅದೇ ಕಚೇರಿಗೆ ಪಯಣ. ಬಾಗಿಲ ಬಳಿಯೇ ಸಿಕ್ಕ ಅಸ್ತವ್ಯಸ್ತ ಸೂಟಿನ ತಲೆಗೆದರಿದ ವ್ಯಕ್ತಿಯನ್ನು ಸಿಂಗ್ ಸಾಬ್ ಹೈ, ಅಂದರ್? ಎಂದು ಪ್ರಶ್ನಿಸಿದೆ?. 'ಮೈ ತೋ ಸಿಂಗ್' ಎಂದಾತ ಬಹುಶಃ ನಿರ್ದೇಶಕ 'ಸಿಂಗ್' ಅವರ ಪಿ.ಎ. ಅಥವಾ ಡ್ರೈವರ್ ಎಂಬ ಭಾವನೆ ನನ್ನದಾಯಿತು. ತಲಹರಟೆಯೆಂದು ಮನಸ್ಸಿನಲ್ಲಿಯೇ ಶಪಿಸುತ್ತಾ ನಾನು ಬಂದ ಉದ್ದಿಶ್ಯವನ್ನು ವಿವರಿಸಿ. ಬೇಕಿದ್ದ ಕಾಗದ ಪತ್ರದ ಬಗ್ಗೆ ವಿಚಾರಿಸಿದೆ. ಒಳ ನುಗ್ಗಿದಾತ ಆ ಪತ್ರಗಳನ್ನು ನನ್ನ ಕೈಗಿಟ್ಟ. ಮಧ್ಯಾಹ್ನ ಸೇನಾ ಭವನದಲ್ಲಿಯೇ ಜರುಗಲಿದ್ದ ಮೀಟಿಂಗ್ ಒಂದಕ್ಕೆ ನಾನು ಭಾಗವಹಿಸಬೇಕೆಂಬ ನಿರ್ದೇಶಕರ ಆದೇಶದ ಪತ್ರವನ್ನೂ ಜತೆಗೆ ನೀಡಿದ. ನಿರ್ದೇಶಕರಿಗಿಂತಲೂ ಅವರ ಸಿಬ್ಬಂದಿಗೇ ಧಿಮಾಕು ಜಾಸ್ತಿ ಎಂದು ಕೊಂಡು ಅಲ್ಲಿಂದ ಹೊರಟೆ. ಊಟ ಮುಗಿಸಿ, ಸೇನಾಭವನದಲ್ಲಿಯೇ ಇದ್ದ ಮಧ್ಯಾಹ್ನದ ಮೀಟಿಂಗಿಗೆ ಹೊರಟೆ. ಹಿಂದಿನ ಭೇಟಿ ಮಾಡಿದ ನಿರ್ದೇಶಕರೂ ಆ ಮೀಟಿಂಗಿಗೆ ಬರುವವರಿದ್ದರು. ಸ್ವಲ್ಪ ಹೊತ್ತಿನ ನಂತರ ಸಭೆಯಲ್ಲಿದ್ದ ಎಲ್ಲರೂ ಎದ್ದು ನಿಂತರು. ನಿನ್ನೆ ಕಂಡಿದ್ದ ಫೈಲುಗಳನ್ನು ಹೊತ್ತ 'ಸಿಂಗ್ ಸಾಹೇಬರ ಸಿಬ್ಬಂದಿಯ ಆಗಮನವಾಯಿತು. ದೆಹಲಿಯ ರೀತಿರಿವಾಜು ಹೀಗೆಯೇ ಇರಬಹುದೇನೊ. ಮೊದಲು ಸಿಬ್ಬಂದಿ ಫೈಲುಗಳನ್ನು ಮೇಜಿನ ಮೇಲಿರಿಸಿದ ನಂತರ ಸಾಹೇಬರು ಬರಬಹುದೆಂದುಕೊಂಡೆ. ಎಲ್ಲರಿಗೂ ಕೈ ಮುಗಿದ ಆ 'ಸಿಬ್ಬಂದಿ ಸಿಂಗ್',

ತಾನೇ ಮೀಟಿಂಗ್ ಶುರು ಮಾಡಿದ. ಸಫಾರಿ ನೋಡಿ ಬಾಸಿನ ಸಿಬ್ಬಂದಿಯನ್ನೇ ಬಾಸ್ ಎಂದುಕೊಂಡು ಮೋಸ ಹೋದದ್ದು ಆಗಷ್ಟೇ ಮನವರಿಕೆಯಾಯಿತು.

ಇದಕ್ಕೂ ಮುನ್ನ 1985ರಲ್ಲಿ ಐ.ಐ.ಎಸ್.ಸಿ.ಯ ಏರೋಸ್ಪೇಸ್ ಎಂಜಿನಿಯರಿಂಗ್ ವಿಭಾಗದಲ್ಲಿ ವೈಜ್ಞಾನಿಕ ಸಹಾಯಕನಾಗಿದ್ದಾಗಲೂ ಇಂಥದೊಂದು ಪ್ರಸಂಗ ನಡೆದಿತ್ತು. ಆ ಕಾಲದಲ್ಲಿ ಡಾ. ರೊದ್ದಂ ನರಸಿಂಹ ಅವರ ಹೆಸರು ವಿಜ್ಞಾನ ವಲಯದಲ್ಲಿ ಜಗದ್ವಿಖ್ಯಾತ. ಕೆಲಸಕ್ಕೆ ಸೇರಿದಾಗಿನಿಂದ ಒಮ್ಮೆಯಾದರೂ ಅವರನ್ನು ಮಾತನಾಡಿಸಬೇಕೆಂಬ ಹಂಬಲವಿತ್ತು. ಅಂದು ವೈಜ್ಞಾನಿಕ ಸಹಾಯಕರ ವಲಯದಲ್ಲಿ ಪ್ರಚಲಿತವಿದ್ದ ಜೋಕ್ ಎಂದರೆ, ತಿಂಗಳುಗಟ್ಟಲೆ ಅವರು ವಿದೇಶಗಳಲ್ಲಿರುತ್ತಾರೆ. ವಾರಗಟ್ಟಲೆ ಅವರು ಭಾರತದಲ್ಲಿರುತ್ತಾರೆ. ದಿನಗಟ್ಟಲೆ ಅವರು ಬೆಂಗಳೂರಿನಲ್ಲಿರುತ್ತಾರೆ. ನಿಮಿಷಗಟ್ಟಲೆ ಅವರು ಐ.ಐ.ಎಸ್.ಸಿ.ಯಲ್ಲಿರುತ್ತಾರೆ. ಸೆಕೆಂಡುಗಟ್ಟಲೆ ಮಾತ್ರ ಅವರು ತಮ್ಮ ಏರೋಸ್ಪೇಸ್ ಎಂಜಿನಿಯರಿಂಗ್ ವಿಭಾಗದಲ್ಲಿರುತ್ತಾರೆ. ಹೀಗೊಂದು ದಿನ ಐ.ಐ.ಎಸ್.ಸಿ.ಯ 'ಫೌಂಡೇಶನ್ ಡೇ.' ಅಂದು ಡಾ. ರೊದ್ದಂ ನರಸಿಂಹ ಅವರು 'ಆರ್ಡರ್ ಅಂಡ್ ಕೇಯೋಸ್ ಇನ್ ಫ್ಲೂಯಿಡ್ಸ್' ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ನೀಡುವವರಿದ್ದರು. ಚಲನೆಯಲ್ಲಿರುವಾಗ ದ್ರವಗಳು ಎದುರಿಸುವ ಕ್ಷೋಭೆ ಅಥವಾ ಏರೋಡೈನಮಿಕ್ಸ್‌ಗೆ ಸಂಬಂಧಿಸಿದ ವಿಷಯವೆಂದು ಸಭಾಂಗಣದ ಆಯಕಟ್ಟಿನ ಜಾಗವನ್ನು ಮೊದಲೇ ಹಿಡಿದಿದ್ದೆ. ಜತೆಗೆ ರೊದ್ದಂ ಅವರನ್ನು ಹತ್ತಿರದಿಂದ ಕಾಣುವ ತವಕವಿತ್ತು. ಉಪನ್ಯಾಸದ ಸಮಯಕ್ಕೆ ಕೊಂಚ ಮೊದಲು ಹಳದಿ ಟಿ-ಶರ್ಟ್, ಜೀನ್ಸ್ ಪ್ಯಾಂಟ್, ಕೆದರಿದ ಕೂದಲ ಫ್ರೆಂಚ್ ಗಡ್ಡದ ತರುಣರೊಬ್ಬರು ವೇದಿಕೆಯ ಬಳಿ ಬಂದರು. ಅವರ ಕೈ ತುಂಬಾ ಕಾಗದಗಳ ಹೊರೆಯಿತ್ತು. ರೊದ್ದಂ ಅವರ ಸಹಾಯಕನಿರಬಹುದೆಂದು ನಾವು ಯಾರೂ ಎದ್ದು ನಿಲ್ಲಲು ಹೋಗಲಿಲ್ಲ. ಚಾಕ್ ತುಣುಕನ್ನು ಹಿಡಿದು ಬೋರ್ಡಿನ ಬಳಿ ಸಾಗಿದಾಗಲೂ ನಮಗೆ ಆತ ರೊದ್ದಂ ಅವರ ಸಹಾಯಕನೇ ಎಂಬ ಭಾವನೆ ನಿರರ್ಗಳವಾಗಿ ದ್ರವ ಪರಿಚಲನೆಯ ಬಗ್ಗೆ ಅಸ್ಖಲಿತ ಇಂಗ್ಲಿಷ್‌ನಲ್ಲಿ ಮಾತನಾಡಲು ಹೊರಟ ನಂತರ 'ಆತ'ನೇ ರೊದ್ದಂ ಎಂದು ಗೊತ್ತಾಯಿತು.

ಈಗಿನ ಇಂಟರ್ ನೆಟ್ ಯುಗದಲ್ಲಿ 'ಗೂಗಲ್ ಗುರು'ವಿನ ನೆರವಿನಿಂದ ರೊದ್ದಂ ಅಷ್ಟೇ ಅಲ್ಲ 'ಕ್ಯಾಲ್ಟೆಕ್'ನಲ್ಲಿ ಅವರ ಗುರುಗಳು ಯಾರಾಗಿದ್ದರೆಂದು ಮೊದಲೇ ತಿಳಿಯಬಹುದು.

ಡಿ.ಆರ್.ಡಿ.ಒ.ದಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ನನ್ನ ನಿರ್ದೇಶಕರಾಗಿದ್ದವರು ದೆಹಲಿಗೆ ವರ್ಗಾವಣೆಗೊಂಡರು. ಜಯನಗರದಲ್ಲೇ ಅವರ ಮನೆಯಿದ್ದ ಕಾರಣ, ನನಗೆ ಅವರು ಹತ್ತಿರದವರಾಗಿದ್ದರು. ಕಾರ್ಯನಿಮಿತ್ತ ಬೆಂಗಳೂರಿಗೆ ಬಂದಾಗ ಕೆಲವೊಂದು ಸಂಜೆ ಅವರ ಮನೆಯಲ್ಲೇ ನನ್ನ ಭೇಟಿಯಾಗುತ್ತಿತ್ತು. ಹೀಗೊಂದು ದಿನ ಅವರ ಮನೆಯಲ್ಲಿ ಕಾಫಿ ಕುಡಿಯುತ್ತಿದ್ದಾಗ, ನನ್ನ ಇಮ್ಮೀಡಿಯಟ್ ಬಾಸ್‌ನ ಆಗಮನವಾಯಿತು. ಅಂದು ಬೆಳಗ್ಗೆಯಷ್ಟೇ ತಿರುಪತಿ ದರ್ಶನ ಮಾಡಿ ಬಂದ ಅವರ ತಲೆ ಟ್ಯೂಬ್‌ಲೈಟಿನ ಬೆಳಕಿಗೆ ಹೊಳೆಯುತ್ತಿತ್ತು. ಅಂದು ನಡೆದ ಈ ಮಾತುಕತೆ ಇಂದಿಗೂ ನನ್ನಲ್ಲಿ ನಗೆ ಉಕ್ಕಿಸುತ್ತಿದೆ.

'ಏನ್ರಿ, ಸಂತೋಷ್, ನಿಮ್ಮ ತಲೆ ಮೇಲೆ?', 'ಹೇ, ಏನಿಲ್ಲ ಸರ್, ತಿರುಪತಿಗೆ ಹೋಗಿದ್ದೆ. ಹಾಗೆ ಪ್ರಸಾದ ಕೊಟ್ಟು ಹೋಗೋಣ ಅಂತ ಬಂದಿದ್ದೆ.'

‘ಅದ್ಸರಿ ರೀ. ಏನು ನಿಮ್ಮ ತಲೆ ಮೇಲೆ’. ‘ಸರ್. ನೀವೂ ವೆಂಕಟೇಶ. ತಿರುಪತಿಯಲ್ಲಿರೋದೂ ವೆಂಕಟೇಶ. ನೀವು ಈ ಪೋಸ್ಟ್ ಕೊಡಿಸಿದ್ರಿ. ಆದಕ್ಕೆ ಆ ವೆಂಕಟೇಶನಿಗೆ ಮುಡಿ ಕೊಟ್ಟು ಬಂದೆ.’

‘ಎಲ್ಲಾ ಸರಿ ರೀ. ಅದೇನು ನಿಮ್ಮ ತಲೆ ಮೇಲೆ’

‘ಅದೇ ಸರ್, ಕೂದಲು ಕೊಟ್ಟು ಬಂದೆ’

ನನಗೆ ತಡೆಯಲಾಗದ ನಗು. ಪ್ರಮೋಶನ್ ಸಿಕ್ಕ ಖುಷಿಯಲ್ಲಿ ತಿರುಪತಿಗೆ ಹೋಗಿ, ಅವಸರದಲ್ಲಿಯೇ ಬಾಸನ್ನು ನೋಡಲು ಸ್ಕೂಟರ್ ಹತ್ತಿ ಬಂದಿದ್ದ ಅವರ ಬೋಳು ತಲೆಗೆ ಹೆಲ್ಮೆಟ್ಟಿನ ಹಸಿರು ಬಣ್ಣದ ಸ್ಪಾಂಜು ಚೂರು ಅಂಟಿಕೊಂಡಿತ್ತು. ಅದನ್ನು ನಾನೇ ಕೈಯಿಂದ ತೆಗೆದು ತೋರಿಸುವ ತನಕ ಸಂಕೋಚದ ಮುದ್ದೆಯಾಗಿದ್ದ ನನ್ನ ಇಮ್ಮೀಡಿಯಟ್ ಬಾಸ್. ತಿರುಪತಿಯಲ್ಲಿ ಕೊಟ್ಟ ಮುಡಿಯ ಬಗ್ಗೆ ಹೇಳುತ್ತಲೇ ಇದ್ದರು.

ಇದೇ ಇಮ್ಮೀಡಿಯಟ್ ಬಾಸಿಗೆ ದೆಹಲಿಯಲ್ಲಿದ್ದ ನಮ್ಮ ನಿರ್ದೇಶಕರನ್ನು ಕಂಡರೆ ವಿಪರೀತ ಭಯ ಭಕ್ತಿ. ಹೀಗೊಂದು ದಿನ ನನ್ನ ಹಿರಿಯ ಸಹೋದ್ಯೋಗಿ ವಿಶ್ವನಾಥ್ ನನಗೊಂದು ಸವಾಲು ಹಾಕಿದರು. ಇನ್ನು ಅರ್ಧ ಗಂಟೆಯಲ್ಲಿ ನಿಮ್ಮನ್ನು ಯಾವುದೇ ರಜೆಯ ಅಗತ್ಯವಿಲ್ಲದೆಯೇ ಮನೆಗೆ ಕಳುಹಿಸುವ ಏರ್ಪಾಟು ಮಾಡುತ್ತೇನೆಂದರು. ನಾನು ಸಹಾ ಸಾಧ್ಯವಿಲ್ಲ ಎಂದು ಸವಾಲು ಸ್ವೀಕರಿಸಿದೆ. ಹೆಚ್.ಎ.ಎಲ್.ನ ಡಿಸೈನರುಗಳೊಂದಿಗೆ ಟರ್ಬೈನ್ ಕೇಸಿಂಗ್ ಕ್ಲಿಯರೆನ್ಸ್ ಬಗ್ಗೆ ಗಂಭೀರ ಚರ್ಚೆ ನಡೆಸುತ್ತಿದ್ದಾಗ, ನನ್ನ ಬಾಸಿನ ಭಂಟ ಕೋದಂಡರಾಮನ್ ಬಂದು ‘ಬಾಸ್ ಕಾಲಿಂಗ್ ಇಮ್ಮೀಡಿಯಟ್ಲಿ’ ಎಂದು ಒದರಿದ. ಆಮೇಲೆ ಬರುತ್ತೀನೆಂದು ಹೇಳು ಎಂದರೂ ಕೇಳದ ಕೋದಂಡರಾಮನ್ ಇಮ್ಮೀಡಿಯಟ್ ಯೂ ಓನ್ಲಿ ಬ್ರಿಂಗ್ ಡೈರೆಕ್ಟ್ಲಿ ಎಂದಿದ್ದಾರೆಂದು ತಮಿಳು-ಇಂಗ್ಲಿಷ್ ಮಿಶ್ರಣದಲ್ಲಿ ಒದರಿದ. ವಿಶ್ವನಾಥ್ ಅವರ ಸವಾಲು ಆ ಸಮಯಕ್ಕೆ ನನಗೆ ಮರೆತೇ ಹೋಗಿತ್ತು. ಬಾಸಿಸಂ ಹಿಡಿಸದ ನನಗೆ ಸಂತೋಷ್ ಅವರ ರೂಮಿನೊಳಗೆ ಬೇಸರ ಪಟ್ಟುಕೊಂಡೇ ಹೋದೆ.

ರೂಮಿನಲ್ಲಿ ಶಥಪಥ ತಿರುಗುತ್ತಿದ್ದ ಬಾಸು ‘ಏನ್ರಿ, ಇದು ಎಷ್ಟು ಹೊತ್ತಿನಿಂದ ನಿಮ್ಮನ್ನು ಹುಡುಕುತ್ತಿದ್ದೇನೆ’ ಎಂದರು.

‘ಕೆಲಸದಲ್ಲಿದ್ದೆ, ಸರಿ, ಏನು ಅರ್ಜೆಂಟಾಗಿ ಕರೆಸಿದ್ದು’ ಎಂದು ಅನಾಸಕ್ತನಾಗಿ ಕೇಳಿದೆ.

‘ಇಮ್ಮೀಡಿಯಟ್ಲಿ ನೀವು ನಿಮ್ಮ ಮನೆಗೆ ಹೋಗಿ, ಅಲ್ಲಿ ದೆಹಲಿಯ ನಮ್ಮ ಡೈರೆಕ್ಟರ್ ಅವರ ಚಾರ್ಟರ್ಡ್ ಅಕೌಂಟೆಂಟ್ ಸೋಮನಾಥ್ ಅವರು ಸಿಗುತ್ತಾರೆ. ಡೈರೆಕ್ಟರ್ ಅವರ ಇನ್‌ಕಮ್ ಟ್ಯಾಕ್ಸ್ ರಿಟರ್ನ್ ಅಲ್ಲಿ ಏನೋ ಪ್ರಾಬ್ಲಮ್ ಇದೆಯಂತೆ. ಅದಕ್ಕೆ ಸಂಬಂಧಪಟ್ಟ ಕಾಗದ-ಪತ್ರಗಳನ್ನು ಅವರು ಕೊಡ್ತಾರೆ. ಅದನ್ನು ತೆಗೆದುಕೊಂಡು ನೀವು ನಾಳೆ ಆಫೀಸಿಗೆ ಬನ್ನಿ. ಅಡಿಶನಲ್ ಡೈರೆಕ್ಟರ್ ಗುರುರಾಜ್ ದೆಹಲಿಗೆ ಹೋಗ್ತಿದಾರೆ. ಅವರ ಕೈಯಲ್ಲಿ ಅವೆಲ್ಲಾ ಕಳಿಸೋಣವಂತೆ. ಡ್ರೈವರ್ ರಾಮ್ ಬಾಬುಗೆ ಹೇಳಿದೀನಿ. ನಿಮ್ಮನ್ನು ಈಗಲೇ ಅವರು ಮನೆಗೆ ಡ್ರಾಪ್ ಮಾಡ್ತಾರೆ’ ಎಂದು ಆದೇಶಿಸಿದರು.

ಆಗ ನನಗೆ ಮನವರಿಕೆಯಾಯಿತು, ಇದೆಲ್ಲವೂ ನನ್ನ ಸಹೋದ್ಯೋಗಿ ವಿಶ್ವನಾಥ್ ಅವರ ಕಿತಾಪತಿ ಎಂದು ನಸುನಗುತ್ತಲೇ

‘ಸರ್, ಡೈರೆಕ್ಟ್ರು ನಿಮಗೆ ಫೋನ್ ಮಾಡಿದ್ರಾ?’ ಎಂದೆ.

‘ಇಲ್ರೀ, ಅವರ ಸಿ.ಎ. ಸೋಮನಾಥ್ ಫೋನ್ ಮಾಡಿ ಎಲ್ಲಾ ವಿಷ್ಯ ಹೇಳಿದ್ರು. ಎರಡೂವರೆ ನಂತರ ಅವರು ಸಿಗಲ್ವಂತೆ.

ಅಷ್ಟರೊಳಗೆ ಅವರು ನಿಮ್ಮನ್ನು ಮೀಟ್ ಮಾಡ್ಬೇಕಂತೆ, ಬೇಗ ಹೊರಡಿ’ ಎಂದು ಮತ್ತೆ ಪುಸಲಾಯಿಸಿದರು.

‘ಒಂದ್ಸಲ, ದೆಹಲಿಗೆ ಫೋನ್ ಮಾಡಿ ವಿಷಯ ತಿಳ್ಕೊಂಡು ಬಿಡೋಣ. ಕೇಳ್ಬಿಡಿ ಸರ್’ ಎಂದೆ. ‘ನೊ. ನೋ. ಅವರು ಬ್ಯುಸಿ ಇರ್ತಾರೆ, ಹಂಗೆಲ್ಲಾ ಡಿಸ್ಟರ್ಬ್ ಮಾಡಕ್ಕಾಗಲ್ಲ. ಅದಕ್ಕೇ ಅವರು ಸೋಮನಾಥ್ ಅವರಿಗೇ ನೇರವಾಗಿ ಫೋನ್ ಮಾಡಿ ನನಗೆ ವಿಷ್ಯ ತಿಳಿಸೋಕ್ಕೆ ಹೇಳಿದ್ರಂತೆ. ನೀವು ಸುಮ್ಮನೆ ಹೊರಡಿ’ ಎಂದು ಬಲವಂತವಾಗಿ ಕಾರು ಹತ್ತಿಸಿ, ಮತ್ತೆ ತಮ್ಮ ಕಚೇರಿಗೆ ಹೋದರು. ಅಂದಿನ ಸಮಯದಲ್ಲಿ ಮೊಬೈಲ್ ಫೋನಿರಲಿ, ಮನೆಗೇ ಲ್ಯಾಂಡ್‌ಲೈನ್ ಫೋನಿರದಿದ್ದ ಕಾಲ. ಮನೆಗೆ ಬಂದೆ, ಯಾವ ಸೋಮನಾಥನೂ ನನ್ನ ಮನೆಗೆ ಬರಲಿಲ್ಲ.

ಮರುದಿನ ಕಚೇರಿಗೆ ಬಂದೆ. ಬಾಸ್ ಬಂದಿರಲಿಲ್ಲ. ಗೆಳೆಯ ವಿಶ್ವನಾಥ್ ‘ಇವತ್ತು ಇಂದಿರಾನಗರದ ಶಾಂತಿಸಾಗರದಲ್ಲಿ ನೀವು ಮಸಾಲೆದೋಸೆ ಕೊಡಿಸಬೇಕು. ನಿನ್ನೆ ನಿಮಗೆ ಪುಕ್ಕಟೆ ರಜೆ ಸಿಗೋ ಹಾಗೆ ಮಾಡಿದ್ದಕ್ಕೆ’ ಎಂದು ನಕ್ಕರು. ಅದ್ಸರಿ, ಈ ಕಾಗದ ಪತ್ರದ ವಿಷ್ಯ’ ಎಂದು ಕೇಳಿದಾಗ ಮತ್ತೆ ಬಾಯ್ತುಂಬಾ ನಕ್ಕ ವಿಶ್ವನಾಥ್ ನೀವು ಮನೆಗೆ ಹೋದ ಮೇಲೆ ಮತ್ತೆ ಹೆಚ್.ಎ.ಎಲ್. ಫೋನಿನಿಂದ ಬಾಸಿಗೆ ಫೋನ್ ಮಾಡಿ. ‘ಪೇಪರ್ ಎಲ್ಲಾ ನನ್ನ ಆಫೀಸಿನಲ್ಲಿಯೇ ಇತ್ತು. ಸುಧೀಂದ್ರ ಅವರ ಮನೆಗೆ ನಾನು ಹೋಗ್ತಾ ಇಲ್ಲ. ಅವರಿಗೆ ವಿಷ್ಯ ತಿಳಿಸಿ’ ಎಂದು ಧ್ವನಿ ಬದಲಿಸಿಕೊಂಡು ಹೇಳಿದ್ದೆ ಎಂದರು. ಮಾತು ಮುಂದುವರೆಸಿದ ಅವರು ‘ಆದರೂ ಬಾಸ್ ತುಂಬಾ ಪೇಚಾಡಿಕೊಂಡರು. ಕೆಲಸದ ಮಧ್ಯದಲ್ಲಿದ್ದ ಸುಧೀಂದ್ರ ಅವರನ್ನು ಗದರಿಸಿ ಮನೆಗೆ ಕಳುಹಿಸಿದೆ. ವಿಷ್ಯ ತಿಳಿಸೋಣ ಅಂದ್ರೆ ಅವರ ಮನೆಯಲ್ಲಿ ಫೋನ್ ಇಲ್ಲ. ಪಾಪ ಏನನ್ಕೊಂಡ್ರೊ’ ಎಂದಾಗ ಹೊಟ್ಟೆ ತುಂಬಾ ನಗುವ ಸರದಿ ನನ್ನದಾಗಿತ್ತು. ಎಣಿಕೆಯಂತೆ ಬಾಸ್ ನನ್ನ ಮೇಜಿನ ಬಳಿಗೇ ಬಂದು ‘ಸಾರಿ ರೀ. ನಿಮಗೆ ನಿನ್ನೆ ತೊಂದರೆ ಕೊಟ್ಟೆ’ ಎಂದು ಕ್ಷಮೆ ಕೇಳಿದಾಗ ಹೌದೆನ್ನದೆಯೇ ವಿಧಿಯಿರಲಿಲ್ಲ. ಅಂದು ಮನೆಗೆ ಬೇಗ ಬಂದವನು ಜಯನಗರ ಫೋರ್ಥ್ ಬ್ಲಾಕಿನಲ್ಲಿ ಹೆಂಡತಿ ಜತೆ ಮಸಾಲೆದೋಸೆ ತಿಂದು ಬಂದಿದ್ದು ನೆನಪಾಯಿತು.

ಮೊನ್ನೆ ಮಾತಿಗೆ ಸಿಕ್ಕ ವಿಜ್ಞಾನಿ ಡಾ. ಆರ್.ಎಂ. ವಾಸಗಂ ಹೇಳಿದ ಹಿತವಚನವೊಂದು ಈಗ ನೆನಪಾಯಿತು. ವಿಜ್ಞಾನಿಗಳು ಮಾಡುವ ಕೆಲಸ ಫೂಲ್–ಪ್ರೂಫ್ ಆಗಿದ್ದರೆ ಮಾತ್ರ ಸಾಲದು. ಈಡಿಯಟ್–ಪ್ರೂಫ್ ಕೂಡಾ ಆಗಿರಬೇಕು. ಈ ಬುದ್ಧಿ ಮಾತನ್ನು ಅವರಿಗೆ ಪರಮಾಣು ಸಂಶೋಧನಾ ಸಂಸ್ಥೆಯ ಮುಖ್ಯಸ್ಥರಾಗಿದ್ದ ಡಾ. ಹೆಚ್.ಎನ್. ಸೇಥ್ನಾ ಹೇಳಿದ್ದರಂತೆ. ಪರಮಾಣು ವಿದ್ಯುತ್ ಕೇಂದ್ರದ ನಿಯಂತ್ರಣ ಕೊಠಡಿಗಳು ದಿನದ

ಇಪ್ಪತ್ನಾಲ್ಕು ಗಂಟೆಗಳೂ ಕಾರ್ಯನಿರ್ವಹಿಸಬೇಕು. ಆ ಕಾರಣ, ಮೂರು ಶಿಫ್ಟ್‌ಗಳಲ್ಲಿ ವಿಜ್ಞಾನಿಗಳು ಹಾಗೂ ತಂತ್ರಜ್ಞರು ಅಲ್ಲಿ ಕೆಲಸ ಮಾಡುತ್ತಾರೆ. ಎರಡನೆಯ ಶಿಫ್ಟ್‌ನಿಂದ ಮೂರನೆಯ ಶಿಫ್ಟ್‌ಗೆ ಬದಲಾಗುವ ಸಮಯ. ಊಟ ಮುಗಿಸಿ ಬಂದಿದ್ದ ಮೂರನೆಯ ಶಿಫ್ಟಿನ ವಿಜ್ಞಾನಿ ಎರಡನೆಯ ಶಿಫ್ಟಿನಲ್ಲಿದ್ದ ವಿಜ್ಞಾನಿಯ ಹೆಗಲ ಮೇಲೆ ಬಲವಾಗಿ ಚಪ್ಪರಿಸಿದ. ಅಚಾನಕ್ಕಾಗಿ ಬಿದ್ದ ಏಟಿಗೆ ತನ್ನ ಎರಡೂ ಕೈಗಳನ್ನು ನಿಯಂತ್ರಣ ಫಲಕದ ಮೇಲೆ ದೂಡ ಬೇಕಾಯಿತು. ಆ ಸಂದರ್ಭದಲ್ಲಿ ಕೆಲವೊಂದು ತುರ್ತು ಪರಿಸ್ಥಿತಿಯಲ್ಲಿ ಬಳಸುವಂಥ ಚಾಲಕ ಸಲಾಕೆಗಳು ಕಾರ್ಯನಿರ್ವಹಿಸಿ, ವಿದ್ಯುತ್ ಸ್ಥಾವರವೇ ಸ್ಥಗಿತಗೊಳ್ಳುವಂತಾಗಿತ್ತು. ವಿಜ್ಞಾನಿಗಳು 'ಫೂಲ್'ಗಳಷ್ಟೇ ಅಲ್ಲ. 'ಈಡಿಯಟ್'ಗಳೂ ಆಗಬಾರದೆಂಬುದಕ್ಕೆ ಇದು ಉದಾಹರಣೆ. ಕಳೆದ ಅಕ್ಟೋಬರಿನಲ್ಲಿ ಕೈಗಾ ಪರಮಾಣು ಸ್ಥಾವರಕ್ಕೆ ಭೇಟಿಯಿತ್ತಾಗ ನಿಯಂತ್ರಣ ಕೊಠಡಿಯಲ್ಲಿ ಫಲಕದ ಸಮೀಪ ಅತಿಥಿಗಳು ಹೋಗುವ ಹಾಗಿರಲಿಲ್ಲ. ವಿದ್ಯುತ್ ಸ್ಥಾವರವನ್ನು ಹತ್ತಿರದಿಂದ ನೋಡುವ ನನ್ನ ಪ್ರಯತ್ನಗಳಿಗೆ ಸುತ್ತಲ ಸಲಾಕೆಗಳು ಅಡ್ಡಿಪಡಿಸುತ್ತಿದ್ದವು.

ದೆಹಲಿಯಲ್ಲಿದ್ದ ನಮ್ಮ ನಿರ್ದೇಶಕರು ಮುಂದೆ ಬೆಂಗಳೂರಿಗೇ ವರ್ಗವಾದರು. ನನ್ನ ಇಮ್ಮೀಡಿಯಟ್ ಬಾಸ್ ಅವರಂತೂ ಭಾನುವಾರಗಳಂದು ಏನಾದರೂ ನೆಪದ ಮೇಲೆ ಅವರನ್ನು ಭೇಟಿ ಮಾಡಲು ಬರುತ್ತಿದ್ದರು. ಹೀಗೊಂದು ಮುಂಜಾನೆ ನಮ್ಮ ಮನೆಗೆ ಧಾವಿಸಿದರು. ನಾನು ತಮಾಷೆಗೆ 'ಏನ್ಸಾರ್, ಡೈರೆಕ್ಟ್ರು ಸಿಗಲಿಲ್ವಾ?' ಎಂದೆ. 'ಇಲ್ಲಪ್ಪ. ನಾನು ಅವರ ಮನೆಗೇ ಅಂತಾ ಬಂದಿರಲಿಲ್ಲ. ನಿಮ್ಮ ಜಯನಗರ ನೈಂಥ್ ಬ್ಲಾಕಲ್ಲಿ ಅವರೆಕಾಯಿ ಚೀಪ್, ಅಲ್ವಾ. ಅದಕ್ಕೇ ಬಂದಿದ್ದೆ. ಹಾಗೇ ನಿಮ್ಮನ್ನೂ ನೋಡ್ಕೊಂಡು ಹೋಗೋಣ ಅಂತ ಬಂದೆ' ಅಂದರು. ಕಾಲಾಂತರದಲ್ಲಿ ಆ ಡೈರೆಕ್ಟರ್ ನಿವೃತ್ತರಾದರು. ಬಸವನಗುಡಿಯಲ್ಲಿ ವಾಸ ಮಾಡುತ್ತಿದ್ದವರೊಬ್ಬರು ಅವರ ಸ್ಥಾನಕ್ಕೆ ನಿಯೋಜಿತರಾದರು. ಹೀಗೊಂದು ದಿನ ನನ್ನ ಇಮ್ಮೀಡಿಯಟ್ ಬಾಸ್ ಅನ್ನು ತಮಾಷೆಗಾಗಿ ಕೇಳಿದೆ – 'ಏನು ಸರ್, ಅವರೆಕಾಯಿ ತೊಗೊಳ್ಳೋಕೆ ಇತ್ತೀಚೆಗೆ ಜಯನಗರಕ್ಕೆ ಬರಲೇ ಇಲ್ಲ.' ಯಾವ ಮುಲಾಜು ಇಲ್ಲದೆಯೇ ಅವರೆಂದರು ನಿಮ್ಮ ಜಯನಗರ ನೈಂಥ್ ಬ್ಲಾಕ್ ತುಂಬಾ ಕಾಸ್ಟ್ಲಿ ರೀ. ಅಲ್ಲಿ ಕೊಡೋ ಅರ್ಧದಷ್ಟು ಬೆಲೆಯಲ್ಲಿಯೇ ಗಾಂಧಿಬಜಾರಿನಲ್ಲಿ ಅವರೆಕಾಯಿ ತೊಗೋಬಹುದು.' ಮುಂದೆ ಅವರೂ ನಿವೃತ್ತರಾದ ಮೇಲೆ ಡೈರೆಕ್ಟರ್ ಆದವರ ಮನೆ ಸಿ.ವಿ. ರಾಮನ್ ನಗರದಲ್ಲಿತ್ತು. ಬಹುಶಃ ಇಂದಿರಾ ನಗರದಲ್ಲಿ ತರಕಾರಿ ಬೆಲೆ ಚೀಪ್ ಆಗಿದ್ದಿರಬಹುದು. ಮನೆಗೆ ತರಕಾರಿ ಇರಲಿ. ತಾವುದೇ ದಿನಸಿಯನ್ನೂ ತರುವ ಅಭ್ಯಾಸವಿಲ್ಲದ ನನಗೆ ಈ ಎಲ್ಲ ಸೂಕ್ಷ್ಮಗಳೂ ಹೇಗೆ ಗೊತ್ತಾಗಬೇಕು?

---

★ ವಿಶ್ವವಿದ್ಯಾಲಯವೊಂದರಲ್ಲಿ ಏರೋಸ್ಪೇಸ್ ಎಂಜಿನಿಯರಿಂಗ್ ಪ್ರಾಧ್ಯಾಪಕರಾಗಿರುವ ಸುಧೀಂದ್ರ ಎರಡು ದಶಕಗಳ ಕಾಲ ಡಿ.ಆರ್.ಡಿ.ಒ.ದಲ್ಲಿ ವಿಜ್ಞಾನಿಯಾಗಿದ್ದರು.

✤

# ಕೈಲಾಸಂ ಕೈ ಕೊಳೆ ಮಾಡಿಕೊಂಡದ್ದು

**- ಟಿ.ಆರ್. ಅನಂತರಾಮು**

**ಕೈ**ಲಾಸಂ ಅವರನ್ನು ನೂರು ಮಾತುಗಳಲ್ಲಿ ವರ್ಣಿಸುವುದಕ್ಕಿಂತ 'ಕನ್ನಡಕ್ಕೊಬ್ಬನೇ ಕೈಲಾಸಂ' ಎಂಬ ಒಂದು ನುಡಿಯೇ ಸಾಕು. ಹೊಸ ಬಗೆಯ ನಾಟಕಗಳನ್ನು ಸೃಷ್ಟಿಸಿ, ಇಂಗ್ಲಿಷ್ ಬೆರೆತ ಕನ್ನಡದ ಸಂಭಾಷಣೆ ಬರೆದು ಕನ್ನಡ ನಾಟಕಗಳಿಗೆ ಹೊಸ ಬಗೆಯ ತಿನಿಸುಕೊಟ್ಟ ಕೈಲಾಸಂ ಅವರು ಬಹುಬೇಗ ಜನಪ್ರಿಯರಾದರು. ಅವರ ನಾಟಕಗಳನ್ನು ಆಡುವುದೆಂದರೆ ಕಲಾವಿದರಿಗೂ ಖುಷಿ. ಪ್ರೇಕ್ಷಕರಿಗೂ ಖುಷಿ. ಅನೇಕರಿಗೆ ಇನ್ನೊಂದು ಸಂಗತಿ ಹೆಚ್ಚು ತಿಳಿದಿರಲಾರದು. ಅವರು ವೃತ್ತಿ ಪ್ರಾರಂಭಿಸಿದ್ದು ಮೈಸೂರು ಭೂವಿಜ್ಞಾನ ಇಲಾಖೆಯಲ್ಲಿ. ಡಿಸೆಂಬರ್ 16, 1915ರಲ್ಲಿ. ಹೆಚ್ಚು ಕಡಿಮೆ ಅದೇ ಕಾಲಕ್ಕೆ ಇವರ ಜೊತೆ ಸೇರಿದವರು ಬಿ. ರಾಮರಾವ್ (ಮುಂದೆ ಇಲಾಖೆಯ ನಿರ್ದೇಶಕರಾದರು) ಮತ್ತು ವೇಣುಗೋಪಾಲ್. ಕೈಲಾಸಂ ನಾಲ್ಕೂವರೆ ವರ್ಷ ಕಾಲ ಆ ಇಲಾಖೆಯಲ್ಲಿದ್ದರು. ಅಪ್ರೆಂಟಿಸ್ ಆಗಿ ಸೇರಿ ಕೊನೆಗೆ ಸಬ್ ಅಸಿಸ್ಟೆಂಟ್ ಜಿಯಾಲಜಿಸ್ಟ್ ಆಗಿ, 1920ರ ಜುಲೈನಲ್ಲಿ ಇಲಾಖೆಯಿಂದ ಹೊರಬಂದರು. ಈ ಅವಧಿಯಲ್ಲಿ ಕೈಲಾಸಂ ಅವರು ತೋರುತ್ತಿದ್ದ ಪ್ರತಿಭೆಯನ್ನು ರಾಮರಾವ್ ಅವರು ಬರೆದ ಆತ್ಮಕಥೆ 'ದಿ ರಿಕಲೆಕ್ಷನ್ಸ್ ಆಫ್ ಆ್ಯನ್ ಇಂಡಿಯನ್ ಜಿಯಾಲಜಿಸ್ಟ್' ಎಂಬುದರಲ್ಲಿ ಸ್ಮರಿಸಿದ್ದಾರೆ.

ಒಮ್ಮೆ ವೇಣುಗೋಪಾಲ್ ಫೀಲ್ಡ್‌ನಿಂದ ಒಂದು ಕಚ್ಚಾ ಕೊರಂಡಮ್ ಖನಿಜವನ್ನು ತಂದು 'ಅಯ್ಯೋ, ಇದೇನಾದರೂ ಪರಿಶುದ್ಧವಾಗಿದ್ದು, ಪಾರದರ್ಶಕವಾಗಿದ್ದಿದ್ದರೆ ಎಂಥ ಬೆಲೆಬಾಳುವ ಮಾಣಿಕ್ಯ ಆಗುತ್ತಿತ್ತು' ಎಂದಾಗ, ಪಕ್ಕದಲ್ಲೇ ಇದ್ದ ಕೈಲಾಸಂ 'ಹೌದು ಆಂಟಿಗೆ ದೊಡ್ಡ ಮೀಸೆ ಇದ್ದಿದ್ದರೆ ಅವರು ಅಂಕಲ್ ಆಗುತ್ತಿದ್ದರು. ಏನು ಮಾಡುವುದು, ಆಕೆಗೆ ಮೀಸೆ ಇಲ್ಲವಲ್ಲ' ಎಂದು ನಸುನಕ್ಕು 'ಹೇಗಿದೆಯೋ ಹಾಗೆ ಸ್ವೀಕರಿಸುವುದು ಒಳ್ಳೆಯದು' ಎಂದರಂತೆ. ಇಲಾಖೆಗೆ ಸೇರಿದ ಸ್ವಲ್ಪ ಸಮಯದಲ್ಲೇ ಅವರು ಬಹುಖ್ಯಾತರಾದರು. ಸ್ನಾಯುಗಳನ್ನು ಕುಣಿಸುವುದು, ಕಲ್ಲಿನಂತೆ ಗಟ್ಟಿಮಾಡುವುದು, ನಾಣ್ಯವನ್ನು ಎಸೆದು ಸೀಲಿಂಗ್‌ಗೆ ಕಚ್ಚಿಕೊಳ್ಳುವಂತೆ ಮಾಡುವುದು - ಇವೆಲ್ಲದರ ಜೊತೆಗೆ ತಮ್ಮ ವಿಶಿಷ್ಟ ಮಾತುಗಾರಿಕೆಯಿಂದ ಸೀನಿಯರ್ ಆಫೀಸರ್‌ಗಳನ್ನು ಬೆರಗಾಗುವಂತೆ ಮಾಡಿದ್ದರು. ಹೊಸದಾಗಿ ಸೇರಿದ್ದವರು ಒಬ್ಬೊಬ್ಬರು ಒಬ್ಬೊಬ್ಬ ಸೀನಿಯರ್‌ಗಳ ಜೊತೆ ಕೆಲಸ ಮಾಡಬೇಕು ಎಂದು ಇಲಾಖೆಯ ನಿರ್ದೇಶಕ ಸ್ಮಿತ್ ನಿರ್ಧರಿಸಿದ್ದರು. ಹೀಗಾಗಿ ಕೈಲಾಸಂ ಅವರು ಜಯರಾಮ್ ಎಂಬ ಸೀನಿಯರ್ ಆಫೀಸರ್ ಜೊತೆ ಕೆಲಸ ಮಾಡಬೇಕು ಎಂದಾಯಿತು. ಇಲಾಖೆಯ ಮತ್ತೊಬ್ಬ ಹಿರಿಯ ಅಧಿಕಾರಿ ಸೇನ್ ಅವರೊಂದಿಗೆ ಈ ಮೂವರೂ ಮಾತನಾಡುತ್ತ ಫೀಲ್ಡ್‌ಗೆ ಏನೇನು ತೆಗೆದುಕೊಂಡು ಹೋಗಬೇಕೆಂದು ಚರ್ಚಿಸುತ್ತಿದ್ದರು. ಆಗ ಅಲ್ಲಿಗೆ ಬಂದ ಜಯರಾಮ್

'ಹೇ ಹುಡುಗ್ರಾ, ಎಲ್ಲ ಹೇಗಿದ್ದೀರಿ? ನಿಮ್ಮನಿಮ್ಮಲ್ಲಿ ಹೊಂದಾಣಿಕೆ ಹೇಗಿದೆ?' ಎಂದರು. ಕಿಟಕಿಯಲ್ಲಿ ಕುಳಿತಿದ್ದ ಕೈಲಾಸಂ ಪಟ್ಟೆಂದು ಕೆಳಗಿಳಿದು 'ನನ್ನ ಕ್ಯಾಂಪ್ ಕಿಟ್ಟನ್ನು

ನಿಮ್ಮ ಜೊತೆ ಕಳಿಸಬೇಕೆಂದಿದ್ದೇನೆ' ಎಂದು ಅನ್ನಬೇಕೆ. ಜಯರಾಮ್‌ಗೆ ಒಂದು ನಿಮಿಷ ಆಘಾತವಾದರೂ ಅದನ್ನು ತೋರಿಸಿಕೊಳ್ಳಲಿಲ್ಲ. ವಾಸ್ತವವಾಗಿ ಡೈರೆಕ್ಟರ್ ನಂತರ ಇವರೇ ಎಲ್ಲರಿಗಿಂತ ಹಿರಿಯ ಅಧಿಕಾರಿ.

'ನಿನ್ನ ಕಿಟ್ಟು ಒಂದು ಲಾರಿ ತುಂಬುವಷ್ಟಿರುತ್ತದೆ, ಹಾಳಾಗಲಿ, ಬೇಕಿದ್ದರೆ ನೀನೇ ವ್ಯವಸ್ಥೆ ಮಾಡಿಕೋ' ಎಂದು ಕೋಪದಿಂದ ಹೇಳಿದರೂ ಕೈಲಾಸಂ ಮಾತ್ರ ಇದರಿಂದೇನೂ ವಿಚಲಿತರಾದಂತೆ ಕಾಣಲಿಲ್ಲ. ಅಂತೂ ಕೈಲಾಸಂ ಜಯರಾಮ್ ಅವರೊಡನೆ ಫೀಲ್ಡ್‌ಗೆ ಹೊರಟರು. ಸಾಮಾನ್ಯವಾಗಿ ಸೀನಿಯರ್ಸ್ ಎಂದರೆ ಜೂನಿಯರ್‌ಗಳಿಗೆ ಭಯ. ಇದು ಎಲ್ಲ ಇಲಾಖೆಯಲ್ಲೂ ಇದ್ದ ಸಂಪ್ರದಾಯ. ಜಯರಾಮ್ ಬಹು ಗಂಭೀರ ವ್ಯಕ್ತಿ. ಕೈಲಾಸಂ ಎಷ್ಟು ಸದರ ತೆಗೆದುಕೊಂಡಿದ್ದರೆಂದರೆ ಮೊದಲು ಜಯರಾಮ್ ಎದ್ದು ಫೀಲ್ಡ್‌ಗೆ ರೆಡಿಯಾದರೆ, ಈ ಭೂಪ ಇನ್ನೂ ನಿದ್ದೆ ಹೊಡೆಯುತ್ತಿದ್ದರು. ಇರಲಿ ಬಿಡು ಸರಿಹೋಗುತ್ತದೆ ಎಂದು ಜಯರಾಮ್ ರಿಯಾಯತಿ ಕೊಟ್ಟರು. ಆದರೆ ದಿನವೂ ಅದೇ ಕಥೆ. ಕೊನೆಗೆ ತಟ್ಟಿ ಎಬ್ಬಿಸಿ 'ಹೊರಡು ಫೀಲ್ಡ್'ಗೆ ಎಂದು ಗಟ್ಟಿಯಾಗಿ ಹೇಳಬೇಕಾಗಿ ಬಂತು. ಒಂದುದಿನ ಜಯರಾಮ್ ಅವರೊಡನೆ ಟೀ ತೆಗೆದುಕೊಳ್ಳಬೇಕಾದ ಸಂದರ್ಭದಲ್ಲಿ ಅವರಿಗೆ ಒಂದು ಕಪ್ ಕೊಟ್ಟು ಅವರು ಕುಡಿದ ನಂತರ ಆ ಕಪ್ಪನ್ನು ಆಮೂಲಾಗ್ರವಾಗಿ ತೊಳೆದರು. ಜಯರಾಮ್ ಅವರಿಗೆ ಕೋಪ ನೆತ್ತಿಗೇರಿತು. 'ಅಲ್ಲಾ ಕೈಲಾಸಂ, ನೀವು ಇಂಗ್ಲೆಂಡಿಗೆ ಹೋಗಿಬಂದವರು. ಹೀಗಿದ್ದೂ ಇನ್ನೂ ಜಾತಿ ಭೇದ ಇಟ್ಟುಕೊಳ್ಳುವುದೆ? ಇವೆಲ್ಲಾ ಮೀರಿ ಬೆಳೆಯಬೇಕು' ಎಂದರು. ಒಡನೆಯೇ ಕೈಲಾಸಂ 'ನೀವು ಹೇಳುವುದು ನಿಜ. ನಾನು ಕಪ್ಪನ್ನು ತೊಳೆದಿದ್ದಕ್ಕೆ ಜಾತಿಭೇದ ಹೇಗಾಯಿತು? ಆರೋಗ್ಯದ ದೃಷ್ಟಿಯಿಂದ ನಾನು ಏಕೆ ಹಾಗೆ ಮಾಡಿರಬಾರದು ಎಂದೇಕೆ ನೀವು ಯೋಚಿಸುವುದಿಲ್ಲ? ಒಂದುವೇಳೆ ನಿಮಗೆ ಸಿಫಿಲಿಸ್ ಇದ್ದರೆ (ಲೈಂಗಿಕ ರೋಗ) ನಾನ್ಯಾಕೆ ಅಷ್ಟೊಂದು ರಿಸ್ಕ್ ತೆಗೆದುಕೊಳ್ಳಬೇಕು?'. ಜಯರಾಮ್ ಮಾತನಾಡಲಿಲ್ಲ. ಆದರೆ ಈ ಮನುಷ್ಯ ಹೀಗೆ ಅಂದಿದ್ದ ಎಂದು ಸಹೋದ್ಯೋಗಿಗಳ ಬಳಿ ಹೇಳಿಕೊಂಡರಂತೆ.

ಮುಂದೆ ಕೈಲಾಸಂ, ವೇಣುಗೋಪಾಲ್, ರಾಮರಾವ್ ಎಲ್ಲರೂ ಕೆ.ಜಿ.ಎಫ್.ನ ಬೇರೆ ಬೇರೆ ಗಣಿಗಳಲ್ಲಿ ಕೆಲಸ ಮಾಡಿ ಅನುಭವ ಪಡೆಯಲು ಹೋದರು. ಅಲ್ಲಿಗೆ ಹೋದ ಮೂರೇ ದಿನದಲ್ಲಿ ಕೈಲಾಸಂಗೆ ಸರ್ಕ್ಯೂಟ್ ಹೌಸ್ ಬಳಿ ಚಂದದ ಮನೆ ಸಿಕ್ಕಿತು. ಕೈಲಾಸಂ ಆ ಮನೆಗೆ ವೈಲ್ ಬ್ಲೂ ಎಂಬ ಹೆಸರನ್ನು ಕೊಟ್ಟರು. ಆರು ತಿಂಗಳ ಕಾಲ ಮೈಸೂರು ಗಣಿಯಲ್ಲಿ ಇಳಿದು ಭೂವಿಜ್ಞಾನಿಗಳಿಸಬೇಕಾದ ಎಲ್ಲ ಗಣಿ ಅನುಭವವನ್ನು ಪಡೆದರು. ಇತ್ತ ಹೆಡ್ ಕ್ವಾರ್ಟರ್ಸ್‌ಗೆ ಬಂದಾಗ ಕೆಮಿಕಲ್ ಲ್ಯಾಬಿನಲ್ಲಿ ತರಬೇತಿ. ಅಲ್ಲಿ ಬೀಕರ್, ಕ್ರೂಸಿಬಲ್, ಪೋರ್ಸೆಲೈನ್ ಡಿಷ್‌ಗಳಿದ್ದವು. ಈ ಡಿಷ್‌ಗಳ ಮೇಲೆ ಕೈಲಾಸಂ ಗ್ಲಾಸ್ ಮಾರ್ಕರ್‌ನಿಂದ 1, 2 ಎಂದು ಬರೆದಿದ್ದರು. ಅವರು ಪದೇ ಪದೇ ಆ ಅಂಕಿಗಳನ್ನು ತಿದ್ದುತ್ತಿದ್ದುದರಿಂದಲೇ ಅಥವಾ ಶಾಖಕ್ಕೋ ಅವು ಹಿಗ್ಗಿ ಚಿಟ್ಟೆಯ ಆದಿಮ ಸ್ವರೂಪ ತಳೆದವು. ಕೈಲಾಸಂಗೆ ಖುಷಿಯಾಗಿ ಅವೆರಡೂ ತಟ್ಟೆಗಳ ಮೇಲೆ ಆ ಅಂಕೆಗಳನ್ನೇ ಗುರಿ ಇಟ್ಟುಕೊಂಡು ಬಣ್ಣದಿಂದ ಅವನ್ನು ಚಿಟ್ಟೆಯಾಗಿ ಬಿಡಿಸಿದರು. ಲ್ಯಾಬ್ ತುಂಬ ಅದೇ

ಓಡಾಟ, ಸಂಭ್ರಮ. ದಿನವೂ ಬಂದಾಗ ಅದರ ಕಡೆಗೇ ಜ್ಞಾನ. ಹೀಗಾಗಿ ಲ್ಯಾಬ್‌ನಲ್ಲಿ ಇವರದೇ ಸಂಭ್ರಮ. ಕೃಷಿ ಇಲಾಖೆಯ ಕೆಲವು ರಸಾಯನ ವಿಜ್ಞಾನಿಗಳು ಇಲ್ಲಿ ಕೆಲಸಮಾಡುತ್ತಿದ್ದರು. ಕೈಲಾಸಂ ಅವರಿಗೆಲ್ಲ ಪೋರ್ಸ್‌ಲೈನ್ ಡಿಷ್ ಮೇಲಿದ್ದ ಗುರುತನ್ನು ಹೇಗೆ ಚಿಟ್ಟೆಗೆ ರೂಪಾಂತರಿಸಿದೆ ಎಂದು ಹೇಳುವ ಖುಷಿ. ಈ ಸುದ್ದಿ ಸ್ವಲ್ಪ ಹಳೆಯದಾಗುತ್ತಲೇ ಕೈಲಾಸಂ ಕೆಮಿಕಲ್ ಲ್ಯಾಬ್ ಹಿಂಭಾಗದಲ್ಲೇ ಸೈಕಲ್ ಸವಾರಿ ಶುರುಮಾಡಿದರು. ಮುಂದಿನ ಚಕ್ರವನ್ನು ಮೇಲಕ್ಕೆತ್ತಿ ಇಳಿಸುವುದು. ಕೇಕೆ ಹಾಕಿ ನಗುವುದು. ಯಾರು ಇದ್ದರೂ ಅಷ್ಟೇ. ಸಂಜೆ ಟೆನ್ನಿಸ್ ಕೋರ್ಟ್‌ನಲ್ಲೂ ಜೋಕುಗಳನ್ನು ಉದುರಿಸುತ್ತಿದ್ದರು. ಒಬ್ಬೊಬ್ಬರಿಗೂ ಒಂದೊಂದು ಅಡ್ಡ ಹೆಸರು. ಕೈಲಾಸಂ ಎಂದರೆ ಜವಾನನಿಂದ ಅಧಿಕಾರಿ ವರ್ಗದವರೆಗೂ ಎಲ್ಲರಿಗೂ ಇಷ್ಟ. ಹಳೆಯ ಜೋಕುಗಳನ್ನು ಅವರು ಮತ್ತೆ ಹೇಳಿದರೂ ಅವು ಹೊಸತೇ ಎನ್ನುವಷ್ಟು ಅವಕ್ಕೆ ಬಣ್ಣ ಕಟ್ಟುತ್ತಿದ್ದರು. ಅದೇ ಸಮಯಕ್ಕೆ 'ಅಮೆಚೂರ್ ಡ್ರಮಾಟಿಕ್ ಅಸೋಸಿಯೇಷನ್' ಆಗಾಗ ತೆಲುಗು, ಕೆಲವು ಇಂಗ್ಲಿಷ್ ನಾಟಕಗಳನ್ನು ಆಡಿಸುತ್ತಿತ್ತು. ಅದರಲ್ಲಿ ಪಾತ್ರ ವಹಿಸುತ್ತಿದ್ದ ಎಲ್ಲರೂ ವಿದ್ಯಾವಂತರೇ, ಸುಸಂಸ್ಕೃತ ಕುಟುಂಬದಿಂದ ಬಂದವರು. ಒಮ್ಮೆ ಹ್ಯಾಮ್ಲೆಟ್ ನಾಟಕ ಅಭಿನಯಿಸಬೇಕೆಂದು ತೀರ್ಮಾನಿಸಿದಾಗ, ಕೈಲಾಸಂ ಅವರು ಪೋಸ್ಟ್ ಪಾತ್ರವನ್ನು ನಿರ್ವಹಿಸುವುದಾಗಿ ಖುಷಿಯಿಂದ ಹೇಳಿದರು. ನಾಟಕಕ್ಕೆ ಅದೇ ಅವರ ಮೊದಲ ಪ್ರವೇಶ. ಆಫೀಸಿನಲ್ಲಿ ತಾವು ಆ ಪಾತ್ರವನ್ನು ಹೇಗೆ ಅಭಿನಯಿಸುತ್ತೇನೆ ಎಂದು ಎಲ್ಲರಿಗೂ ತೋರಿಸುವುದು.

ಎರಡು ವರ್ಷ ಪ್ರೊಬೆಷನರಿ ಪೀರಿಯಡ್ ಮುಗಿದಾಗ ಈ ಮೂವರಿಗೂ ಮುಂದೆ ಯಾವ ಹುದ್ದೆ ಕಾದಿದೆ ಎಂಬುದು ತಿಳಿದಿರಲಿಲ್ಲ. ಅಥವಾ ಮನೆಗೆ ಕಳಿಸಲೂಬಹುದು ಎಂಬ ಅಳುಕೂ ಇತ್ತು. ಆ ಹೊತ್ತಿಗೆ ಜಯರಾಮ್ ಇಲಾಖೆಯ ಅಧ್ಯಕ್ಷರಾದರು. ಈ ಮೂವರನ್ನು ಸಬ್ ಅಸಿಸ್ಟಂಟ್ ಹುದ್ದೆಯಲ್ಲಿ ಕಾಯಂಗೊಳಿಸಲಾಯಿತು. 1918ರ ಜನವರಿ ತಿಂಗಳಲ್ಲಿ ಇವರ ಜೊತೆಗೆ ಕೃಷ್ಣಮೂರ್ತಿ ಎಂಬ ಹೊಸಬರನ್ನು ಸೇರಿಸಿ ಶಿವಮೊಗ್ಗಕ್ಕೆ ಇಲಾಖೆ ಕಳಿಸಿತು. ಅಲ್ಲಿ 'ವರ್ಕಿಂಗ್ಟನ್ ಐರನ್ ಅಂಡ್ ಸ್ಟೀಲ್ ಕಂಪನಿ', ಕುಂಸಿ, ಶಂಖರಗುಡ್ಡ ಇಲ್ಲೆಲ್ಲ ಇದ್ದ ಮ್ಯಾಂಗನೀಸ್ ಗಣಿಗಳ ಮಾಲೀಕತ್ವ ಪಡೆದಿತ್ತು. ಈ ನಾಲ್ವರಿಗೂ ಒಂದೇ ಕೆಲಸ. ದಿನಾ ಗಣಿಗಳಿಗೆ ಹೋಗಿ ಮ್ಯಾಂಗನೀಸ್ ಬಗ್ಗೆ ಅಧ್ಯಯನ ಮಾಡುವುದು, ಉಳಿದ ಸಮಯದಲ್ಲಿ ಕಂಪನಿಯ ವರ್ಕ್‌ಷಾಪ್‌ನಲ್ಲಿ ಅನುಭವ ಪಡೆಯುವುದು. ಕೈಲಾಸಂ, ವೇಣುಗೋಪಾಲ್, ಕೃಷ್ಣಮೂರ್ತಿ ಈ ಮೂವರೂ ಶಿವಮೊಗ್ಗದ ಪ್ರವಾಸಿ ಮಂದಿರದಲ್ಲಿ ಮೊಕ್ಕಾಂ ಹೂಡಿದರು. ರಾಮರಾವ್ ಅವರಿಗೆ ಅಲ್ಲಿ ಬಂಧುಗಳ ಮನೆಯಿತ್ತು. ಒಮ್ಮೆ ರಾಮರಾವ್ ಬೆಂಗಳೂರಿಗೆ ಹೋಗಿ ಹಿಂತಿರುಗಿ ಶಿವಮೊಗ್ಗಕ್ಕೆ ಬಂದಾಗ, ಬೆಳಗ್ಗೆ 6 ಗಂಟೆ, 10 ನಿಮಿಷ. ಪ್ರವಾಸಿ ಮಂದಿರದ ಇವರ ಕೊಠಡಿಗಳ ಬಾಗಿಲು ತೆಗೆದಿದೆ. ಇಡೀ ರಾತ್ರಿ ಹರಟೆ, ನಗುವಿನಲ್ಲಿ ನಿದ್ದೆಯನ್ನೇ ಮರೆತಿದ್ದರು. ಬೆಳಗ್ಗೆ 6.10ಕ್ಕೆ ಮಲಗಲು ಹೊರಟಿದ್ದರಂತೆ.

ಕ್ಯಾಂಪಿನಲ್ಲಿದ್ದಾಗ ಒಂದು ದಿನ ಸೌಲಂಗ ಎಂಬಲ್ಲಿ ಹುಲಿ ಬೇಟೆಗೆ ಈ ನಾಲ್ವರನ್ನು ಶಿವಮೊಗ್ಗೆಯ ಅಸಿಸ್ಟಂಟ್ ಕಮೀಷನರ್ ನೀಲಾರತ್ನಂ ಆಹ್ವಾನಿಸಿದ್ದರು. ಹತ್ತು, ಹದಿನೈದು ಅಡಿ ದೂರವಿದ್ದರೂ ಹುಲಿಯನ್ನು ಬೇಟೆಯಾಡಬಹುದೆಂದು ಆಮಿಷ ಒಡ್ಡಿದರು. ಸಾಕಷ್ಟು ಶಿಕಾರಿಗಳನ್ನು ಆ ದಿನಕ್ಕಾಗಿ ನೇಮಿಸಿಕೊಂಡಿದ್ದರು. ಶಿಕಾರಿಗೆ ಸಿದ್ಧ. ಸ್ವಲ್ಪ ದೂರ ಹೋದಮೇಲೆ 'ಕುದಿಯುವ ನೀರಿನಲ್ಲಿ ಹುರುಳಿ ಕಾಳು ಬೇಯಿಸಿದರೆ ವಾಸನೆ ಬರುವಂತೆ ಏನೋ ಮೂಗಿಗೆ ಬಡಿಯುತ್ತಿದೆಯಲ್ಲ' ಎಂದರು ರಾಮರಾವ್, ಅದೇನೂ ಹುಲಿ ವಾಸನೆಯೇ ಎಂದು ಕೇಳಿದರು.

ಶಿಕಾರಿ 'ಹೌದು ಸರ್, ಅದು ರಾಯಲ್ ಟೈಗರ್ ವಾಸನೆ. ಇಲ್ಲೇ ಲಾಂಟಾನ ಪೊದೆಯಲ್ಲಿ ಅಡಗಿರಬಹುದು' ಎಂದ.

'ಹೇಯ್, ನೀನು ಭಾರಿ ಬುದ್ಧಿವಂತ ಕಣಯ್ಯಾ, ನಿನಗೆ ರಾಯಲ್ ಟೈಗರ್ ವಾಸನೆ ಗೊತ್ತಾ? ಅದು ಕಿರೀಟ ಹಾಕಿಕೊಂಡಿತ್ತೆ?' ಎಂದು ಬಾಣಬಿಟ್ಟರು ಕೈಲಾಸಂ.

'ಇಲ್ಲಾ ಸಾರ್, ಖಂಡಿತ ಅದು ದೊಡ್ಡ ಹುಲಿ. ಅದರ ವಾಸನೆ ನನಗೆ ಚೆನ್ನಾಗಿ ಗೊತ್ತು.'

'ಅಲ್ಲಯ್ಯಾ, ದೊಡ್ಡ ಹುಲಿಯ ವಾಸನೆ ಬೇರೆ, ಚಿಕ್ಕ ಹುಲಿ ವಾಸನೆ ಬೇರೆ ಇರುತ್ತಾ?' ಕೈಲಾಸಂ ಕೇಳಿದ ಪ್ರಶ್ನೆಗೆ ಆ ಶಿಕಾರಿ ಕಂಗೆಟ್ಟುಹೋದ. ಹಠ ಬಿಡದೆ ಮುಂದಿನ ದಿನವೂ ಹುಲಿಯ ಶಿಕಾರಿಗೆ ತಂಡ ಸಿದ್ಧವಾಗಿತ್ತು. ಈ ಬಾರಿ ಹತ್ತಿರದ ಶಿಕಾರಿ. ಇನ್ನೇನು ಗುರಿ ಇಟ್ಟು ಹೊಡೆಯಬೇಕು. ಹದಿಮೂರು ಮಂದಿ ಬಂದೂಕುಗಳಲ್ಲಿ ಕುದುರೆ ಎಳೆಯಲು ತಯಾರಾಗಿದ್ದರು. ಬಂದೂಕು ಇಲ್ಲದ ಒಬ್ಬ ಥಟ್ಟನೆ 'ನಿಲ್ಲಿಸಿ, ನಿಲ್ಲಿಸಿ' ಎಂಬು ಬೊಬ್ಬೆ ಹೊಡೆದ. ಇವರೆಲ್ಲ ನೋಡುತ್ತಾರೆ. ಅಲ್ಲಿ ಬರುತ್ತಿದ್ದುದು ದಾರಿತಪ್ಪಿದ ಬೀದಿನಾಯಿ.

ಕೈಲಾಸಂ ಕೈ ಕೊಳೆ ಮಾಡಿಕೊಂಡ ಪ್ರಸಂಗವನ್ನು ರಾಮರಾವ್ ಅವರ ಮಾತಿನಲ್ಲೇ ಕೇಳಬೇಕು.

ಮಾರ್ಚ್ ತಿಂಗಳ ಎರಡನೇ ಅಥವಾ ಮೂರನೇ ವಾರ. ಗಣಿಗಳ ಚೀಫ್ ಇನ್‌ಸ್ಪೆಕ್ಟರ್ ಬಾಕ್ವೆಟ್, ಮ್ಯಾಂಗನೀಸ್ ಗಣಿಗಳನ್ನು ಇನ್‌ಸ್ಪೆಕ್ಟ್ ಮಾಡಲು ಬರುವವರಿದ್ದರು. ಗಣಿಗಳಿಗೆ ಹೋಗುವ ಮೊದಲು ಶಿವಮೊಗ್ಗದ 'ವರ್ಕಿಂಗ್ಟನ್ ಐರನ್ ಅಂಡ ಸ್ಟೀಲ್ ಕಂಪನಿ'ಯನ್ನು ನೋಡಿಕೊಂಡು ಹೋಗುವುದು ಅವರ ಕಾರ್ಯಕ್ರಮ. ಅವರು ಕಚೇರಿಗೆ ಬಂದಾಗ ವೇಣುಗೋಪಾಲ್, ಕೃಷ್ಣಮೂರ್ತಿ ಮತ್ತು ನಾನು ಎಂದಿನಂತೆ ನಾವು ಆಫೀಸಿಗೆ ಹಾಕಿಕೊಂಡು ಹೋಗುವ ಉಡುಪಿನಲ್ಲೇ ಹೋದೆವು. ತಲೆಗೆ ರುಮಾಲು, ಕೊರಳಿಗೆ ಟೈ. ಎಲ್ಲರೊಡನೆ ಕೈ ಕುಲುಕಿ ಕುಶಲೋಪರಿ ಆದಮೇಲೆ ಬಾಕ್ವೆಟ್ ಅವರು 'ಆದರೆ ಕೈಲಾಸಂ ಎಲ್ಲಿ ಕಾಣ್ತಾ ಇಲ್ವಲ್ಲಾ' ಎಂದರು.

'ಅವರು ವರ್ಕ್‌ಷಾಪ್‌ನಲ್ಲಿರಬಹುದು ಅನ್ನಿಸುತ್ತಿದೆ' ಅಂದೆ. ನಾವೆಲ್ಲ ಬಾಕ್ವೆಟ್ ಅವರನ್ನು ಕರೆದುಕೊಂಡು ವರ್ಕ್‌ಷಾಪ್‌ಗೆ ಬಂದೆವು. ಕೈಲಾಸಂ, ವರ್ಕ್‌ಷಾಪಿನ ಎತ್ತರದ ಜಾಗದಲ್ಲಿ ಕೂತು ನೋಟ್‌ಬುಕ್‌ನಲ್ಲಿ ಏನೋ ಸಿರಿಯಸ್ ಆಗಿ ಬರೆಯುತ್ತಿದ್ದರು. ಕೆಲಸ ಬಿಟ್ಟು ಅತ್ತಿತ್ತ ನೋಡುತ್ತಿರಲಿಲ್ಲ. ನಾವು 'ಕೈಲಾಸಂ' ಅಂಥ ಕರೆದೆವು. ಬಾಕ್ವೆಟ್ ಇನ್ನೂ ಜೋರಾಗಿ 'ಹಲೋ ಕೈಲಾಸಂ' ಎಂದು ಎತ್ತರಿಸಿದ ಧ್ವನಿಯಲ್ಲಿ ಕೂಗಿದರು. ಕೈಲಾಸಂ ಅವರು ಇಳಿದು ಬಂದಾಗ ಅವರ ಕೈಲಿ ನೋಟ್‌ಬುಕ್ ಮತ್ತು ಪೆನ್ಸಿಲ್ ಇತ್ತು. ಬಾಕ್ವೆಟ್ ಕೈ


ಕುಲುಕಲು ಮುಂದಾದರು. ಕೈಲಾಸಂ ಕೂಡ ಅಷ್ಟೇ ಉತ್ಸಾಹದಿಂದ ಕೈ ಚಾಚಿದ್ದವರು ಪಟ್ಟೆಂದು ಕೈಗಳನ್ನು ಹಿಂದಕ್ಕೆ ಎಳೆದುಕೊಂಡರು.

'ಕ್ಷಮಿಸಿ ಸರ್, ನನ್ನ ಕೈ ಗ್ರೀಸ್‌ನಿಂದ ಕೊಳೆಯಾಗಿದೆ ಎಂದು ನನಗನ್ನಿಸುತ್ತಿದೆ. ಲೇಥ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಅದರ ಸ್ಕೆಚ್ ಮಾಡಬೇಕೆಂದು ಕೂತಿದ್ದೆ' ಎಂದರು.

ಒಂದು ದಿನವೂ ವರ್ಕ್‌ಷಾಪಿನ ಒಳಗೆ ತಲೆ ಹಾಕದಿದ್ದ ಈ ಮನುಷ್ಯನ ಮಾತಿನಲ್ಲಿ ಇಂಥ ಮಾತು! ಲೇಥ್ ಅಥವಾ ಇನ್ನಾವುದೇ ಮೆಷಿನ್ನನ್ನು ಒಂದು ಸಲವೂ ಮುಟ್ಟಿರಲಿಲ್ಲ. ಆದರೆ ಬಾಕ್ವೆಟ್‌ಗೆ ಕೈಲಾಸಂ ಬಗ್ಗೆ ಬಹು ದೊಡ್ಡ ಅಭಿಪ್ರಾಯ ಮೂಡಿಬಿಟ್ಟಿತು. ಆಗ ಜಯರಾಮ್ ಅವರು ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದರು. ಬಾಕ್ವೆಟ್, ಜಯರಾಮ್ ಅವರಿಗೆ ಪತ್ರ ಬರೆದು 'ನಾನು ನಿಮ್ಮ ಆಫೀಸಿನ ಮೂರು ಮಂದಿ ಪ್ರೊಬೆಷನರ್‌ಗಳಾದ ರಾಮರಾವ್, ವೇಣುಗೋಪಾಲ್ ಮತ್ತು ಕೃಷ್ಣಮೂರ್ತಿಯವರನ್ನು ಗಮನಿಸಿದೆ. ಇವರೆಲ್ಲ ಯಾವುದೋ ಪಾರ್ಟಿಗೆ ಹೋಗಲು ಸಿದ್ಧವಾದವರಂತೆ, ಏನೂ ಕೆಲಸವಿಲ್ಲದೆ ಬಾಗಿಲಬಳಿ ನಿಂತಿದ್ದರು. ಆದರೆ ಕೈಲಾಸಂ ಮಾತ್ರ ತಮ್ಮ ಕೆಲಸದಲ್ಲಿ ಗಂಭೀರವಾಗಿ ತೊಡಗಿಕೊಂಡಿದ್ದರು. ನಾನು ಆಫೀಸಿಗೆ ಭೇಟಿಕೊಡುತ್ತೇನೆಂಬುದು ಅವರಿಗೆ ತಿಳಿದಿರಲಿಲ್ಲ. ತಮ್ಮ ಕೈ ಕೊಳೆಯಾಗುತ್ತದೆಂಬುದರ ಬಗ್ಗೆಯೂ ಅವರಿಗೆ ಗಮನವಿರಲಿಲ್ಲ. ಅವರ ಕಾರ್ಯಶೀಲತೆ ಮತ್ತು ನಿಷ್ಠೆ ನನಗೆ ಮೆಚ್ಚುಗೆಯಾದವು' ಎಂದು ಬರೆದು ಹೆಡ್ ಆಫೀಸಿಗೆ ವರದಿ ಕಳಿಸಿದರು.

ಮುಂದೆ ಕೈಲಾಸಂ, ಕೋಲಾರ ಜಿಲ್ಲೆಯ ಗಣಚಾಪುರ ಎಂಬಲ್ಲಿ ಗ್ರಾಫೈಟ್ ಖನಿಜಕ್ಕಾಗಿ ಪರಿಶೋಧನೆಯಲ್ಲಿ ತೊಡಗಿದ್ದರು. ಕ್ಲರ್ಕ್ ಒಬ್ಬನಿಗೆ ರಾತ್ರಿ 2-3 ಗಂಟೆಯಾದರೂ 'ಟೊಳ್ಳು-ಗಟ್ಟಿ' ನಾಟಕವನ್ನು ಹೇಳಿ ಬರೆಸುತ್ತಿದ್ದರಂತೆ. ಒಮ್ಮೆ ಗಣಚಾಪುರ ಕ್ಯಾಂಪಿನಿಂದ ಸೀದಾ ಹೆಡ್ ಆಫೀಸಿಗೆ ಬಂದಾಗ ಎಲ್ಲರೂ ಕಕ್ಕಾಬಿಕ್ಕಿ. ತಮ್ಮ ಮುಖಕ್ಕೆ ಗ್ರಾಫೈಟ್‌ನಿಂದ ಬಣ್ಣ ಬಳಿದುಕೊಂಡು ನೇರವಾಗಿ ಆಫೀಸಿಗೆ ಬಂದು ಆ ಗಣಿಯ ಬಗ್ಗೆ ವಿವರಿಸುತ್ತಿದ್ದರು. ಅವರ ಉದ್ದೇಶ ಗಣಚಾಪುರದ ಗಣಿಯಲ್ಲಿ ತಾನು ಕೆಲಸ ಮಾಡುತ್ತಿದ್ದೇನೆ ಎಂಬುದನ್ನು ಆಫೀಸಿನಲ್ಲಿ ಹಿರಿಯ ಅಧಿಕಾರಿಗಳಿಗೆ ಮನದಟ್ಟು ಮಾಡಿಕೊಡುವುದಾಗಿತ್ತು.

✤






ಗೆಲಿಲಿಯೋ ತನ್ನ ದೂರದರ್ಶಕವನ್ನು
ಬಿಷಪ್ ಗೆ ವಿವರಿಸುತ್ತಿರುವುದು!

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

- ವಯಸ್ಸಾಗುವುದು ಅನಿವಾರ್ಯ ಆದರೆ ಬೆಳೆಯುವುದು ಐಚ್ಛಿಕ.
- ತತ್ವಶಾಸ್ತ್ರದಲ್ಲಿ ಬರುವ ಪ್ರಶ್ನೆಗಳಿಗೆ ಉತ್ತರ ಇರುವುದಿಲ್ಲ. ಧರ್ಮದಲ್ಲಿ ಬರೇ ಉತ್ತರಗಳು. ಪ್ರಶ್ನೆ ಕೇಳುವಂತಿಲ್ಲ.
- ನಮ್ಮ ಒಡೆತನದಲ್ಲಿರುವ ವಸ್ತುಗಳು ನಮಗೆ ರಾತ್ರಿ ನಿದ್ದೆ ಬರಿಸಲು ಸಹಾಯ ಮಾಡುವುದಿಲ್ಲ.
- ವ್ಯಾಯಾಮಕ್ಕೆ ಸಮಯ ಮೀಸಲಿಡದೆ ಇರುವವರು ರೋಗಕ್ಕೆ ಸಮಯ ಮೀಸಲಿಡಬೇಕಾಗಿ ಬರುತ್ತದೆ.
- ದಿ ಮೈಂಡ್ ಡಸ್ ನಾಟ್ ಏಜ್ ಲೈಕ್ ದಿ ಬಾಡಿ.
- ಓದು ಓದು ಎಂದು ಹಿಂಸೆ ನೀಡಿ ಓದಿಸಿದರೆ ಮಗು ಓದಿನಲ್ಲಿ ಜಾಣ ಎನಿಸಿಕೊಳ್ಳಬಹುದೇ ಹೊರತು ಬದುಕಿನಲ್ಲಲ್ಲ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ನಾವು ದಿನಗಳನ್ನು ಹೇಗೆ ಕಳೆಯುತ್ತೇವೋ ಹಾಗೇ ನಮ್ಮ ಬದುಕು ಕಳೆದು ಹೋಗುತ್ತದೆ.
- ಐ ಲೈಕ್ ದಿ ಟೀಚರ್ ಹು ಗಿವ್ಸ್ ಯು ಸಂಥಿಂಗ್ ಟು ಟೇಕ್ ಹೋಂ ಟು ಥಿಂಕ್ ಅಬೌಟ್ ಬಿಸೈಡ್ಸ್ ಹೋಂವರ್ಕ್.
- ಪಯಣವನ್ನು ಆನಂದಿಸಿ, ಆ ಪಯಣ ಎಲ್ಲಿಗೆ ಬೇಕಾದರೂ ಇರಲಿ.
- ಸನ್ಯಾಸಿಗೆ ಯಾಕೆ ಸನ್ನಿ ಲಿಯಾನ್ ಚಿಂತೆ?
- ನಾನು ಮುದುಕನಾಗಲು ಸಾಧ್ಯವೇ ಇಲ್ಲ. ಏಕೆಂದರೆ ನನ್ನ ಲೆಕ್ಕಾಚಾರದಲ್ಲಿ ಮುದಿ ವಯಸ್ಸು ಎಂದರೆ ನನ್ನ ವಯಸ್ಸು ಪ್ಲಸ್ 15 ವರ್ಷಗಳು.
- ಪರಿಸರದ ಬಗ್ಗೆ ಬರೆದ ವ್ಯರ್ಥ ಬರಹಗಳನ್ನು ಪರಿಸರದ್ದಿ ಎಂದು ಕರೆಯಬಹುದೆ?
- ರಿಗ್ರೆಟ್ ಡಸ್ ನಾಟ್ ರಿಮೈಂಡ್ ಅಸ್ ದಟ್ ವಿ ಡಿಡ್ ಬ್ಯಾಡ್ಲಿ - ಇಟ್ ರಿಮೈಂಡ್ಸ್ ಅಸ್ ದಟ್ ವಿ ಕೆನ್ ಡು ಬೆಟರ್.
- ಮುಂದೆ ಗುರಿ ಹಿಂದೆ ಗುರು ಇರಬೇಕು.
- ಕಾಲಹರಣ ಮಾಡಿದ್ದು ನಿಮಗೆ ಖುಷಿ ಕೊಟ್ಟಿದ್ದರೆ ಅದು ಕಾಲಹರಣ ಆಗುವುದಿಲ್ಲ.
- ಜೀವನ ಸಿನಿಮಾ ಆಗಿರಬಹುದು ಆದರೆ ಟೇಕ್ 2 ಇಲ್ಲ.
- ಇಫ್ ವಿ ಹ್ಯಾವ್ ಟು ರೀಚ್ ಔಟ್ ಟು ಪೀಪಲ್ ವಿ ಹ್ಯಾವ್ ಟು ಗೊ ವೇರ್ ದೆ ಯಾರ್.
- ಪುರೋಹಿತರು ಮಂತ್ರ ಮರೆತರೂ ಮೊಬೈಲ್ ಮರೆಯರು.

✤

# ಮಾನವೀಯತೆ

**- ಬೇಲೂರು ರಾಮಮೂರ್ತಿ**

ಬಸ್ ಸ್ಟಾಂಡ್ ತುಂಬಾ ಜನ. ನಮ್ಮ ನಮ್ಮ ಊರಿಗೆ ಹೋಗುವ ಬಸ್ಸು ಯಾವಾಗ ಬರುತ್ತೋ, ನಮಗೆ ಜಾಗ ಸಿಕ್ಕುತ್ತೋ ಇಲ್ಲವೋ ಎನ್ನುವ ಗೊಂದಲದಲ್ಲೇ ಜನ ಇದ್ದರು. ಒಂದು ಬಸ್ಸು ಜನರನ್ನು ಹತ್ತಿಸಿಕೊಂಡು ಹೊರಡೋಕೆ ಸಿದ್ದವಾಗಿತ್ತು. ಅದರಲ್ಲಿ ಇನ್ನೂ ಸಾಕಷ್ಟು ಜಾಗ ಇದ್ದವು. ಆದರೆ ಪ್ರಯಾಣಿಕರಿರಲಿಲ್ಲ. ಆದಷ್ಟೂ ಪ್ರಯಾಣಿಕರನ್ನು ಹತ್ತಿಸಿಕೊಂಡು ಹೋಗೋಣ ಅಂತ ಕಂಡಕ್ಟರು ಯಾರ್ರೀ ತಿರುಮಲಪುರ, ಹಾ... ಬನ್ರೀ ತಿರುಮಲಪುರ ಅಂತ ಕೂಗುತ್ತಿದ್ದ. ಒಳಗೆ ಕೂತಿದ್ದ ಪ್ರಯಾಣಿಕರೊಬ್ಬರು ಡ್ರೈವರನ್ನು ಏನಪ್ಪಾ ಇದು ತಿರುಮಲಪುರಕ್ಕೆ ಎಷ್ಟು ಹೊತ್ತಿಗೆ ಹೋಗುತ್ತೆ ಅಂತ ಕೇಳಿದ. ಅದಕ್ಕೆ ಕಂಡಕ್ಟರು ಒಂದೂವರೆ ಗಂಟೆ ಪ್ರಯಾಣ. ಆದರೆ ಇವತ್ತು ಸ್ವಲ್ಪ ತಡವಾಗಬಹುದು ಅಂದ. ಯಾಕೆ ಏನು ಅಂತ ಕಾರಣ ಕೊಡಲಿಲ್ಲ.

ಕೂತ ಕಡೆಯಿಂದಲೇ ಡ್ರೈವರು ಕುತ್ತಿಗೆ ತಿರುಗಿಸಿ ಬಸ್ಸಿನಲ್ಲಿ ಕೂತಿದ್ದವರನ್ನು ಗಮನಿಸಿದ. ಕೆಲವೇ ಕ್ಷಣಗಳಲ್ಲಿ ಬಸ್ಸು ಹೊರಟಿತು. ಬಸ್ಸಿನ ಪ್ರಯಾಣಿಕರೊಬ್ಬರ ಮೊಬೈಲ್ ಹೊಡ್ಕೊಂಡ್ತು. ಹಲೋ ಯಾರೋ ತಮ್ಮಯ್ಯನಾ ಏನಪ್ಪಾ ಅಂತ ಕೇಳಿ ನಂತರ ಅವರೇ ಹೌದು ಬಸ್ಸು ಈಗ ಹೊರಟಿದೆ. ನಂಗೆ ಸೀಟೂ ಸಿಕ್ಕಿದೆ. ಇನ್ನು ಒಂದೂವರೆ ಗಂಟೇಲಿ ಅಲ್ಲಿರ್ತೀನಿ ನಾನು. ಬಂದೋರ್ನ ಕೂರಿಸಿ ಕಾಫಿ ಕೊಟ್ಟಿರು ಅಷ್ಟರಲ್ಲಿ ನಾನು ಬಂದ್ ಬಿಡ್ತೀನಿ ಅಂದ. ಬಸ್ಸು ಹೊರಟ ತಕ್ಷಣ ಒಬ್ಬ ವಯಸ್ಸಾದ ಮಹಿಳೆ ಎದ್ದು ಡ್ರೈವರ್ ಹತ್ತಿರ ನಡೆದು ಹೋದಳು. ಏನನ್ನೋ ಹೇಳೋಕೆ ಹೋದೋಳು ನಂತರ ಸಂಕೋಚ ಮಾಡಿಕೊಂಡು ಬಂದು ಕೂತಳು. ಪಕ್ಕದಲ್ಲಿ ಕೂತಿದ್ದ ಇನ್ನೊಬ್ಬಳಿಗೆ ಮತ್ತು ಹಿಂದಿನ ಮುಂದಿನ ಜಾಗಗಳಲ್ಲಿ ಕೂತಿದ್ದ ಇನ್ನಿತರ ಮಹಿಳೆಯರಿಗೆ ಮೆತ್ತಗೆ ಏನೋ ಹೇಳಿದಳು.

ಒಂದೈದು ಕಿಲೋಮೀಟರು ಬಸ್ಸು ಪ್ರಯಾಣ ಮಾಡಿರಬಹುದು. ಪ್ರಯಾಣಿಕರಿಗೆ ಯಾಕೋ ಬಸ್ಸು ತುಂಬಾ ನಿಧಾನವಾಗಿ ಹೋಗುತ್ತಿದೆ ಎನಿಸಿತು. ಡ್ರೈವರು ಬಸ್ಸು ಕೊಂಚವೂ ಕುಲುಕಾಡದಂತೆ ನಡೆಸುತ್ತಿದ್ದ. ಡ್ರೈವರು ಹೊಸಬ ಇರಬೇಕು, ಇಲ್ಲಾ ಬಸ್ಸು ಏನೋ ತೊಂದರೆಯಲ್ಲಿರಬೇಕು ಅಂದುಕೊಂಡರೂ ಕೆಲವು ನಿಮಿಷಗಳಾದ ಮೇಲೆ ಏನ್ರೀ ಈ ಬಸ್ಸು ಇಷ್ಟೇ ವೇಗವಾಗಿ ಹೋಗೋದಾ. ನಡಕೊಂಡು ಹೋಗಿದ್ರೆ ಇನ್ನೂ ಮುಂಚೆ ಹೋಗಬಹುದಾಗಿತ್ತಲ್ರೀ ಅಂತ ಗೊಣಗಿದ. ಇನ್ನೂ ಕೆಲವು ನಿಮಿಷಗಳಾದ ಮೇಲೆ ಈ ವೇಗದಲ್ಲಿ ಹೋದರೆ ನಾವು ತಿರುಮಲಪುರ ತಲುಪಿದ ಹಾಗೇ. ಅಲ್ರೀ ಚಿಕ್ಕ ಚಿಕ್ಕ ವಾಹನಗಳೆಲ್ಲಾ ನಿಮ್ಮ ಬಸ್ಸನ್ನು ದಾಟಿಕೊಂಡು ಹೋಗುತ್ತಿದ್ರೂ ನಿಮಗೆ ಏನೂ ಅನಿಸ್ತಿಲ್ವಾ ಓಡಿಸ್ರೀ ಬಸ್ನಾ ಬೇಗ ಅಂತ ಕಿರುಚಿದರು. ಡ್ರೈವರು ಮಾತ್ರ ಶಾಂತ ಸ್ವಭಾವದಿಂದ ನಿಧಾನವಾಗಿಯೇ ಬಸ್ಸು ಓಡಿಸುತ್ತಿದ್ದ. ಕೆಲವು ನಿಮಿಷಗಳಲ್ಲಿ ಅವನ ಮೊಬೈಲ್‌ನಿಂದ ದೇವರ ನಾಮಗಳು ಕೇಳಿಬಂದವು. ಇದು ಬೇರೆ ಕೇಡು ಅಂದುಕೊಂಡರು.

ಬಸ್ಸಿನಲ್ಲಿದ್ದವರೆಲ್ಲಾ ಎಷ್ಟೇ ಗಲಾಟೆ ಮಾಡಿದರೂ ಡ್ರೈವರು ಮಾತೂ ಆಡಲಿಲ್ಲ, ಬಸ್ಸನ್ನು ಜೋರಾಗಿ ಓಡಿಸಲೂ ಇಲ್ಲ.

ಇನ್ನೂ ಹತ್ತು ನಿಮಿಷ ಬಸ್ಸು ಚಲಿಸಿದ ಮೇಲೆ ಒಂದು ಮರದ ಹತ್ತಿರ ನಿಂತೇಬಿಟ್ಟಿತು. ದೊಡ್ಡ ಮರದ ಕೆಳಗೆ ತುಂಬಾ ನೆರಳು. ರೀ ಹೋಟೆಲ್ಲು ಇರೋ ಕಡೆ ನಿಲ್ಲಿಸಿದ್ರೆ ಕಾಫಿನಾದ್ರೂ ಕುಡೀಬಹುದಾಗಿತ್ತು. ಇದೇನಯ್ಯಾ ಇಲ್ಲಿ ನಿಲ್ಲಿಸಿದೆ ಅಂತ ಕೇಳಿದರು. ಆಗ ಡ್ರೈವರು ಬಾಯಿಬಿಟ್ಟ. ಬಸ್ಸು ಸ್ವಲ್ಪ ಹೀಟ್ ಆಗಿದೆ. ಹತ್ತು ನಿಮಿಷ ನಿಲ್ಲಿಸಿ ನಂತರ ಹೊರಡೋಣ. ಈಗ ನಾನೇ ಎಲ್ಲರಿಗೂ ಎಳನೀರು ಕೊಡಿಸ್ತೀನಿ ಕುಡೀರಿ ಅಂದು ಎಳನೀರಿನವನಿಗೆ ಬಸ್ಸಿನಲ್ಲಿ ಇರೋರಿಗೆಲ್ಲ ಎಳನೀರು ಕೊಡು ಅಂದ. ಎಲ್ಲರೂ ಖುಷಿಯಿಂದ ಎಳನೀರು ಕುಡಿದರು. ಮಹಿಳೆಯರಿಗಂತೂ ತುಂಬಾ ಸಂತಸವಾಯಿತು. ಏನಪ್ಪಾ ಇವತ್ತು ನಿನ್ನ ಹುಟ್ಟಿದ ಹಬ್ಬಾನಾ ಇಲ್ಲಾ ಮದುವೆಯಾದ ದಿನಾನಾ ಅಂತ ಯಾರು ಏನು ಕೇಳಿದರೂ ಡ್ರೈವರು ಏನೂ ಹೇಳಲಿಲ್ಲ. ಎಳನೀರಿಗೆ ಡ್ರೈವರೇ ದುಡ್ಡು ಕೊಡುತ್ತಿರುವಾಗ ಒಬ್ಬ ಇವತ್ತು ಕಮಾಯಿ ಹೆಚ್ಚಾಗಿರಬೇಕು ಸ್ವಲ್ಪನಾದರೂ ಪಾಪ ತೊಳ್ಕೊಳೋಕೆ ನಮಗೆಲ್ಲಾ ಎಳನೀರು ಕುಡಿಸಿದಾನೆ ಅಂತ ಮಾತಾಡಿಕೊಂಡರು.

ಯಾರು ಎಷ್ಟೇ ಕೂಗಾಡಿದರೂ ಕಿರುಚಾಡಿದರೂ ಡ್ರೈವರು ಮಾತ್ರ ತನ್ನ ಬಸ್ಸಿನ ವೇಗ ಹೆಚ್ಚು ಮಾಡಲಿಲ್ಲ. ಕಂಡಕ್ಟರೂ ಕೂಡಾ ಹೋಗಿ ಮಾತಾಡಿದ. ಒಂದೂವರೆ ಗಂಟೆ ಪ್ರಯಾಣಕ್ಕೆ ಎರಡೂವರೆ ಗಂಟೆಗೂ ಹೆಚ್ಚು ಕಾಲ ತಗೊಂಡು ಅಂತೂ ಇಂತೂ ಬಸ್ಸು ತಿರುಮಲಪುರಕ್ಕೆ ಬಂದು ನಿಂತಿತು. ಇಳಿದವರೆಲ್ಲಾ ಡ್ರೈವರನ್ನು ಬಯ್ಕೊಂಡು ಹೋದರು. ಕಡೆಗೆ ನಿಧಾನವಾಗಿ ಇಳಿದ ಆರೇಳು ಹೆಂಗಸರು ಡ್ರೈವರ್ ಬಳಿ ಬಂದು ಅಂತೂ ಕುಡಿದ ನೀರು ಅಲ್ಲಾಡಲಿಲ್ಲ ಅಂತಾರಲ್ಲ ಹಾಗೆ ನಮ್ಮನ್ನು ಕರ್ಕೊಂಡು ಬಂದೆ. ಜೊತೆಗೆ ನಮಗೆ ಎಳನೀರೂ ಕೊಡಿಸಿದೆ. ಇವರು ನಾಲ್ಕು ಜನ ಹೆಂಗಸರೂ ತುಂಬಿದ ಬಸಿರಿಯರು.. ಬಸ್ಸಿನ ಪ್ರಯಾಣ ಜೋಪಾನ ಅಂತ ಮನೇಲಿ ಹೇಳಿಕಳಿಸಿದ್ದರು. ನಾವು ಕಾರಿನಲ್ಲಿ ಬಂದಿದ್ದರೂ ಇಷ್ಟು ಸುರಕ್ಷಿತವಾಗಿ ಬರ್ತಿದ್ವೋ ಇಲ್ವೋ ಗೊತ್ತಿಲ್ಲ. ನಿನಗೆ ದೇವರು ಒಳ್ಳೇದು ಮಾಡ್ಲಪ್ಪ ಅಂದರು.

ಡ್ರೈವರು ಕಣ್ಣೊರೆಸಿಕೊಂಡು ಅಮ್ಮಾ ನೀವೆಲ್ಲಾ ಬಸ್ಸಿಗೆ ಹತ್ತುವಾಗಲೇ ನಾನು ಅಂದ್ಕೊಂಡೆ. ಈ ಸ್ಥಿತೀಲಿ ಇವರೆಲ್ಲಾ ಯಾಕೆ ಬಸ್ಸಿನ ಪ್ರಯಾಣ ಮಾಡ್ತಿದಾರೆ ಅಂತ. ಅದಿಕ್ಕೆ ನಿಮಗೆಲ್ಲಾ ಏನೂ ತೊಂದರೆ ಆಗದಿರಲಿ ಅಂತ ಬಸ್ಸನ್ನು ನಿಧಾನವಾಗಿ ಓಡಿಸಿಕೊಂಡು ಬಂದೆ. ನನಗೆ ಸಿಗದ ಸುಖ, ಸಂತೋಷ ನಿಮಗಾದರೂ ಸಿಗಲಿ ಅಂದ. ಒಬ್ಬ ಹೆಂಗಸು ಹಾಗಂದ್ರೇನಪ್ಪಾ ಅಂತ ಕೇಳಿದಳು. ನನ್ನ ಮಗಳೂ ಈಗ ಐದು ವರ್ಷದಿಂದ ಮೂರು ಸಾರಿ ಬಸಿರಿಯಾಗಿ ಮೂರು ಸಾರಿಯೂ ಬಸ್ಸಿನ ಪ್ರಯಾಣದಲ್ಲಿ ತನ್ನ ಗರ್ಭ ಕಳೆದುಕೊಂಡಳು. ಮೊದಲನೇ ಸಾರಿ ಏನೋ ಆಗಿಹೋಯ್ತು ಅಂದ್ರೆ ಎರಡನೇ ಸಾರಿಯೂ ಹಾಗೇ ಆಗೋದೇ. ಸರಿ ಮೂರನೇ ಸಾರಿ ಬಸ್ಸಿನ ಪ್ರಯಾಣವೇ ಬೇಡ ಕಾರಿನಲ್ಲಿ ಬರೋಣ ಅಂದರೆ ಹೇಳಿಕಳಿಸಿದ ಕಾರು ಬರಲೇ ಇಲ್ಲ. ಇನ್ನು ಬಸ್ಸಿನ ಪ್ರಯಾಣವೇ ಗತಿ ಅಂತ ಬಸ್ಸು ಹತ್ತಿದರಂತೆ. ಅವರು ಡ್ರೈವರನಿಗೆ ನೋಡಪ್ಪಾ ಒಬ್ಬಳು ಬಸಿರಿ ಬಸ್ಸು ಹತ್ತಿದಾಳೆ. ಬಸ್ಸನ್ನು


ಸ್ವಲ್ಪ ನಿಧಾನವಾಗಿ ಓಡಿಸು ಅಂತ ಕೇಳ್ಕೊಂಡಿದ್ಲಂತೆ. ಡ್ರೈವರು ಒಬ್ಬರಿಗೋಸ್ಕರ ಬಸ್ಸನ್ನು ನಿಧಾನವಾಗಿ ಓಡಿಸೋಕೆ ಆಗಲ್ಲ ಅಂತ ಖಾರವಾಗಿ ಹೇಳಿ ಎಂದಿಗಿಂತಲೂ ವೇಗವಾಗಿ ಓಡಿಸಿಕೊಂಡು ಬಂದನಂತೆ. ಹೀಗೆ ಅವಳು ಮೂರು ಸಾರಿ ತನ್ನ ಗರ್ಭ ಕಳೆದುಕೊಂಡಳು. ಇನ್ನು ಮುಂದೆ ನೋಡಬೇಕು. ಈಗ ನಾನು ಮಾಡಿದ ಪುಣ್ಯದ ಕೆಲಸದಿಂದಲಾದರೂ ಮುಂದೆ ನನ್ನ ಮಗಳಿಗೆ ಏನೂ ತೊಂದರಯಾಗದಿದ್ದರೆ ಸಾಕು ಅಂದು ಕಣ್ಣೊರೆಸಿಕೊಂಡ.

ಅವರೆಲ್ಲಾ ಡ್ರೈವರನಿಗೆ ನೋಡಪ್ಪಾ ಆ ದೇವರು ಒಳ್ಳೆಯವರಿಗೆ ಎಂದೂ ಮೋಸ ಮಾಡೋಲ್ಲ. ಆದರೆ ನಮಗೆ ಬರೋ ಒಳ್ಳೇ ಸಮಯಕ್ಕಾಗಿ ನಾವು ಕಾಯಬೇಕು. ನಿನ್ನ ಮಗಳಿಗೆ ಖಂಡಿತಾ ಒಳ್ಳೇದಾಗುತ್ತೆ. ಮುಂದೆ ಅವಳು ತಾಯಿ ಆಗ್ತಾಳೆ ನೀನು ತಾತ ಆಗ್ತೀಯ. ಅಂದು ಮನದುಂಬಿ ಹರಸಿ ಹೊರಟರು.

ಡ್ರೈವರು ಕಣ್ಣೊರೆಸಿಕೊಂಡು ಕಾಫಿ ಕುಡಿಯಲು ಬಸ್ ಸ್ಟಾಂಡ್ ಹೋಟೆಲಿಗೆ ಹೊರಟ.

✤

---




ನಮ್ಮ ಪಬ್ಲಿಸಿಟ್ ವಿಭಾಗದ ಐಡಿಯಾ ಅದು!

ಕ್ಯಾಮೆರಾ...ಆಕ್ಷನ್...ಕಟ್

# ನಟನೊಬ್ಬನ ಹೀರೋಗಿರಿ

**- ಎಂ.ಕೆ. ಭಾಸ್ಕರ ರಾವ್**

ನಗುವುದೋ ಅಳುವುದೋ ನೀವೇ ಹೇಳಿ ಎನ್ನುವುದು ರಾಜ್‌ಕುಮಾರ್ ಹಾಡಿರುವ ಜನಪ್ರಿಯ ಗೀತೆಗಳಲ್ಲಿ ಒಂದು. ಈಗ ಇಲ್ಲಿ ಹೇಳುತ್ತಿರುವ ಪ್ರಕರಣ ಅಂಥದೇ ಒಂದು. ನಾಯಕ ನಟನಾಗಿ ವಿಕಾಸಗೊಳ್ಳಬೇಕಿದ್ದ ಹೀರೋ ಒಬ್ಬ ಅಹಂಕಾರದಲ್ಲಿ ಮುಳುಗಿ ತೇಲಲಾಗದೆ ತೊಳಲಾಡುತ್ತಿರುವುದರ ಕಥೆ ಇದು.

**ಕಾಲ್‌ಶೀಟ್ ದರದ ಜತೆಗೆ ನಟನ ಪಿತ್ಥವೂ ನೆತ್ತಿಗೇರಿದಾಗ...**

ಸಿನಿಮಾಗಳಲ್ಲಿ ಹೀರೋ ಆಗುವುದೆಂದರೆ ಅದೊಂದು ರೀತಿಯಲ್ಲಿ ಅಫೀಮಿನ ಚಟಕ್ಕೆ ಬಿದ್ದಂತೆ. ತಾವು ಹೀರೋ ಆಗಿಯೇ ಉದ್ಯಮದಲ್ಲಿ ಮುಂದುವರಿಯಬೇಕು, ಇತರ ಪಾತ್ರ ತಮ್ಮ ಯೋಗ್ಯತೆಗೆ ಸಮನಾದುದಲ್ಲ ಎಂಬಿತ್ಯಾದಿ ಭ್ರಮೆಯಲ್ಲಿ ಅವರು ತೇಲಾಡುತ್ತಿರುತ್ತಾರೆ. ಉದ್ಯಮವೂ ಹೀರೋಗಳ ಕಾಲೊತ್ತುವ ಕೆಲಸವನ್ನು ಮಾಡುತ್ತಿರುತ್ತದೆ. ಇದು ಹೀರೋಗಳ ಆಟಾಟೋಪಕ್ಕೂ ಕಾರಣವಾಗಿಬಿಡುತ್ತದೆ. ದೊಡ್ಡ ಹೀರೋ ಆದ ಎಂದಾಕ್ಷಣದಲ್ಲೇ ಅವನ ಬೇಕು ಬೇಡಗಳು ಏಕಾಏಕಿ ಬದಲಾಗಿಬಿಡುತ್ತವೆ. ಅವನ ಬೆಳವಣಿಗೆ ನೋಡುತ್ತಾ ಬಂದವರು ಮುಸಿಮುಸಿ ನಗುವಂತೆ ಮಾಡುತ್ತದೆ.

ಈ ಲೇಖನದ ಹೀರೋ ಮಲೆನಾಡಿನಿಂದ ಬಂದ ಸುಂದರಾಂಗ. ಸುರಸುಂದರಾಂಗ ಎಂದರೂ ನಡೆಯುತ್ತದೆ. ಆತ ಅಭಿನಯಿಸಿದ ಮೊದಲ ಎರಡು ಮೂರು ಚಿತ್ರಗಳು ಕ್ಲಿಕ್ ಆದವು. ಸಹ ನಟನಾಗಿದ್ದ ಆತನ ಅಭಿನಯ ಮೆಚ್ಚುಗೆಗೆ ಪಾತ್ರವಾಗಿದ್ದೇ ತಡ, ಹೀರೋಗಿರಿಗೆ ಬಡ್ತಿ ದೊರೆಯಿತು. ಆತ ಹೀರೋ ಆಗಿ ಅಭಿನಯಿಸಿದ ಎರಡು-ಮೂರು ಸಿನಿಮಾಗಳು ಗಳಿಕೆಯಲ್ಲಿ ಆ ಸಂದರ್ಭದ ಸೂಪರ್ ಸ್ಟಾರ್‌ಗಳ ಚಿತ್ರಗಳನ್ನೂ ಮೀರಿಸಿದ್ದು ಸುಳ್ಳಲ್ಲ.

ಕನ್ನಡದಲ್ಲಿ ಬಹುತೇಕ ಹೀರೋಗಳು ಕೈಗೆಟುಕದ ಬೆಲೆಯ ಕಾಲ್‌ಶೀಟ್ ನವರಾದುದ್ದರಿಂದ ಮತ್ತೊಬ್ಬ ಹೀರೋನ ಆಗಮನ ಉದ್ಯಮದಲ್ಲಿ ಅನೇಕ ನಿರ್ಮಾಪಕರಿಗೆ ಹರ್ಷದ ಸುದ್ದಿಯಾಯಿತು. ಎರಡು ಮೂರು ಹಿಟ್ ಚಿತ್ರ ಕೊಟ್ಟಾತ ಎಂಬ ಕಾರಣಕ್ಕೆ ಅವರ ಮನೆಯ ಮುಂದೆ ನಿರ್ಮಾಪಕರ ಸಾಲೂ ಹಚ್ಚಿತು. ಈ ಬೆಳವಣಿಗೆ ಆ ನಟನ ಸಾಮಾಜಿಕ ಸ್ಥಾನಮಾನ ಹೆಚ್ಚಿಸಿತು. ಆತ ಬಾಡಿಗೆಗೆ ಇದ್ದ ಬಡಾವಣೆಯಲ್ಲೆಲ್ಲ ಆತನದೇ ಗುಣಗಾನ. ಅವರಲ್ಲಿ ಯಾರೊಬ್ಬರಿಗೂ ಆತನ ಅವಗುಣ ಗೊತ್ತಿಲ್ಲವಲ್ಲ ಹಾಗಾಗಿ ಗುಣಗಾನ!

ಒಂದೆರಡು ಮೂರು ಜನ ಹೀರೋಯಿನ್‌ಗಳೂ ಅವನ ಮನೆಗೆ ಎಡತಾಕಿ ಛಾನ್ಸ್

ಕೊಡಿಸಲು ದುಂಬಾಲು ಬಿದ್ದ ಬಳಿಕವಂತೂ ಆತನ ಅಪ್ಪ ಅಮ್ಮನಿಗೆ ಕೂಡಾ ಮಗ ಆಕಾಶಕ್ಕೆ ಏಣಿ ಹಾಕಿರುವುದು ಖಚಿತವಾಯಿತು. ಒಂದೇ ವರ್ಷದಲ್ಲಿ ಆತ ಏಳೋ ಎಂಟೋ ಚಿತ್ರಗಳಿಗೆ ಹೀರೋ ಆಗಿ ಬುಕ್ ಆದ. ಪಡೆದ ಮುಂಗಡ ಹಣದಲ್ಲಿ ತಾನಿದ್ದ ಬಡಾವಣೆಯಲ್ಲೇ ಐಷಾರಾಮೀ ಬಂಗಲೆ ಖರೀದಿಸಿದ. ಆ ಅಂತಸ್ತಿಗೆ ತಕ್ಕುದಾದ ಕಾರೂ ಬಂದು ಪೋರ್ಟಿಕೋದಲ್ಲಿ ನಿಂತಿತು.

ಈ ಮಧ್ಯೆ ನಟನ ಹೆಸರು ನಾಯಕ ನಟಿಯೊಬ್ಬಳ ಹೆಸರಿನೊಂದಿಗೆ ತಳಕು ಹಾಕಿಕೊಂಡಿತು. ಅದು ರಸಗವಳದಂಥ ಸುದ್ದಿ. ಅವರು ಪ್ರೇಮಿಸುತ್ತಿದ್ದರೋ ಇಲ್ಲವೋ ಖಚಿತವಾಗಿ ಯಾರಿಗೂ ಗೊತ್ತಿರಲಿಲ್ಲ, ಅವರಂತೂ ಹೇಳಲಿಲ್ಲ. ಆದರೆ ಆ ಸುದ್ದಿ ಕಾರಣವಾಗಿ ಆ ನಾಯಕ ನಾಯಕಿ ಇದ್ದ ಚಿತ್ರವೊಂದು ಸೆಟ್ಟೇರಿತು. ಇಬ್ಬರದೂ ಕಾಲ್‌ಶೀಟ್ ದರವೂ ಏರಿತು. ಇದೆಲ್ಲ ಆಗುವ ಹೊತ್ತಿಗೆ ನಟನ ಪಿತ್ಥ ನೆತ್ತಿಗೇರಿತ್ತು. ಸಾಮಾನ್ಯವಾಗಿ ನಾಯಕಿಯರಿಗೆ ಫ್ರೆಂಡ್, ಫಿಲಾಸಫರ್, ಗೈಡ್ ಆಗಿ ಅವರಮ್ಮ ಇರುತ್ತಾರೆ. ಈ ನಟ ಶೇಖರನಿಗೆ ಅವನ ಅಪ್ಪನೇ ಕಾರ್ಯದರ್ಶಿಯಾದ. ಯಾರೇ ನಿರ್ಮಾಪಕರು ನಟನನ್ನು ಯಾವುದೇ ಕಾರಣಕ್ಕೆ ಭೇಟಿ ಮಾಡುವುದಿದ್ದರೂ ಅಪ್ಪನ ಮೂಲಕವೇ ಸಂಪರ್ಕಿಸಬೇಕಾಯಿತು.

ಚಿತ್ರರಂಗದಲ್ಲಿ ಇವೆಲ್ಲ ಇದ್ದಿದ್ದೇ. ಎಷ್ಟೋ ನಾಯಕ ನಟರ ಪಾಲಿಗೆ ಅವರ ಪತ್ನಿಯೇ ಕಾರ್ಯದರ್ಶಿ ಆಗಿರುತ್ತಾರೆ. ಅದಕ್ಕಿಂತ ಇದು ಎಷ್ಟೋ ವಾಸಿ ಎನ್ನುವುದು ಬಲ್ಲವರ ಅಂಬೋಣ. ನಟನ ಸಿನಿಮಾ ಬದುಕು ಅವನ ಜೀವನ ಶೈಲಿಯನ್ನು ಬದಲಿಸಿಬಿಟ್ಟಿತು. ಈಗಾಗಲೇ ಅರ್ಧಂಬರ್ಧ ನಿರ್ಮಾಣವಾಗಿದ್ದ ಚಿತ್ರಗಳ ಚಿತ್ರೀಕರಣ ಚೆನ್ನಾಗಿಲ್ಲ ಎಂದು ಹೀರೋಗೆ ಅನ್ನಿಸಲಾರಂಭವಾಯಿತು. ಅವನ ಗೆಳತಿಯ ಉಪದೇಶವೋ, ಅಪ್ಪನ ಮಾರ್ಗದರ್ಶನವೋ ಅಥವಾ ಹೀರೋನ ಸ್ವಂತ ತೀರ್ಮಾನವೋ ಗೊತ್ತಿಲ್ಲ.

ಒಬ್ಬೊಬ್ಬರಾಗಿ ನಿರ್ಮಾಪಕ ನಿರ್ದೇಶಕರನ್ನು ಹೀರೋ ಬರಮಾಡಿಕೊಂಡ. ಅದರಲ್ಲಿ ಕೆಲವರ ಚಿತ್ರ ಅರ್ಧ ಭಾಗ ಚಿತ್ರೀಕರಣವಾಗಿದ್ದರೆ ಇನ್ನು ಕೆಲವು ಕಾಲು ಭಾಗ... ಹೀಗೆ, ನೋಡಿ ಸಿನಿಮಾದಲ್ಲಿ ನನಗೆ ಹೊಲಿಸಿರುವ ಸೂಟು, ಡಿಸೈನರ್ ಸೂಟಾಗಲ್ಲ ಅದು ಬದಲಾಗದಿದ್ದರೆ ಮುಂದೆ ಶೂಟಿಂಗ್ ಕಷ್ಟವಾಗಬಹುದು ಎಂಬ ಬೆದರಿಕೆ ಮುಂದಿಟ್ಟ. ಆ ಶೂಟಿಂಗ್ ಮುಗಿದು ಹೋಗಿದೆ, ಈಗ ಪುನಃ ರೀಶೂಟ್ ಮಾಡಬೇಕೆಂದರೆ 30-40 ಲಕ್ಷ ಖರ್ಚಾಗುತ್ತದೆಂದ ನಿರ್ಮಾಪಕರನ್ನು ಕೆಕ್ಕರಿಸಿ ನೋಡಿದ. ಒಬ್ಬೊಬ್ಬರೂ ನಿರ್ಮಾಪಕರಿಗೆ ಒಂದೊಂದು ತಲೆನೋವು ತಂದಿಟ್ಟ.

ನಿರ್ದೇಶಕರೂ ಆಗಿರುವ ಒಬ್ಬ ನಿರ್ಮಾಪಕರ ಅರ್ಧವಾಗಿದ್ದ ತನ್ನ ಸಿನಿಮಾ ಯೋಜನೆಯನ್ನೇ ಈ ಕಿರಿಕಿರಿಗಾಗಿ ಕೈಬಿಟ್ಟ. ಅನೇಕ ನಿರ್ಮಾಪಕರು ಸಾಲಸೋಲ ಮಾಡಿರುತ್ತಾರೆ. ಅದು ಈ ನಟನ ತಲೆನೋವು ಆಗಲಿಲ್ಲ. ಈ ಮಧ್ಯೆ ಹಿಂದಿಯಲ್ಲಿ ನಟಿಸಲು ಹೋದ ಈ ನಟ. ಆ ಸಿನಿಮಾ ಬಂತೇನೋ ಖರೆ, ಬಂತು ಎನ್ನುವಷ್ಟರಲ್ಲಿ

ಹೋಗಿಯಾಗಿತ್ತು. ಎಲ್ಲಿ ಆ ಸಿನಿಮಾ ಕಾಣದಂತೆ ಮಾಯವಾಯಿತಲ್ಲ ಎಂದು ಸಂಕಷ್ಟಕ್ಕೆ ಒಳಗಾದ ನಿರ್ಮಾಪಕರು ಒಳಗೊಳಗೇ ಸುಖಿಸಿದರು. ತಾನು ಹಿಂದಿಯಲ್ಲಿ ಬೆಳಗಿ ಬರುವ ಛಾತಿಯುಳ್ಳಾತ ಎಂದು ಆ ನಟ ಭ್ರಮಿಸಿದ್ದು ಸುಳ್ಳಾಗಿರಲಿಲ್ಲ.

ರಜನೀಕಾಂತ್ ತಮಿಳಿನಲ್ಲಿ ಸೂಪರ್ ಸ್ಟಾರ್ ಆಗಬಹುದಾದರೆ ತಾನೇಕೆ ಆಗುವುದಿಲ್ಲ ಎಂದು ಅಡ್ಡಬಿದ್ದ. ಗೇಣು ಹಾರದವನು ಮಾರು ಹಾರಿಯಾನೇ ಎಂದು ಕನ್ನಡ ಚಿತ್ರೋದ್ಯಮ ಬಲ್ಲವರು ಆಡಿಕೊಂಡರು. ಈಗ ಈ ನಟನ ಕೈಯಲ್ಲಿ ಒಂದೂ ಹೊಸ ಸಿನಿಮಾ ಇಲ್ಲ. ಅರ್ಧಂಬರ್ಧ ಆಗಿರುವ ಸಿನಿಮಾಗಳನ್ನು ಮತ್ತೆ ಶುರು ಮಾಡಿ ಎನ್ನಲು ಮುಖವಿಲ್ಲ. ದಿನವೂ ಶೇವ್ ಮಾಡುತ್ತ ಅದು ಬೋರ್ ಎನಿಸಿದಾಗ ಗಡ್ಡ ಬಿಡುತ್ತ ಅದನ್ನೇ ಅಮಾವಾಸ್ಯೆ ಹುಣ್ಣಿಮೆ ಮಾಡುತ್ತ ಕುಳಿತಿರುವ ಈ ನಟ ಈಗ ಅವಕಾಶ ಬಂದು ಬಾಗಿಲು ತಟ್ಟೀತೇ ಎಂದು ಕಾದು ಕುಳಿತಿದ್ದಾನೆ.

✤




ಒಂದು ಆದಿ ಮಾನವ ಸಂವಾದ!

"ಇದೇನೋ ಒಂದು ವಿಚಿತ್ರ! ನಮ್ಮ ಗಾಳಿ ಶುದ್ಧವಾಗಿದೆ, ನಮ್ಮ ನದಿಗಳು ಶುಭ್ರವಾಗಿವೆ, ನಾವೆಲ್ಲಾ ಬೇಕಾದಷ್ಟು ವ್ಯಾಯಾಮ ಮಾಡ್ತೇವೆ. ನಮ್ಮ ಆಹಾರಾ ಎಲ್ಲಾ ಆರ್ಗ್ಯಾನಿಕ್. ಎಲ್ಲ ಹೀಗಿದ್ರೂ ಯಾರೂ ಮೂವತ್ತು ವರ್ಷ ಮೀರಿ ಬದುಕೋದೇ ಇಲ್ಲಲ್ಲಾ!"